## ಮಂಗಳವಾರ, ೨೯ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಒಕ್ಕೂಟದ ಸಂವಿಧಾನ ಸಮಿತಿಯ ವರದಿ

### ಖಂಡ – ೧೮

**ಮಾನ್ಯ ಸಭಾಧ್ಯಕ್ಷರು :** ನಿನ್ನೆ ನಾವು ೧೮ನೇ ಖಂಡವನ್ನು ಕುರಿತು ಪರಿಶೀಲಿಸುತ್ತಿದ್ದೆವು. ಕೆಲವು ತಿದ್ದುಪಡಿಗಳನ್ನು ಪ್ರಸ್ತಾವಿಸಲಾಯಿತು. ಮತ್ತೆ ಕೆಲ ತಿದ್ದುಪಡಿಗಳು ಪ್ರಸ್ತಾವಕ್ಕೆ ಬರಲಿಲ್ಲ. ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ಒಂದು ತಿದ್ದುಪಡಿ ಇದೆ. ತಾವು ಅದನ್ನು ಈಗ ತೆಗೆದುಕೊಳ್ಳುತ್ತೀರಾ?

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ನಾವು ಇಂದಿನ ಕಲಾಪವನ್ನು ಪ್ರಾರಂಭಿಸುವ ಮುನ್ನ, ರಾಷ್ಟ್ರಧ್ವಜವನ್ನು ಅಂಗೀಕರಿಸಿದ ಅನಂತರ ನಮ್ಮ ರಾಷ್ಟ್ರಗೀತೆಯನ್ನು ಸಹ ತೀರ್ಮಾನಿಸಬೇಕು. ತಮ್ಮ ಅಂತರ್ಗತ ಅಧಿಕಾರವನ್ನು ಚಲಾಯಿಸಿ, ಧ್ವಜಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿದೆವು. ಅಂತಹುದೇ ಒಂದು ತಾತ್ಕಾಲಿಕ ಸಮಿತಿಯನ್ನು, ನಮ್ಮ ರಾಷ್ಟ್ರಗೀತೆಯ ವಿಷಯದ ಇತ್ಯರ್ಥಕ್ಕೆ ತ್ವರಿತ ನಿರ್ಧಾರ ಕೈಗೊಳ್ಳಲು ತಾವು ರಚಿಸುತ್ತೀರಾ?

**ಮಾನ್ಯ ಸಭಾಧ್ಯಕ್ಷರು :** ನಾನು ಆ ವಿಷಯವನ್ನು ಪರಿಶೀಲಿಸುತ್ತಿದ್ದೇನೆ. ಆದರೆ ಅದನ್ನು ನಾನಿನ್ನೂ ಗೊತ್ತುಪಡಿಸಲು ಸಾಧ್ಯವಾಗಿಲ್ಲ. ರಾಷ್ಟ್ರಗೀತೆಗೆ ರಾಷ್ಟ್ರಧ್ವಜದ ನಿರ್ಧಾರಕ್ಕಿಂತ ಹೆಚ್ಚು ಕಾಲ ಹಿಡಿಯುತ್ತದೆ. ನಾವು ಅದರ ಬಗ್ಗೆ ಅವಸರಪಡಬಾರದು. ಆದುದರಿಂದ ನಾನೇ ಇನ್ನೂ ಅವಸರಪಟ್ಟಿಲ್ಲ. ೨ನೇ ಪೂರಕ ಪಟ್ಟಿಯಲ್ಲಿ ೧೫ನೇ ಸಂಖ್ಯೆಯ ತಿದ್ದುಪಡಿಯನ್ನು ಈಗ ನಾವು ಪರಾಮರ್ಶಿಸೋಣ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸು : ಸಾಮಾನ್ಯ) : ಶ್ರೀಮತಿ ದುರ್ಗಾಬಾಯಿ ಈಗಾಗಲೆ ಅದನ್ನು ಮಂಡಿಸಿದ್ದಾರೆ.

**ಮಾನ್ಯ ಸಭಾಧ್ಯಕ್ಷರು :** ಸರ್ ಅಲ್ಲಾದಿ ಅವರದು ಒಂದು ತಿದ್ದುಪಡಿ ಇದೆ. ಅದನ್ನು ತೆಗೆದುಕೊಳ್ಳುತ್ತೀರಾ?

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ ನಾನು ಕೆಳಕಂಡ ತಿದ್ದುಪಡಿಯನ್ನು ಮಂಡಿಸಲು ಅನುಮತಿ ಕೋರುತ್ತೇನೆ :

"೪ನೇ ಅಧ್ಯಾಯದ ೧೮ನೇ ಖಂಡಕ್ಕೆ ಬದಲಾಗಿ ಕೆಳಕಂಡಂತೆ ಪ್ರತಿಯೋಜಿಸಬೇಕು:

'೧೮. ಸರ್ವೋಚ್ಚ ನ್ಯಾಯಾಲಯ–ಕೆಳಕಂಡ ಪರಿಷ್ಕರಣೆ ಮತ್ತು ನಿಬಂಧನೆಗಳಿಗೆ ಬದ್ಧವಾಗಿ ಒಕ್ಕೂಟದ ನ್ಯಾಯಾಂಗದ ತಾತ್ಕಾಲಿಕ ಸಮಿತಿಯ ಶಿಫಾರಸಿನಂತೆ ಸರ್ವೋಚ್ಚ ನ್ಯಾಯಾಲಯವೊಂದು ಸ್ಥಾಪನೆಯಾಗಬೇಕು.

(೧) (ಎ) ರಾಷ್ಟ್ರಪತಿಗಳು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತಿತರ ನ್ಯಾಯಾಧೀಶರು ಮತ್ತು ಈ ಉದ್ದೇಶಕ್ಕಾಗಿ ಅಗತ್ಯವಿದ್ದರೆ ಉಚ್ಚನ್ಯಾಯಾಲಯದ ನ್ಯಾಯಾಧೀಶರೊಡನೆ ಸಮಾಲೋಚಿಸಿ ಸರ್ವೋಚ್ಚ

ನ್ಯಾಯಾಲಯದ ಓರ್ವ ನ್ಯಾಯಾಧೀಶರನ್ನು ನೇಮಿಸಬೇಕು.

ಬಿ) ಸಮಿತಿಯ ವರದಿಯ ೧೫ನೇ ಕಂಡಿಕೆಯ ಎರಡನೇ ವಾಕ್ಯಕ್ಕೆ ಬದಲಾಗಿ ಕೆಳಕಂಡಂತೆ ಪ್ರತಿಯೋಜಿಸಬೇಕು. 'ಅವರ ವೇತನ, ಶಾಸನದಿಂದ ಮಂಜೂರಾಗಬೇಕು.

ಸಿ) ಸರ್ವೋಚ್ಚ ನ್ಯಾಯಾಧೀಶರ ಉಚ್ಚಾಟನೆಗೆ ಕೆಳಕಂಡಂತೆ ಉಪಬಂಧ ರಚಿಸಬೇಕು:

"ರಾಷ್ಟ್ರಪತಿಗಳ ಹೊರತು ಬೇರಾರೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಉಚ್ಚಾಟಿಸುವಂತಿಲ್ಲ. ಅಸಭ್ಯ ವರ್ತನೆ ಅಥವಾ ಅಸಾಮರ್ಥ್ಯದ ರುಜುವಾತಿನ ಆಧಾರದ ಮೇಲೆ ಒಕ್ಕೂಟದ ಸಂಸತ್ತಿನ ಉಭಯ ಸದನಗಳ ಮನವಿಯಂತೆ ಸಂಯುಕ್ತ ಅಧಿವೇಶನದ ವೇಳೆಯಲ್ಲಿ ಅವರ ಉಚ್ಚಾಟನೆಯಾಗಬೇಕು ಮತ್ತು ಈ ವಿಷಯಕ್ಕೆ ಸಂಬಂಧಿಸಿದ ಪ್ರಕ್ರಿಯೆಗೆ ಸಮ್ಮಿಶ್ರ ಕಾನೂನಿನಲ್ಲಿ ಉಪಬಂಧವನ್ನು ಸೇರಿಸಬೇಕು."

ಮಾನ್ಯರೆ, ನಾನಿಲ್ಲಿ ತಿಳಿಸಬಹುದಾದರೆ, ಶ್ರೀ ಕೆ. ಸಂತಾನಮ್ ಅವರ ಇತರ ಕೆಲವು ತಿದ್ದುಪಡಿಗಳಿವೆ. ಅವರ ಕೆಲ ತಿದ್ದುಪಡಿಗಳು ಒಂದರ ಮೇಲೊಂದು ಸವಾರಿ ಮಾಡುತ್ತವೆ. ಆದರೆ ಈ ತಿದ್ದುಪಡಿಗಳನ್ನು ಕುರಿತಂತೆ ನನ್ನ ನಿಲುವನ್ನು ತಿಳಿಸಲು ಬಯಸುತ್ತೇನೆ. ಅವರು ಮಂಡಿಸಿರುವ ತಿದ್ದುಪಡಿ ನನ್ನವಕ್ಕಿಂತ ಹೆಚ್ಚು ವ್ಯಾಪಕವಾಗಿದ್ದರೆ ನಾನು ನನ್ನದನ್ನು ಸಂತೋಷದಿಂದ ವಾಪಸು ಪಡೆಯುವೆ. ಒಂದು ವಿಷಯವನ್ನು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಸರ್ವೋಚ್ಚ ನ್ಯಾಯಾಲಯದ ವಿಷಯದಲ್ಲಿ ವಿವರಪೂರ್ಣ ಉಪಬಂಧವನ್ನು ರಚಿಸುವುದು ನಮ್ಮ ಗುರಿಯಲ್ಲ. ಪ್ರತಿಯೊಂದು ಸಂವಿಧಾನದಲ್ಲೂ ಅಳವಡಿಸಲಾಗುವ ಸಾಮಾನ್ಯ ಪ್ರಕ್ರಿಯೆ ಎಂದರೆ ಪ್ರಮುಖ ಅಧಿಕಾರಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ವಹಿಸಿಕೊಡುವುದು ಮತ್ತು ಅದನ್ನು ನ್ಯಾಯಾಂಗ ಅಧಿನಿಯಮಕ್ಕೆ ಬಿಡುವುದು. ಈ ಅಧಿನಿಯಮ ಸಂವಿಧಾನದ ಅಡಿಯಲ್ಲಿ ವಹಿಸಿಕೊಡುವ ಅಧಿಕಾರಗಳ ಚಲಾವಣೆಗಾಗಿ ಸಭೆಯು ಅಂಗೀಕರಿಸಿ ಜಾರಿಗೆ ತರುವಂತಹುದು. ಈಗಿರುವಂತೆಯೇ ಎಲ್ಲ ಉಪಬಂಧಗಳನ್ನೂ ಸಂವಿಧಾನದಲ್ಲಿ ಸೇರಿಸಲಾಗದು. ಮೂಲ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ ಯಾವ ಯಾವ ಅಧಿಕಾರಗಳು ಬಹುಮುಖ್ಯವಾಗುತ್ತವೆ ಎಂಬುದನ್ನು ಸೂಚಿಸಬಹುದು. ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಗೆ ಆಧಾರವೇನೆಂಬುದನ್ನು ಸೂಚಿಸಬಹುದು. ೧೯೩೫ರ ಸಂವಿಧಾನ ಅಧಿನಿಯಮದಲ್ಲಿ ವಿವರಪೂರ್ಣ ಉಪಬಂಧಗಳೇಕೆ ಇದ್ದವೆಂಬುದಕ್ಕೆ ಕಾರಣ ಸುಸ್ಪಷ್ಟ. ಏಕೆಂದರೆ ಅಂದಿನ ಸಂವಿಧಾನಕ್ಕೆ ಕೆಲವು ನಿಯಂತ್ರಿತ ಅಧಿಕಾರಗಳನ್ನು ಸಮ್ಮಿಶ್ರ ನ್ಯಾಯಾಲಯಕ್ಕೆ ಕೊಡಬೇಕೆಂಬ ಉದ್ದೇಶವಿತ್ತು. ಎರಡನೆಯದಾಗಿ ಭಾರತೀಯ ಶಾಸನಸಭೆಗೆ ಸಂಪೂರ್ಣ ಅಧಿಕಾರದ ಶ್ರೀರಕ್ಷೆ ಇರಲಿಲ್ಲ. ಆದುದರಿಂದ ಇತರ ಮಹಾಸಭೆಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನದಲ್ಲಿ ಕಾಣಬರುವುದಕ್ಕಿಂತ ಹೆಚ್ಚಿನ ವಿಸ್ತೃತ ಅಧಿಕಾರವನ್ನು ಸಮ್ಮಿಶ್ರ ನ್ಯಾಯಾಲಯಕ್ಕೆ ಸಂಸತ್ತು ಒದಗಿಸಿತು. ಆದುದರಿಂದ ಇಂತಹ ಸನ್ನಿವೇಶಗಳಲ್ಲಿ ಈಗ ಅಸ್ತಿತ್ವದಲ್ಲಿರುವ ಭಾರತ ಸರ್ಕಾರದ ಅಧಿನಿಯಮದಲ್ಲಿ ಉಲ್ಲೇಖಿಸಿದಂತೆ ಸಮಿತಿಯು ಅಧಿಕಾರ ವ್ಯಾಪ್ತಿಯ ಖಚಿತ ಸೀಮಾರೇಖೆಗಳನ್ನು ಸೂಚಿಸಿದೆ. ಮೂಲ ಅಧಿಕಾರ ವ್ಯಾಪ್ತಿಯಲ್ಲಿ ಚಲಾಯಿಸಬಹುದಾದ ಅಧಿಕಾರ ಹಾಗೂ ನ್ಯಾಯಾಧಿಕರಣದ ವಿಷಯದಲ್ಲಿ ಚಲಾಯಿಸಬಹುದಾದ ಅಧಿಕಾರ, ಎಲ್ಲವನ್ನೂ ಸಮಿತಿಯ ವರದಿಯಲ್ಲಿ ಸೂಚಿಸಲಾಗಿದೆ. ಸಮಿತಿಯ ವರದಿಯು ತಕ್ಕಮಟ್ಟಿಗೆ ವ್ಯಾಪಕವಾಗಿದೆ ಉದಾಹರಣೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಪೂರಕ ನ್ಯಾಯಾಧಿಕಾರ ವಹಿಸಿಕೊಡಬಹುದೆ ಬೇಡವೆ ಎಂಬ ವಿಷಯವನ್ನು ಪ್ರಸ್ತಾವಿಸಲಾಗಿದೆ. ಅದನ್ನು ಮತ್ತೆ ಸಮಿತಿಯ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದುದರಿಂದ ಮುಂದಿನ ಒಕ್ಕೂಟದ ಶಾಸನ ಸಭೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮೇಲೆ ಪೂರಕ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುವುದಕ್ಕೆ ಯಾವುದೇ ತಡೆ ಇರಲಾರದು. ಅದು ಸಕ್ಷಮವಾಗಿರುತ್ತದೆ. ಸಂವಿಧಾನದ ಅಧಿನಿಯಮದಲ್ಲಿ ಪ್ರಮುಖ ಅಧಿಕಾರ ವ್ಯಾಪ್ತಿಯ ಶೀರ್ಷಿಕೆಗಳು ಸೂಚಿಸಲ್ಪಡುತ್ತವೆ. ಮತ್ತೆ ರಾಜ್ಯಗಳು ಪರಿಶೀಲನೆಗೆ ತೆಗೆದುಕೊಳ್ಳಬಹುದಾದ ವಿಷಯಗಳನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇಂತಹ ಸನ್ನಿವೇಶಗಳಲ್ಲಿ ಈ ಉಪಬಂಧ ಸಮರ್ಪಕವಾಗಿದೆ

ಎಂದು ಭಾವಿಸುತ್ತೇನೆ. ಅನಂತರ ೧೯೩೫ರ ಸಂವಿಧಾನದ ಅಡಿಯಲ್ಲಿ ನ್ಯಾಯಾಧೀಶರ ಉಚ್ಚಾಟನೆಯ ವಿಷಯಕ್ಕೆ ಸಂಬಂಧಿಸಿದಂತೆ ಮಂಡಲಿಯಲ್ಲಿ ಮಹಾಪ್ರಭುಗಳಿಗೆ ಉಚ್ಚಾಟನೆಯ ಅಧಿಕಾರವನ್ನು ವಹಿಸಿಕೊಡಲಾಗಿತ್ತು. ಆಗ ಮಹಾಪ್ರಭುಗಳಿಗೆ ನ್ಯಾಯಮಂಡಳಿಯ ಅಧಿಕಾರವಿತ್ತು. ಆದುದರಿಂದ ಅದು ೧೯೩೫ನೇ ಇಸವಿಯ ಅಧಿನಿಯಮದ ಆಧಾರವಾಗಿತ್ತು. ಅಸಭ್ಯ ವರ್ತನೆಯ ಪ್ರಕರಣದಲ್ಲಿ ಮಹಾಪ್ರಭುಗಳಿಗೆ ಅಧಿಕಾರ ವ್ಯಾಪ್ತಿಯ ಶ್ರೀರಕ್ಷೆ ಇತ್ತು. ಅದನ್ನು ಚಲಾಯಿಸಿ ಸಮ್ಮಿಶ್ರ ನ್ಯಾಯಾಲಯದ ಅಥವಾ ಉಚ್ಚನ್ಯಾಯಾಲಯಗಳ ನ್ಯಾಯಾಧೀಶರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದಾಗಿತ್ತು. ಪ್ರಸ್ತುತ ಸಂವಿಧಾನದಲ್ಲಿ ಕೆಲವರು ಸಲಹೆ ನೀಡುತ್ತಿದ್ದಾರೆ. ಒಕ್ಕೂಟದ ಅಧ್ಯಕ್ಷರು ಕೆಲವು ಮಂಡಲಿಯ ಸದಸ್ಯರು ಅಥವಾ ನ್ಯಾಯಾಧೀಶರ ಸಮಿತಿಯ ಸಲಹೆಯ ಮೇರೆಗೆ ಉಚ್ಚಾಟನಾಧಿಕಾರವನ್ನು ಹೊಂದಿರಬೇಕು ಎಂದು ಸೂಚಿಸಿದ್ದಾರೆ. ಅದು ಸದನದ ಅಂಗೀಕಾರವನ್ನು ಪಡೆಯಲಾರದೆಂಬುದನ್ನು ನಿವೇದಿಸಲು ಇಷ್ಟಪಡುತ್ತೇನೆ. ಅದು ನ್ಯಾಯಾಂಗದ ವರಿಷ್ಠ ಗಣ್ಯರನ್ನು ಎಂದರೆ ಮುಖ್ಯ ನ್ಯಾಯಾಧೀಶರು ಅಥವಾ ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶರುಗಳನ್ನು ಭಾರತೀಯ ನಾಗರಿಕ ಸೇವಾ ಸದಸ್ಯರ ಮಟ್ಟಕ್ಕೆ ಇಳಿಸಿದಂತೆ ಆಗುತ್ತದೆ. ಭಾರತದ ಮುಖ್ಯ ನ್ಯಾಯಾಧೀಶರು ಅಥವಾ ಪ್ರಾಂತೀಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ನಡವಳಿಕೆಯ ಬಗೆ ವಿಚಾರಿಸಲು ರಾಷ್ಟ್ರಪತಿಗಳು ಕೆಲವು ನ್ಯಾಯಾಧೀಶರ ವಿಶೇಷ ಆಯೋಗವನ್ನು ರಚಿಸಿದರೆನ್ನೋಣ. ಇದು ಸದನದ ಅನುಮೋದನೆ ಗಳಿಸಲಾರದೆಂದು ತಿಳಿದಿದ್ದೇನೆ. ಸಂಸತ್ತಿನ ಉಭಯ ಸದನಗಳ ಕೋರಿಕೆಯ ಮೇರೆಗೆ ರಾಷ್ಟ್ರಪತಿಗಳು ಅದೇ ಅಧಿವೇಶನದಲ್ಲಿ ಉಚ್ಚಾಟಿಸುವ ಅಧಿಕಾರ ಹೊಂದಿರುವರೆ ಹೊರತು ಬೇರಾರಿಗೂ ಅಧಿಕಾರವಿಲ್ಲ ಎಂಬ ನಿರ್ದಿಷ್ಟ ಉಪಬಂಧವನ್ನು ನಾನು ಸೇರಿಸಿದ್ದೇನೆ. ಇದು ಬ್ರಿಟಿಷ್ ಕಾಮನ್‌ವೆಲ್ತ್‌ನ ಹಲವಾರು ಅಧಿವೇಶನಗಳ ಉಪಬಂಧದ ಮಾದರಿಯೇ ಇದೆ. ಆಸ್ಟ್ರೇಲಿಯಾ, ಕೆನಡ, ದಕ್ಷಿಣ ಆಫ್ರಿಕಾದಲ್ಲಿ ಇಂತಹುದೆ ಒಂದು ಉಪಬಂಧವು ಜಾರಿಯಲ್ಲಿದೆ. ಅಂತೆಯೇ ಇಂಗ್ಲೆಂಡ್‌ನಲ್ಲಿ ಕಂದಾಯ ನಿರ್ಧಾರಣಾ ಅಧಿನಿಯಮದ ಅನುಷ್ಠಾನ ಜಾರಿಗೆ ಬಂದ ದಿನಾಂಕದಿಂದ ಉಭಯ ಸದನಗಳ ನಿರ್ಣಯದಿಂದ ಮಾತ್ರವೆ ನ್ಯಾಯಾಧೀಶರು ತಮ್ಮ ಸ್ಥಾನದಿಂದ ಉಚ್ಚಾಟಿತರಾಗಲು ಸಾಧ್ಯ. ಅದರರ್ಥ ಸಾಮಾನ್ಯವಾಗಿ ಅಧಿಕಾರವನ್ನು ಬಳಸಬಹುದು ಎಂದಲ್ಲ. ಅದು ಚಲಾವಣೆಯಾಗಿಲ್ಲವೆಂಬುದೆ, ಅದರ ಯೋಗ್ಯತೆಯ ಅತ್ಯುತ್ಕೃಷ್ಟ ಪುರಾವೆ. ಅದೊಂದು ಆರೋಗ್ಯಕರ ಉಪಬಂಧ. ಅಸಭ್ಯ ವರ್ತನೆಯನ್ನು ತಡೆಯುವ ಅಭಿನಂದನೀಯ ಉಪಬಂಧವಾಗಬೇಕೆಂಬ ಉದ್ದೇಶದಿಂದ ರೂಪಿಸಲ್ಪಟ್ಟುದು. ಪದೇ ಪದೇ ಬಳಕೆಯಾಗಬೇಕೆಂಬುದು ಅದರ ಉದ್ದೇಶವಲ್ಲ. ಈ ಅಧಿಕಾರವನ್ನು ಪಡೆದ ಭವಿಷ್ಯದ ಭಾರತೀಯ ಶಾಸನ ಸಭೆಗಳು ಆ ವಿವೇಚನೆಯಿಂದ ಆಡಳಿತ ನಿರ್ವಹಿಸುತ್ತವೆ ಎಂಬ ನಂಬಿಕೆ ಇದೆ. ಇತರ ಅಧಿಕಾರ ವ್ಯಾಪ್ತಿಯಲ್ಲಿ ಸಂಸತ್ತಿನ ಉಭಯ ಸದನಗಳ ಹಿರಿಮೆಗರಿಮೆಗೆ ಕಾರಣಬೂತವಾದ ಸಂಯಮದ ವಿಶಿಷ್ಟ ಗುಣವನ್ನು ಈ ವಿಷಯದಲ್ಲಿ ಮೆರೆಯುತ್ತವೆ ಎಂಬ ಭರವಸೆ ಇದೆ. ಆದುದರಿಂದ ರುಜುವಾತಾದ ಅಸಭ್ಯ ವರ್ತನೆಯ ಬಗ್ಗೆ ಸದನದ ಸಮಿತಿಯನ್ನವರು ನೇಮಿಸಬಹುದು. ಅದೊಂದು ರಹಸ್ಯ ಅಧಿವೇಶನವಾಗಬಹುದು. ಆದರೆ ಅಂತಿಮವಾಗಿ ಆ ನಿರ್ಣಯ ಉಭಯು ಸದನಗಳ ಅಂಗೀಕಾರ ಪಡೆಯುಬಹುದು. ಅನಂತರ ದುರ್ವರ್ತನೆಗಾಗಿ ಅವರ ಉಚ್ಚಾಟನೆಯಾಗಬಹುದು. ಇದು ನ್ಯಾಯಾಧೀಶರ ಸೇವಾವಧಿಯ ಸಂತಸದಾಯಕ ಅಭಿವ್ಯಕ್ತಿಯಲ್ಲ. ಆ ಕಾರಣದಿಂದಲೆ ಅದಕ್ಕೆ ನಕಾರಾತ್ಮಕ ಸ್ವರೂಪ ನೀಡಲಾಗಿದೆ, "ಅವರನ್ನು ಉಚ್ಚಾಟಿಸಲಾಗದು ಇತ್ಯಾದಿ" ಈ ವಿಷಯದಲ್ಲಿ ಅನುಸರಿಸಬಹುದಾದ ಪ್ರಕ್ರಿಯೆಗಾಗಿ ಒಕ್ಕೂಟ ಕಾನೂನು ಮುಂದಿನ ಉಪಬಂಧವನ್ನು ರೂಪಿಸಬಹುದು; ಅರ್ಥಾತ್ ಅಧಿನಿಯಮದಲ್ಲಿ ಇಂತಹುದೊಂದು ವ್ಯವಸ್ಥೆ ಅನುಷ್ಠಾನಗೊಳ್ಳಲು ಎಲ್ಲ ವಿವರಪೂರ್ಣ ಉಪಬಂಧಗಳನ್ನೂ ತುಂಬಲಾಗದು. ವಾಸ್ತವವಾಗಿ ಈ ವಿಷಯಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ಅಳವಡಿಸಲು ಮುಂದಿನ ಉಪಬಂಧವನ್ನು ಒಕ್ಕೂಟ ಕಾನೂನು ರೂಪಿಸಬಹುದು ಎಂಬ ಸೌಲಭ್ಯವೂ

ಇತರ ಸಂವಿಧಾನಗಳಲ್ಲಿಲ್ಲ. ಆದರೆ ನಮ್ಮ ಕಡೆಯಿಂದ ಉಪಬಂಧಗಳನ್ನು ಅಗತ್ಯಮೀರಿ ವಿವರಿಸುವ ಪ್ರವೃತ್ತಿ ಕಂಡುಬರುತ್ತದೆ. ನಾನು ಖಂಡದಲ್ಲಿ ಉಪಬಂಧವನ್ನು ಸೇರಿಸಲು ಇರಬಹುದಾದ ಸಮರ್ಥನೆಯೆಂದರೆ ಅದೊಂದೆ. ಪ್ರಸ್ತುತ, ಭಾರತ ಸರ್ಕಾರದ ಅಧಿನಿಯಮದ ವಿವರಪೂರ್ಣ ಉಪಬಂಧಗಳನ್ನು ಗಣನೆಗೆ ತಂದುಕೊಂಡಿದ್ದೇನೆ. ಅವುಗಳು ಸಂವಿಧಾನದ ಮೂಲ ತತ್ತ್ವಗಳಿಗೆ ಸಂಗತವಾಗುವ ಮಟ್ಟಿಗೆ ಅದರಲ್ಲಿ ಸೇರ್ಪಡೆಯಾಗಬೇಕೆಂಬ ಉದ್ದೇಶವಿರುವಾಗ ಎಂದರೆ ಸ್ವತಂತ್ರ ಭಾರತದ ಅಸ್ತಿತ್ವಕ್ಕೆ ಪೂರಕವಾಗಿ ಒದಗಿಸಬಹುದಾದಷ್ಟು ಅಳವಡಿಕೆಯಾಗಬೇಕೆಂಬ ಗುರಿ ಇರುವಾಗ ನಾವು ನಿರ್ಮಿಸಲಿರುವ ನ್ಯಾಯಾಂಗ ವ್ಯವಸ್ಥೆಗೆ ಈ ಉಪಬಂಧಗಳನ್ನು ಹೊಂದಿಸುವುದು ಸಮಸ್ಯೆಯಾಗಲಾರದು. ಆದುದರಿಂದ ನಾವು ಈ ಉಪಬಂಧಗಳನ್ನು ಇಟ್ಟುಕೊಂಡಿದ್ದೇವೆ. ನ್ಯಾಯಾಧೀಶರ ವೇತನವನ್ನು ಯಾವುದೇ ಕಾರಣಕ್ಕೂ ಅವರ ಸೇವೆಯ ಅವಧಿಯಲ್ಲಿ ಕಡಿತಗೊಳಿಸಲಾಗದೆಂದು ನಮ್ಮ ಗೆಳೆಯರಲ್ಲೊಬ್ಬರು ಒಂದು ಉಪಬಂಧವನ್ನು ಮುಂದಿಟ್ಟಿದ್ದಾರೆ. ಆ ಅವಕಾಶ ಭಾರತ ಸರ್ಕಾರದ ಅಧಿನಿಯಮದಲ್ಲಿ ಇದೆ. ಆದುದರಿಂದ ವಿವರಪೂರ್ಣ ಉಪಬಂಧದ ಅಗತ್ಯ ನಮಗಿಲ್ಲ. ನಾವು ಮೂಲಭೂತ ಅಂಶಗಳ ಕಡೆ ಗಮನ ಕೊಡೋಣ. (ಎ) ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ (ಬಿ) ಹುದ್ದೆಯಿಂದ ಉಚ್ಚಾಟಿಸುವ ಬಗ್ಗೆ. ಇತರ ವಿಷಯಗಳನ್ನು ಒಕ್ಕೂಟ ಕಾನೂನಿಗೆ ಬಿಡಬಹುದು ಮತ್ತು ಪ್ರಸ್ತುತ ಭಾರತ ಸರ್ಕಾರದ ಅಧಿನಿಯಮಕ್ಕೆ ಬಿಡೋಣ ಅದನ್ನು ಸಂವಿಧಾನದ ಉಪಬಂಧಗಳಲ್ಲಿ ಅಳವಡಿಸುವ ಉದ್ದೇಶವಿದೆ. ಆ ಕಾರಣಕ್ಕಾಗಿ ನಾನು ವೇತನ ಎಂಬ ಪದವನ್ನು ಬಳಸಿದ್ದೇನೆ. ಅದರಲ್ಲಿ ಮೂಲ ವೇತನ, ರಜೆ, ಭತ್ಯೆಗಳು ಇತ್ಯಾದಿ ಇತ್ಯಾದಿ ಸೇರಿರುತ್ತವೆ. ಆದರೆ ಅವೆಲ್ಲವೂ ಸಂವಿಧಾನದೊಳಗೆ ಸೇರ್ಪಡೆಯಾಗುವ ಅಗತ್ಯವಿಲ್ಲ. ಈ ಎಲ್ಲ ಕಾರಣಗಳಿಂದಾಗಿ ತಿದ್ದುಪಡಿಯನ್ನು ಅಂಗೀಕರಿಸುವಂತೆ ನಾನು ಸದನವನ್ನು ಕೋರುತ್ತೇನೆ. ಆದರೆ ಇನ್ನೊಂದು ತಿದ್ದುಪಡಿಯನ್ನು ಏಕೆ ಅಂಗೀಕರಿಸಬಾರದು ಎಂಬುದಕ್ಕೆ ಸಮರ್ಪಕ ಕಾರಣಗಳನ್ನು ನೀಡುವುದಾದರೆ ನಾನೇನೂ ನನ್ನ ತಿದ್ದುಪಡಿಗೇ ಅಂಟಿಕೊಂಡಿಲ್ಲ. ಇನ್ನಾವುದಾದರೂ ತಿದ್ದುಪಡಿಗೆ ನನ್ನ ಮನಃಪೂರ್ವಕ ಒಪ್ಪಿಗೆ ಇದೆ.

**ಶ್ರೀ ಕೆ. ಸಂತಾನಮ್** (ಮದ್ರಾಸು : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸುತ್ತೇನೆ:

"೧೮ನೇ ಖಂಡಕ್ಕೆ ಕೆಳಕಂಡಂತೆ ಪ್ರತಿಯೋಜಿಸಬೇಕು:

'೧೮. ಸರ್ವೋಚ್ಚ ನ್ಯಾಯಾಲಯ– ಕೆಳಕಂಡ ವಿವರಗಳನ್ನು ವಿಷಯಗಳನ್ನು ಹೊರತುಪಡಿಸಿ ಒಕ್ಕೂಟ ನ್ಯಾಯಾಲಯದ ತಾತ್ಕಾಲಿಕ ಸಮಿತಿಯ ಶಿಫಾರಸಿನಂತೆ ಒಂದು ಸರ್ವೋಚ್ಚ ನ್ಯಾಯಾಲಯ, ಸಂವಿಧಾನ ಅಧಿಕಾರಗಳು ಮತ್ತು ಅಧಿಕಾರವ್ಯಾಪ್ತಿಯನ್ನು ಒಳಗೊಂಡಂತೆ ಸ್ಥಾಪನೆಯಾಗಬೇಕು.

ಎ) ರಾಷ್ಟ್ರಪತಿಗಳು ಮುಖ್ಯ ನ್ಯಾಯಾಧೀಶರು ಮತ್ತು ಸರ್ವೋಚ್ಚ ನ್ಯಾಯಾಲಯದ ಇತರ ನ್ಯಾಯಾಧೀಶರೊಡನೆ ಸಮಾಲೋಚಿಸಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಿಸಬೇಕು.

ಬಿ) ೧೧ನೇ ಕಂಡಿಕೆಯ ರೀತ್ಯಾ ಸರ್ವೋಚ್ಚ ನ್ಯಾಯಾಲಯದ ಒಕ್ಕೂಟ ಕಾನೂನು ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುತ್ತದೆ.

ಸಿ) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಮತ್ತಿತರ ಮುಖ್ಯ ನ್ಯಾಯಾಧೀಶರ ವೇತನವನ್ನು ಶಾಸನ ನಿಗದಿಗೊಳಿಸುತ್ತದೆ. ಯಾವ ನ್ಯಾಯಾಧೀಶರ ವೇತನವನ್ನೂ ಅವರ ಸೇವಾವಧಿಯಲ್ಲಿ ಕಡಿತಗೊಳಿಸಲಾಗದು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಉಚ್ಚಾಟನೆಗೆ ಕೆಳಕಂಡಂತೆ ಉಪಬಂಧವನ್ನು ರೂಪಿಸಬೇಕು.

ರಾಷ್ಟ್ರಪತಿಗಳ ಹೊರತು ಬೇರಾರೂ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಉಚ್ಚಾಟನೆ ಮಾಡಲಾಗದು. ಈ ಬಗ್ಗೆ ಸಂಸತ್ತಿನ ಉಭಯ ಸದನಗಳು ಮನವಿ ಸಲ್ಲಿಸಬೇಕು. ನ್ಯಾಯಾಧೀಶರ ಅಸಭ್ಯ ವರ್ತನೆ ಅಥವಾ ಅಸಾಮರ್ಥ್ಯ ರುಜುವಾತಾದಾಗ ಅದೇ ಅಧಿವೇಶನದಲ್ಲಿ ಅವರನ್ನು ಉಚ್ಚಾಟಿಸಬಹುದು'."

ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಪ್ರಸ್ತಾವಿಸಿದ ಎಲ್ಲ ಖಂಡಗಳೂ ನನ್ನ ತಿದ್ದುಪಡಿಯಲ್ಲಿ

ಅಡಕವಾಗಿವೆ ಎಂಬುದನ್ನು ನಿವೇದಿಸಲು ತಮ್ಮ ಅನುಮತಿ ಬೇಡುತ್ತೇನೆ. ಅವುಗಳ ಜೊತೆಗೆ ಇನ್ನೆರಡು ಹೆಚ್ಚುವರಿ ಖಂಡಗಳನ್ನು ಸೇರಿಸಿದ್ದೇನೆ. ಒಂದು, ಅಧಿಕಾರ ವ್ಯಾಪ್ತಿಗೆ ಅನ್ವಯಿಸಿದ್ದು. ಅವುಗಳ ಉಪಬಂಧಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಾಗ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಅತಿ ಮುಖ್ಯ ಪರಿಶೀಲನಾರ್ಹ ಅಂಶ. ಅಧಿಕಾರ ವ್ಯಾಪ್ತಿಯನ್ನು ಎರಡು ಸ್ಥೂಲ ವರ್ಗಗಳಾಗಿ ವಿಂಗಡಿಸಬಹುದು–ಒಕ್ಕೂಟ ಅಧಿಕಾರ ವ್ಯಾಪ್ತಿ ಒಕ್ಕೂಟವಲ್ಲದ ಅಧಿಕಾರ ವ್ಯಾಪ್ತಿ. ಒಕ್ಕೂಟ ಅಧಿಕಾರ ವ್ಯಾಪ್ತಿಯನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು. ಮೊದಲ ವರ್ಗ ಮೂಲಸ್ವರೂಪದ್ದು ಅದು ಪ್ರತ್ಯೇಕವಾದ ಅಧಿಕಾರ. ಅಂತರ ಘಟಕ ವಿವಾದಕ್ಕೆ ಸಂಬಂಧಿಸಿದ್ದು ಅಥವಾ ಘಟಕಗಳು ಮತ್ತು ಮಹಾಸಭೆಯ ನಡುವಣ ವಿವಾದ. ಯಾವುದೇ ಸಂವಿಧಾನದಲ್ಲೂ, ಸರ್ವೋಚ್ಚ ನ್ಯಾಯಾಲಯಕ್ಕೆ ಹೊಸತೆಂಬಂತೆ ತೋರುವುದು ಎರಡನೆಯದು. ಒಕ್ಕೂಟ ನ್ಯಾಯಾಲಯಕ್ಕೆ ಈ ಅಧಿಕಾರವನ್ನು ವಹಿಸಿಕೊಟ್ಟಿಲ್ಲ. ಅದರಂತೆ ಸರ್ವೋಚ್ಚ ನ್ಯಾಯಾಲಯ ಎರಡೂ ನ್ಯಾಯಾಧಿಕರಣಗಳನ್ನು ಒಳಗೊಂಡಿರುತ್ತದೆ; ಕೆಲವು ಪ್ರಕರಣಗಳಲ್ಲಿ ಮೂಲಭೂತ ಹಕ್ಕುಗಳಿಗೆ ಅನ್ವಯಿಸಿದಂತೆ ಇದೊಂದು ಮೂಲರೂಪದ ಅಧಿಕಾರ ವ್ಯಾಪ್ತಿ ಒಂದು ಹೊಸ ವರ್ಗ. ನಮ್ಮ ಸಂವಿಧಾನ ಅದನ್ನು ಪರಿಚಯಿಸುತ್ತದೆ. ಅದರಂತೆ ಸಾಧಾರಣವಾಗಿ ಮೂಲಭೂತ ಹಕ್ಕುಗಳ ಪ್ರಕರಣಗಳಲ್ಲಿ ಅದು ನ್ಯಾಯಾಧಿಕರಣದ ವ್ಯಾಪ್ತಿಯೊಳಗೆ ಬರುತ್ತದೆ. ಆದರೆ ಮೂಲಭೂತ ಹಕ್ಕುಗಳನ್ನು ಪರಿಶೀಲಿಸಲು ಅವಕಾಶವಿಲ್ಲದಿರುವಾಗ ಅಥವಾ ನ್ಯಾಯಾಧಿಕರಣದ ವ್ಯಾಪ್ತಿ ಇಲ್ಲದಿರುವಾಗ ಅಂತಹ ಪ್ರಕರಣಗಳನ್ನು ಆ ಹಕ್ಕುಗಳಿಗೆ ಸಂಬಂಧಿಸಿದಂತೆ ಪರಿಶೀಲನೆಗಾಗಿ ಸರ್ವೋಚ್ಚ ನ್ಯಾಯಾಲಯವೇ ಸ್ವತಃ ಮೂಲ ಅಧಿಕಾರವನ್ನು ಚಲಾಯಿಸಬಹುದು. ಮೂರನೆಯ ವರ್ಗ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ. ಅದು ಒಕ್ಕೂಟ ಸಂವಿಧಾನದ ವ್ಯಾಖ್ಯಾನಕ್ಕೆ ಅನ್ವಯಿಸಿರುವುದು. ನಾಲ್ಕನೆಯದು ಒಕ್ಕೂಟ ಕಾನೂನುಗಳಿಗೆ ಅನ್ವಯಿಸುವಂತೆ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ. ಸಮ್ಮಿಶ್ರ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲ ವರ್ಗಗಳೂ ಪ್ರಾಂತ್ಯಗಳೂ ಮತ್ತು ರಾಜ್ಯಗಳಿಗೆ ಸಾಮಾನ್ಯವಾಗಿರುತ್ತವೆ. ಇವೆಲ್ಲವೂ ಸರ್ವೋಚ್ಚ ನ್ಯಾಯಾಲಯದ ವಶಕ್ಕೆ ಒಳಪಡುತ್ತವೆ. ಆದರೆ ಸಮ್ಮಿಶ್ರ ಅಧಿಕಾರ ವ್ಯಾಪ್ತಿಯಲ್ಲದೆ ಒಕ್ಕೂಟ ಅಧಿಕಾರೇತರ ವರ್ಗಗಳು ಸರ್ವೋಚ್ಚ ನ್ಯಾಯಾಲಯದ ವಶದಲ್ಲಿರುತ್ತವೆ. ಇವು ಪ್ರಾಂತ್ಯಗಳಿಗೆ ಸೀಮಿತವಾದವು. ಒಂದು, ಪ್ರಾಂತೀಯ ಸಂವಿಧಾನದ ವ್ಯಾಖ್ಯಾನಕ್ಕೆ ಅನ್ವಯಿಸುವಂತೆ ನ್ಯಾಯಾಧಿಕರಣ ಅಧಿಕಾರ. ಇನ್ನೊಂದು ಪ್ರಾಂತೀಯ ಕಾನೂನುಗಳ ವ್ಯಾಖ್ಯಾನಕ್ಕೆ ಅನ್ವಯಿಸುವಂತೆ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ. ದುರ್ದೈವವಶಾತ್ ಒಕ್ಕೂಟ ಕಾರ್ಯಾಂಗ ಸಮಿತಿ, ರಾಜ್ಯಗಳಿಗೆ ಅನ್ವಯಿಸುವಂತೆ ಅದೇ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ವಹಿಸಿಕೊಡಲಿಲ್ಲ. ಇದನ್ನು ಒತ್ತಾಯ ಪೂರ್ವಕವಾಗಿ ಅಥವಾ ಬೇರಾವುದೇ ವಿಧಾನದ ಹೇರಿಕೆಯಿಂದ ಆಗಬೇಕೆಂದು ನಾನಿಲ್ಲಿ ಹೇಳುತ್ತಿಲ್ಲ. ಆದರೆ ರಾಜ್ಯಗಳಲ್ಲಿ ನನ್ನ ಕೋರಿಕೆಯೆಂದರೆ ಪ್ರಾಂತ್ಯಗಳು ಮಾಡಿರುವಂತೆ ಅವುಗಳ ಪ್ರಯೋಜನಕ್ಕಾಗಿಯೇ ರಾಜ್ಯ ಸಂವಿಧಾನ ಮತ್ತು ರಾಜ್ಯ ಕಾನೂನುಗಳ ವಿಷಯದಲ್ಲೂ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರ ವಹಿಸಿಕೊಡಬೇಕು. ಅವರ ರಾಜ್ಯಗಳಿಗೇ ಅನ್ವಯಿಸುವಂತೆ ಜನತೆ ಮತ್ತು ಆಳುವ ಅರಸರ ನಡುವೆ ವಿವಾದಗಳು ಏರ್ಪಡಬಹುದು. ಉಚ್ಚನ್ಯಾಯಾಲಯದ ತೀರ್ಪಿಗೆ ಜನತೆಗೆ ಬದ್ಧವಾಗಿರಲು ಸಾಧ್ಯವಿಲ್ಲದಾಗ ರಾಜ್ಯ ಸಂವಿಧಾನವನ್ನು ರಾಜ್ಯ ನ್ಯಾಯಾಲಯ ಸಮರ್ಪಕ ರೀತಿಯಲ್ಲಿ ವ್ಯಾಖ್ಯಾನಿಸುತ್ತಿಲ್ಲವೆಂದು ಭಾವಿಸಬಹುದು. ಪ್ರಜೆಗಳು ಮತ್ತು ಆಳುವವರಸರಿಬ್ಬರಿಗೂ ನಿಷ್ಪಕ್ಷಪಾತರೀತಿಯಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ನ್ಯಾಯವಿತರಣೆಯಾಗುತ್ತದೆ ಎನ್ನಬಹುದು.

ಎರಡನೆಯದಾಗಿ ಸಾಮಾನ್ಯವಾದ ರಾಜ್ಯಕಾನೂನುಗಳ ಪ್ರಕರಣದಲ್ಲೂ ಸಹ ಅನೇಕ ರಾಜ್ಯಗಳ ಕಾನೂನುಗಳು ಕೇವಲ ಪ್ರಾಂತೀಯ ಕಾನೂನುಗಳ ಅಳವಡಿಕೆಯಾಗಿವೆ. ಕೆಲವು ರಾಜ್ಯಗಳಿಗೆ ವ್ಯಾಪಕ ವ್ಯವಸ್ಥೆಯಿಲ್ಲ. ಖಚಿತವಾಗಿ ಕಾನೂನುಗಳನ್ನು ರೂಪಿಸಲು ಅಗತ್ಯ ಕಾನೂನು ಇಲಾಖೆಗಳಿಲ್ಲ. ಅವು ಬರೆ

ಪ್ರಾಂತೀಯ ಕಾನೂನುಗಳನ್ನು ಅಳವಡಿಸುತ್ತವೆ. ಹಾಗೊಮ್ಮೆ ರಾಜ್ಯ ನ್ಯಾಯಾಲಯ ಒಂದು ಕಾನೂನನ್ನು ಒಂದು ರೀತಿಯಲ್ಲೂ ಅದೇ ಕಾನೂನನ್ನು ಸರ್ವೋಚ್ಚ ನ್ಯಾಯಾಲಯ ಬೇರೊಂದು ರೀತಿಯಲ್ಲೂ ವ್ಯಾಖ್ಯಾನಿಸಿದರೆ ಭಾರಿ ಗೊಂದಲವೇರ್ಪಡುತ್ತದೆ. ಅಪಾರವೆಚ್ಚ ಮತ್ತು ಕಷ್ಟ ಕೋಟಲೆಗಳ ನಡುವೆ ಸರ್ವೋಚ್ಚ ನ್ಯಾಯಾಲಯ ಸ್ಥಾಪನೆಯಾಗುತ್ತಿದೆ. ಅದು ಪ್ರಾಂತ್ಯಗಳು ಮತ್ತು ರಾಜ್ಯಗಳೆರಡಕ್ಕೂ ಸೇರಿದೆ. ರಾಜ್ಯಗಳು ಇದನ್ನು ಪ್ರತಿಷ್ಠೆ ಮಾತಾಗಿ ತೆಗೆದುಕೊಂಡರೆ ಸರ್ವೋಚ್ಚ ನ್ಯಾಯಾಲಯದ ಸೌಲಭ್ಯವನ್ನು ಪಡೆಯುವಲ್ಲಿ ವಿಫಲಗೊಂಡರೆ ಅದು ಅತಿ ಬುದ್ಧಿಹೀನ ನಿರ್ಧಾರವಾಗುತ್ತದೆ.

೧೦ನೇ ಖಂಡದಲ್ಲಿ ಹೀಗೆ ಹೇಳಿದೆ–

"ನಿರ್ದಿಷ್ಟಗೊಳಿಸಬಹುದಾದ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ವಿಶೇಷ ಒಪ್ಪಂದದ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚುವರಿ ಅಧಿಕಾರ ವ್ಯಾಪ್ತಿ ನೀಡುವುದಕ್ಕೂ ಯಾವುದೇ ರಾಜ್ಯಘಟಕಕ್ಕೆ ಸ್ವಾತಂತ್ರ್ಯವಿರುತ್ತದೆ."

ಪ್ರಾಂತ್ಯಗಳ ಮಟ್ಟಕ್ಕೆ ಭಾರತೀಯ ರಾಜ್ಯಗಳೂ ತಲುಪಿ, ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಬರಬೇಕೆಂಬುದು ನನ್ನ ಆಶಯ. ಅದೇ ಹೊತ್ತಿಗೆ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಭಾರತೀಯ ರಾಜ್ಯ ಘಟಕ ವಿಶೇಷ ಒಪ್ಪಂದದ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುವ ಆಲೋಚನೆ ನನಗೆ ಹಿಡಿಸದು. ಹಾಗೆ ಅಧಿಕಾರ ವಹಿಸಿಕೊಡುವ ಕೆಲಸ ಸಮ್ಮಿಶ್ರ ಶಾಸನಸಭೆಯಿಂದಲೆ ನಡೆಯತಕ್ಕದ್ದು. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ತಿದ್ದುಪಡಿ ಮಾರ್ಪಾಟು ಅಥವಾ ಯಾವುದೇ ರೀತಿಯ ಪರಿಷ್ಕರಣೆ ಮಾಡುವ ಅಧಿಕಾರ ಸಮ್ಮಿಶ್ರ ಶಾಸನ ಸಭೆಗೆ ಇರತಕ್ಕುದು.

ವೇತನದ ವಿಷಯದಲ್ಲಿ ಶ್ರೀ ಅಲ್ಲಾದಿಯವರ ಹೇಳಿಕೆಗೆ ನನ್ನ ಸಹಮತವಿದೆ. ಅಧಿಕಾರಾವಧಿಯಲ್ಲಿ ವೇತನ ಕಡಿತಕ್ಕೆ ಒಳಗಾಗಬಾರದು. ವೇತನದ ಬಗ್ಗೆ ಒಂದು ಖಚಿತವಾದ ಖಂಡದ ಮೂಲಕ ತಿಳಿಸಬಾರದೇಕೆ?

ಅನಗತ್ಯವೆನಿಸುವ ಮುಂದಿನ ಉಪಬಂಧವನ್ನು ಲೋಪಗೊಳಿಸಿರುವುದನ್ನು ಹೊರತುಪಡಿಸಿ ನ್ಯಾಯಾಧೀಶರ ಉಚ್ಚಾಟನೆಗೆ ಅದೇ ಖಂಡವನ್ನು ನಾನೂ ಸಹ ಅಳವಡಿಸಿದ್ದೇನೆ.

ನನ್ನ ತಿದ್ದುಪಡಿ ಹೆಚ್ಚು ತಿಳಿವಳಿಕೆಯುಳ್ಳದ್ದೆಂದು ಭಾವಿಸಿದ್ದೇನೆ. ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಅದನ್ನು ಅಂಗೀಕರಿಸುತ್ತಾರೆಂದು ನಂಬಿದ್ದೇನೆ.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಶ್ರೀ ಸಂತಾನಮ್ ಅವರು ನೀಡಿರುವ ಹೇಳಿಕೆಗಳ ದೃಷ್ಟಿಯಿಂದ ವರದಿಯ ಕೆಲ ಖಂಡಿಕೆಗಳತ್ತ ಸದನದ ಗಮನ ಸೆಳೆಯಬಯಸುತ್ತೇನೆ. ವರದಿಯ ೭ನೇ ಕಂಡಿಕೆಯಲ್ಲಿ ಹೀಗೆ ಹೇಳಿದೆ.

"ಒಂದು ವಿಷಯ ಕುರಿತಂತೆ ಒಕ್ಕೂಟದ ಶಾಸನಸಭೆ ಶಾಸನ ರಚಿಸಲು ಸಕ್ಷಮವಾಗಿದ್ದರೆ...."

**ಮಾನ್ಯ ಸಭಾಧ್ಯಕ್ಷರು :** ಇತರ ಎಲ್ಲ ತಿದ್ದುಪಡಿಗಳನ್ನು ಚರ್ಚೆಗೆ ಇಟ್ಟುಕೊಂಡರೆ ಉತ್ತಮವೆಂದುಕೊಂಡಿದ್ದೇನೆ. ತಾವು ಭಾಷಣ ಮಾಡುವ ಹಾಗಿದ್ದರೆ ಎಲ್ಲ ತಿದ್ದುಪಡಿಗಳು ನಮ್ಮ ಮುಂದೆ ಬಂದ ಅನಂತರ ಮಾಡಬಹುದು.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಶ್ರೀ ಸಂತಾನಮ್ ಈಗಷ್ಟೇ ಹೇಳಿದ ಹೇಳಿಕೆಯಿಂದ ಮೂಡಿಬಂದ ಕೆಲ ಅಂಶಗಳನ್ನು ನಾನು ಪ್ರಸ್ತಾಪಿಸುತ್ತಿದ್ದೇನಷ್ಟೆ. ನಾನು ಭಾಷಣ ಮಾಡುವುದಿಲ್ಲ. ವರದಿಯಲ್ಲಿರುವ ಕೆಲವು ಕಂಡಿಕೆಗಳಿಗೆ ಅನ್ವಯಿಸುವಂತೆ ನನ್ನ ನಿಲುವನ್ನು ವಿವರಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಇನ್ನೊಂದು ಭಾಷಣಕ್ಕೆ ಅವಕಾಶ ಕಲ್ಪಿಸುವುದು ಸೂಕ್ತವಾಗಲಾರದು.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ನಾನು ಶ್ರೀ ಕೆ. ಸಂತಾನಮ್ ಅವರು ಇದುವರೆಗೆ ಆಡಿದ ಮಾತುಗಳಿಗೆ ಪ್ರತಿಕ್ರಿಯಿಸುತ್ತಿದ್ದೇನಷ್ಟೆ. ನಾನು ಸ್ವತಃ ನನ್ನ ತಿದ್ದುಪಡಿಯ ಬಗ್ಗೆ ಮಾತನಾಡುತ್ತಿಲ್ಲ. ಮತ್ತೊಬ್ಬ

ಸದಸ್ಯರ ತಿದ್ದುಪಡಿಯ ಬಗ್ಗೆ ಮಾತನಾಡುವ ಹಕ್ಕು ನನಗಿದೆ. ನನ್ನ ಭಾಷಣ ಮುಂದೊಂದು ಸಂದರ್ಭಕ್ಕೆ ಮೀಸಲಿಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ಆ ಹಂತದಲ್ಲಿ ಪರಿಶೀಲಿಸಬೇಕಾಗುತ್ತದೆ.

ನಿನ್ನೆ ಈ ಖಂಡದ ಪ್ರಸ್ತಾವಕರು ಯಾವ ಭಾಷಣವನ್ನೂ ಮಾಡಲಿಲ್ಲ. ಭಾಷಣಗಳನ್ನು ಇಂದಿಗೆ ಮೀಸಲಿಡಲು ನಾವು ಒಪ್ಪಿಕೊಂಡಿದ್ದೆವು. ತಿದ್ದುಪಡಿಯ ಪ್ರಸ್ತಾವಕರೂ ಸಹ ಯಾವ ಭಾಷಣವನ್ನೂ ಮಾಡಲಿಲ್ಲ. ಈಗ ಖಂಡದ ಪ್ರಸ್ತಾವಕರು ಮತ್ತು ತಿದ್ದುಪಡಿಯ ಪ್ರಸ್ತಾವಕರು ಭಾಷಣ ಮಾಡಲು ಇದು ಸಕಾಲ. ಅನಂತರ ಅವರಿಗೆ ಚರ್ಚಿಸುವ ಸ್ವಾತಂತ್ರ್ಯವಿದೆ.

ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ತಾವು ಮಾತನಾಡಲು ಬಯಸುತ್ತೀರಾ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನ್ಯಾಯಾಲಯದ ಪ್ರಕಾರ್ಯಗಳು ಎಂದರೆ ನ್ಯಾಯಾಧೀಶರ ನೇಮಕಾತಿ ಅವರ ಉಚ್ಚಾಟನೆ ಇತ್ಯಾದಿ ವಿಷಯಗಳನ್ನು ತೀರ್ಮಾನಿಸುವ ಸರ್ವೋಚ್ಚ ನ್ಯಾಯಾಲಯದ ಸಮಿತಿಯ ವರದಿಯ ಬಗ್ಗೆ ೧೮ನೇ ಖಂಡದಲ್ಲಿ ಉಲ್ಲೇಖ ಇರುವುದನ್ನು ಕಾಣಬಹುದು. ವರದಿಯಲ್ಲಿ ೧೫ ರಿಂದ ೧೬ಕ್ಕೂ ಹೆಚ್ಚು ಕಂಡಿಕೆಗಳಿವೆ. ಪ್ರತಿಯೊಂದನ್ನೂ ಪ್ರಶ್ನಿಸಲಾಗಿದೆ. ಈ ಕಂಡಿಕೆಗಳಲ್ಲಿ ಸೂಚಿಸಲಾಗಿರುವ ಸಲಹೆ ಸೂಚನೆಗಳಿಗೂ ಶಿಫಾರಸುಗಳಿಗೂ ನಾವು ತಿದ್ದುಪಡಿಗಳನ್ನು ಕೊಟ್ಟಿದ್ದೇವೆ. ಹಾಗಾಗಿ ಈ ಖಂಡದ ಮೇಲಿರುವ ಎಲ್ಲ ತಿದ್ದುಪಡಿಗಳು, ಖಂಡ ೧೮ ಮತ್ತು ತಾತ್ಕಾಲಿಕ ಸಮಿತಿಯ ವರದಿಯನ್ನು ಔಪಚಾರಿಕವಾಗಿ ಮಂಡಿಸಬಹುದು. ಅನಂತರ ವಿವಿಧ ಅಂಶಗಳನ್ನು ಕುರಿತಂತೆ ಚರ್ಚೆಯನ್ನು ನಡೆಸಬಹುದು; ಹಾಗೂ ಅವುಗಳನ್ನು ಆದ್ಯತೆ ಆಧಾರದ ಮೇಲೆ ಮತಕ್ಕೆ ಹಾಕಬಹುದು.

**ಮಾನ್ಯ ಸಭಾಧ್ಯಕ್ಷರು** : ನನಗೆ ತಿಳಿದಿರುವಂತೆ ೧೮ನೇ ಖಂಡದ ಬಗ್ಗೆ ಯಾವುದೇ ತಿದ್ದುಪಡಿಗೂ ಸೂಚನೆ ಉಳಿದಿಲ್ಲ. ಉಳಿದಿರುವುದು ಒಂದೇ ಒಂದು. ಅನುಬಂಧಕ್ಕಿರುವ ನಿಮ್ಮ ತಿದ್ದುಪಡಿ. ತಾವು ಅದನ್ನು ಮಂಡಿಸಬಹುದು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಅನುಬಂಧವಿಲ್ಲದೆ ೧೮ನೇ ಖಂಡ ಅಪೂರ್ಣ. ಅವೆರಡೂ ಜೊತೆ ಜೊತೆಗೆ ಇರತಕ್ಕವು. ನಾನು ೧೬ನೇ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ೧೭ನೇ ತಿದ್ದುಪಡಿಯನ್ನು ಪ್ರಸ್ತಾವಿಸುತ್ತೇನೆ. ೧೮ನೇ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ಮತ್ತು ೧೯ನೇ ತಿದ್ದುಪಡಿ ಶ್ರೀಮತಿ ದುರ್ಗಾಬಾಯಿ ಮತ್ತು ನನ್ನ ಹೆಸರಿನಲ್ಲಿದೆ. ಅದನ್ನು ಅವರು ಮಂಡಿಸುತ್ತಾರೆ.

ನನ್ನ ತಿದ್ದುಪಡಿ ಹೀಗಿದೆ:

"ಅನುಬಂಧದ ೯ನೇ ಖಂಡಿಕೆಯಲ್ಲಿ ಹೀಗೆಂದು ಹೇಳಬೇಕು.

ಎ) ಯಾವುದೇ ಕಾನೂನು ವಿಷಯದಲ್ಲಿ ಇನ್ನು ಮುಂದೆ ಪ್ರಿವಿ ಕೌನ್ಸಿಲ್‌ನ ನ್ಯಾಯಾಧಿಕರಣ ವ್ಯಾಪ್ತಿಯನ್ನು ರದ್ದುಪಡಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ವಹಿಸಬೇಕು:

ಬಿ) ಪ್ರಿವಿ ಕೌನ್ಸಿಲ್‌ನಲ್ಲಿ ಇತ್ಯರ್ಥವಾಗಬೇಕಿರುವ ಅಪೀಲುಗಳನ್ನು ಸರ್ವೋಚ್ಚ ನ್ಯಾಯಾಲಯ ಇತ್ಯರ್ಥಗೊಳಿಸುತ್ತದೆ."

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಸ್ಥಿತ್ಯಂತರ ಉಪಬಂಧಗಳಿಗೆ ಸಂಬಂಧಿಸಿದಂತೆ ವರದಿಯಲ್ಲಿ ಇನ್ನೊಂದು ಖಂಡವಿದೆ; ೩ನೇ ಖಂಡ–ಅದು ಸಮ್ಮಿಶ್ರ ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಿರುವ ಪ್ರಕರಣಗಳಿಗೆ ಅನ್ವಯಿಸುವಂತಹುದು. ನನ್ನ ಮಿತ್ರರ ತಿದ್ದುಪಡಿಯಂತೆ ಅದನ್ನು ಬಿಡಬೇಕು. ಅದನ್ನು ೩ನೇ ಖಂಡದ ೧೧ನೇ ಭಾಗದ ಅದಿಯಲ್ಲಿ ತರುವಂತೆ ನಾನು ಸಲಹೆ ನೀಡುತ್ತಿದ್ದೇನೆ. ಅದು ಹೀಗಿದೆ:

"ಈ ಸಂವಿಧಾನದ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಸೂಕ್ತ ರಚನೆಯಾಗುವವರೆಗೆ ಸಮ್ಮಿಶ್ರ ನ್ಯಾಯಾಲಯವನ್ನೇ ಸರ್ವೋಚ್ಚ ನ್ಯಾಯಾಲಯವೆಂದು ಭಾವಿಸಬೇಕು. ಸಮ್ಮಿಶ್ರ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯದ ಎಲ್ಲ ಪ್ರಕಾರ್ಯಗಳನ್ನೂ ನೆರವೇರಿಸುವುದು:

ಪರಂತು ಈ ಸಂವಿಧಾನ ಜಾರಿಗೊಂಡಿಲ್ಲವೆಂಬಂತೆಯೇ ಭಾವಿಸಿ ಸಮ್ಮಿಶ್ರ ನ್ಯಾಯಾಲಯ ಮತ್ತು ಪ್ರಿವಿ ಕೌನ್ಸಿಲ್‌ನ ನ್ಯಾಯಾಂಗ ಸಮಿತಿಯ ಮುಂದೆ ಇತ್ಯರ್ಥವಾಗಬೇಕಿರುವ ಎಲ್ಲ ಪ್ರಕರಣಗಳನ್ನೂ ಸಂವಿಧಾನ ಪ್ರಾರಂಭವಾದ ದಿನಾಂಕವೆ ಇತ್ಯರ್ಥಗೊಳಿಸಬೇಕು."

ನನ್ನ ಗೆಳೆಯರ ತಿದ್ದುಪಡಿಯಂತೆ ಅದು ಅಸ್ತಿತ್ವದಲ್ಲಿರಲಾರದು. ಈ ಖಂಡದ ಬಗ್ಗೆ ನಾನೇ ಸ್ವತಃ ಸೂಚನೆಕೊಟ್ಟಿದ್ದೇನೆ. ಒಂದು ವೇಳೆ ನನ್ನ ಗೆಳೆಯರು ಮಂಡಿಸಿದ ತಿದ್ದುಪಡಿಯ ಬಗ್ಗೆ ಸದನ ನಿರ್ಣಯ ತೆಗೆದುಕೊಂಡರೆ ನಂತರ ಮೂರನೇ ಪರಂತುಕದ ಬಗ್ಗೆ ನಾನು ತಿದ್ದುಪಡಿಯನ್ನು ಮಂಡಿಸಿದರೆ ಅದು ಕ್ರಮಬದ್ಧವಾಗುವುದಿಲ್ಲ. ಸದನ ಆಗಲೆ ಒಂದು ನಿರ್ಧಾರಕ್ಕೆ ಬಂದಿರುತ್ತದೆ. ಆದುದರಿಂದ ಸ್ಪಷ್ಟನೆಯ ಕಾರಣಕ್ಕಾಗಿ ಈ ತಿದ್ದುಪಡಿಯನ್ನು ೧೧ನೇ ಕಂಡಿಕೆಯ ೩ನೇ ಖಂಡದೊಡನೆ ತೆಗೆದುಕೊಳ್ಳುವುದು ಸೂಕ್ತವೆಂದು ನಾನು ಸೂಚಿಸುತ್ತಿದ್ದೇನೆ. ಏಕೆಂದರೆ ೧೧ನೇ ಭಾಗದಲ್ಲಿ ಉಳಿದಿರುವ ಪ್ರಕರಣಗಳ ಬಗ್ಗೆ ಕಂಡಿಕೆಯಲ್ಲಿ ಒಂದು ವಿಶೇಷ ಉಪಬಂಧವನ್ನು ಸೇರಿಸಲಾಗಿದೆ. ಆದುದರಿಂದ ಉಳಿಧಿರುವ ವ್ಯವಹಾರಗಳ ಬಗ್ಗೆ ನನ್ನ ಮಿತ್ರರು ಯಾವುದೇ ತಿದ್ದುಪಡಿಯನ್ನು ಮಂಡಿಸಿದರೂ ಅದನ್ನು ಪ್ರತ್ಯೇಕವಾಗಿ ಮಂಡಿಸಲಿ. ಏನೇ ಆದರೂ ೩ನೇ ಕಂಡಿಕೆಯ ಬಗ್ಗೆ ಈ ಬೆಳಗ್ಗೆ ಒಂದು ತಿದ್ದುಪಡಿಗೆ ನೋಟೀಸು ಕೊಟ್ಟಿದ್ದೇನೆ. ಅದನ್ನು ನನ್ನ ಮಿತ್ರರ ತಿದ್ದುಪಡಿಯೊಡನೆ ಪರಿಶೀಲಿಸಬಹುದು.

**ಶ್ರೀಮತಿ ಬಿ. ದುರ್ಗಾಬಾಯಿ** (ಮದ್ರಾಸು : ಸಾಮಾನ್ಯ) : ಮಾನ್ಯರೆ, ಪೂರಕ ಪಟ್ಟಿ ೨ರಲ್ಲಿ ೧೯ನೇ ತಿದ್ದುಪಡಿಯನ್ನು ನಾನು ಮಂಡಿಸಲು ಅನುಮತಿ ಕೋರುತ್ತೇನೆ.

"ಅನುಬಂಧದ ೧೪ನೇ ಕಂಡಿಕೆಯಲ್ಲಿ ಕೆಳಕಂಡಂತೆ ಸೇರಿಸಬೇಕು:

'ಪ್ರತಿಯೊಬ್ಬ ನ್ಯಾಯಾಧೀಶರೂ ಭಾರತ ಒಕ್ಕೂಟದ ಪೌರರಾಗಿರಬೇಕು'."

೧೪ನೇ ಕಂಡಿಕೆ ನ್ಯಾಯಾಧೀಶರ ಸೇವಾವಧಿ ಮತ್ತು ಸೇವಾ ನಿಯಮಗಳನ್ನು ತಿಳಿಸುತ್ತದೆ. ಮಾನ್ಯ ಸಭಾಧ್ಯಕ್ಷರೆ ಪ್ರತಿಯೋರ್ವ ನ್ಯಾಯಾಧೀಶರೂ ಭಾರತ ಒಕ್ಕೂಟದ ಪೌರರಾಗಿರಬೇಕೆಂದು ಬಯಸುತ್ತೇನೆ. ನಾವು ಎ ಖಂಡವನ್ನು ಮಾತ್ರ ಮಂಡಿಸಿದ್ದೇನೆ. ಬಿ ಕಂಡವನ್ನು ಒತ್ತಾಯಿಸುತ್ತಿಲ್ಲ.

**ಶ್ರೀ ಎಮ್. ಅನಂತಶನಯಮ್ ಅಯ್ಯಂಗಾರ್** : ಮಾನ್ಯರೆ, ೨ನೇ ಪೂರಕ ಪಟ್ಟಿಯ ೨೦ನೇ ತಿದ್ದುಪಡಿಯನ್ನು ನಾನು ಮಂಡಿಸುತ್ತಿಲ್ಲ. ೨೧ನೇ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಅನುಬಂಧಕ್ಕೆ ಕೆಳಗಿನದನ್ನು ಸೇರಿಸಬೇಕು:

'ಎ) ನ್ಯಾಯಾಧೀಶರು, ರಾಷ್ಟ್ರಪತಿಗಳನ್ನು ಸಂಪರ್ಕಿಸಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಬಹುದು.

ಬಿ) ಉಭಯ ಸದನಗಳ ಮನವಿಯಂತೆ ರಾಷ್ಟ್ರಪತಿಗಳು ಒಬ್ಬ ನ್ಯಾಯಾಧೀಶರನ್ನು, ದುರ್ವರ್ತನೆ ಅಥವಾ ಭೌತಿಕ ಯಾ ಮಾನಸಿಕ ಊನದ ಆಧಾರದ ಮೇಲೆ ಉಚ್ಚಾಟಿಸಬಹುದು. ಪರಂತು ರಾಷ್ಟ್ರಪತಿಗಳಿಂದ ಆಯ್ಕೆಗೊಂಡ ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶರ ಸಮಿತಿ ತನಿಖೆ ನಡೆಸಿ ಸದರಿ ನ್ಯಾಯಾಧೀಶರನ್ನು ಉಚ್ಚಾಟಿಸಬೇಕೆಂದು ವರದಿ ಮಾಡಬೇಕು.

ಸಿ) ನ್ಯಾಯಾಧೀಶರನ್ನು ದಿವಾಳಿ ಎಂದು ತೀರ್ಮಾನಿಸಿ ತೀರ್ಪು ನೀಡಿದ ಅನಂತರ ಅವರು ಹುದ್ದೆಯಿಂದ ಪದಚ್ಯುತರಾಗಬೇಕು."

ಈ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಮಿತ್ರ ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಈಗಾಗಲೇ ಮಾತನಾಡಿದ್ದಾರೆ ತಾವು ಅನುಮತಿಸಿದರೆ ನಾನು ಈ ಕೂಡಲೆ ಮಾತನಾಡುವೆ. ಇಲ್ಲವಾದರೆ ನನ್ನ ಭಾಷಣದ ಹಕ್ಕನ್ನು ಕಾದಿರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ತಮ್ಮ ಹೆಸರಿನಲ್ಲಿ ಮೂರನೇ ಪಟ್ಟಿಯಲ್ಲಿ ಮತ್ತೊಂದು ತಿದ್ದುಪಡಿ ಇದೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ನಾನು ಅದನ್ನೂ ಮಂಡಿಸುತ್ತೇನೆ.

"ವರದಿಯ ಅನುಬಂಧಕ್ಕೆ ಕೆಳಕಂಡಂತೆ ಸೇರಿಸಬೇಕು:

'೧.ಎ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು. ರಾಷ್ಟ್ರಪತಿಗೆ ತಮ್ಮ ರಾಜೀನಾಮೆ ಸಲ್ಲಿಸಿ, ಪದವಿಯಿಂದ ನಿರ್ಗಮಿಸಬಹುದು.

ಬಿ) ದುರ್ವರ್ತನೆ ಅಥವಾ ಭೌತಿಕ ಯಾ ಮಾನಸಿಕ ಅಸ್ಥಿರತೆಯ ಆಧಾರದ ಮೇಲೆ ಒಬ್ಬ ನ್ಯಾಯಾಧೀಶರನ್ನು ರಾಷ್ಟ್ರಪತಿಗಳು ಉಚ್ಚಾಟಿಸಬಹುದು. ಆ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ರಾಷ್ಟ್ರಪತಿ ಅವರು ಈ ಉದ್ದೇಶಕ್ಕಾಗಿ ನೇಮಿಸಿರುವ ಉಚ್ಚ ನ್ಯಾಯಾಲಯ ನ್ಯಾಯಾಧೀಶರುಗಳಿಂದ ಆಯಾ ವಿಶೇಷ ನ್ಯಾಯಾಧಿಕರಣ ಅಥವಾ ಉಚ್ಚ ನ್ಯಾಯಾಲಯಗಳ ಅಥವಾ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ವರದಿ ಸಲ್ಲಿಸಿ ಸದರಿ ನ್ಯಾಯಾಧೀಶರನ್ನು ಅಂತಹ ಯಾವುದೇ ಕಾರಣಗಳಿಗಾಗಿ ಉಚ್ಚಾಟಿಸಬೇಕೆಂದು ಸೂಚಿಸಬೇಕು."

**ಮಾನ್ಯ ಸಭಾಧ್ಯಕ್ಷರು** : ಎಲ್ಲ ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಈಗ ಅವು ಚರ್ಚೆಗೆ ಮುಕ್ತ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ೧೮ನೇ ಖಂಡ ಮತ್ತು ಅನುಬಂಧದ ವಿವಿಧ ಕಂಡಿಕೆಗಳಿಗೆ ತಿದ್ದುಪಡಿಗಳ ಗೋಜಲೇ ಇದೆ. ಅವೆಲ್ಲವನ್ನೂ ಐದು ಶೀರ್ಷಿಕೆಗಳ ಅಡಿಯಲ್ಲಿ ತರಬಹುದು.

೧) ಅವುಗಳಲ್ಲಿ ಕೆಲವು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಪ್ರಾಧಿಕಾರಕ್ಕೆ ಸಂಬಂಧಿಸಿವೆ:

೨) ಅವರಲ್ಲಿ ಯಾರೊಬ್ಬರನ್ನಾಗಲಿ ಉಚ್ಚಾಟಿಸುವ ಅಧಿಕಾರವುಳ್ಳ ಪ್ರಾಧಿಕಾರ

೩) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹತೆ

೪) ಸಂಬಳ ಸಾರಿಗೆ ನಿಗದಿಪಡಿಸುವುದು ಯಾರು, ಮತ್ತು

೫) ಸಮ್ಮಿಶ್ರ ನ್ಯಾಯಾಲಯಕ್ಕೆ ವಹಿಸಿಕೊಡಬೇಕಾದ ಅಧಿಕಾರ ವ್ಯಾಪ್ತಿ.

ಇವು ಐದು ಬಾಬಿನಲ್ಲಿ, ತಿದ್ದುಪಡಿಗಳನ್ನು ಪ್ರಸ್ತಾವಿಸಲಾಗಿದೆ. ನೇಮಕಾತಿಗೆ ಸಂಬಂಧಿಸಿದಂತೆ ಬಹುತೇಕ ಸರ್ವಾನುಮತವಿದೆ: ರಾಷ್ಟ್ರಪತಿಗಳಿಗೆ ವಹಿಸಿಕೊಟ್ಟಿರುವ ನೇಮಕಾತಿಯ ಅಧಿಕಾರವನ್ನು ಅವರು ಸ್ವಂತ ವಿವೇಚನಾನುಸಾರ ಬಳಸುವಂತಿಲ್ಲ. ಅವರು ತಮ್ಮ ಸಚಿವರೊಡನೆ ಸಮಾಲೋಚಿಸಬೇಕು. ಇದರ ಜೊತೆಗೆ ಅವರು ಸಮ್ಮಿಶ್ರ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಉಚ್ಚ ನ್ಯಾಯಾಲಗಳಲ್ಲಿ ಯಾವುದೇ ನ್ಯಾಯಾಧೀಶರೊಡನೆ ಸಮಾಲೋಚಿಸಬೇಕು. ಉಚ್ಚನ್ಯಾಯಾಲಯಗಳಲ್ಲೊಂದರಿಂದ ಆಯ್ದ ನ್ಯಾಯಾಧೀಶರನ್ನು ನೇಮಕ ಮಾಡುವ ಉದ್ದೇಶ ಅವರಿಗಿರಬಹುದು. ಅಂತಹ ಸಂದರ್ಭದಲ್ಲಿ ಅವರು ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಬಹುದು. ಅಥವಾ ತಾವು ನೇಮಕ ಮಾಡಬೇಕೆಂದಿರುವ ನ್ಯಾಯಾಧೀಶರಿಗೆ ಸಂಬಂಧಿಸಿದ ಉಚ್ಚ ನ್ಯಾಯಾಲಯಗಳನ್ನು ಹೊರತುಪಡಿಸಿ ಇತರ ಉಚ್ಚನ್ಯಾಯಾಲಯಗಳ ಕಿರಿಯ ನ್ಯಾಯಾಧೀಶರೊಡನೆ ಸಮಾಲೋಚಿಸಬಹುದು. ಪ್ರಾಂತ್ಯಗಳ ಅಥವಾ ರಾಜ್ಯಗಳ ಎಲ್ಲ ಮುಖ್ಯ ನ್ಯಾಯಾಲಯಗಳಲ್ಲಿರುವ ಎಲ್ಲ ನ್ಯಾಯಾಧೀಶರುಗಳ ಸಲಹೆ ಸೂಚನೆ ಪಡೆಯುವ ಅಗತ್ಯವಿಲ್ಲ. ಆದುದರಿಂದ ಸರ್ವೋಚ್ಚ ನ್ಯಾಯಾಲಯಕ್ಕೆ ನೇಮಿಸಬೇಕೆಂದಿರುವ ನ್ಯಾಯಾಧೀಶರ ಪರಿಚಯವಿರುವ ಒಬ್ಬರು ನ್ಯಾಯಾಧೀಶರೊಡನೆ ಸಮಾಲೋಚಿಸುವ ವಿವೇಚನಾಧಿಕಾರವನ್ನು ಅವರಿಗೆ ವಹಿಸಿಕೊಡಬೇಕು. ಈ ಬಗ್ಗೆ ಬಹುತೇಕ ಸರ್ವಾನುಮತವಿದೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಉಚ್ಚಾಟನೆಯ ಬಗ್ಗೆ ಗಹನವಾದ ಭಿನ್ನಾಭಿಪ್ರಾಯವಿದೆ. ಒಂದು ಸಿದ್ಧಾಂತದ ಪರವಾಗಿ ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರಿದ್ದಾರೆ. ಅವರು ಒಂದು ತಿದ್ದುಪಡಿಯನ್ನು ಮಂಡಿಸಿದ್ದಾರೆ. ಅದರಂತೆ ರಾಷ್ಟ್ರಪತಿಗಳಿಗೆ ಶಾಸನಸಭೆಯ ಉಭಯ ಸದನಗಳು ಸಲ್ಲಿಸಿದ ಮನವಿಯಂತೆ ಸರ್ವೋಚ್ಚ ನ್ಯಾಯಾಲಯದ ಯಾರೇ ಒಬ್ಬರು ನ್ಯಾಯಾಧೀಶರನ್ನು ಉಚ್ಚಾಟಿಸಬಹುದು.

ನನ್ನ ತಿದ್ದುಪಡಿಯಂತೆ ಉಚ್ಚನ್ಯಾಯಾಲಯಗಳ ೭ ಉಚ್ಚ ನ್ಯಾಯಾಧೀಶರಿಗೆ ಕಡಿಮೆ ಇಲ್ಲದಂತೆ ನ್ಯಾಯಾಧಿಕರಣವನ್ನು ನೇಮಿಸಿ ತನಿಖೆ ಮಾಡಿಸುವ ಸ್ವಾತಂತ್ರ್ಯ ರಾಷ್ಟ್ರಪತಿಗಳಿಗೆ ಇರಬೇಕು. ಹಾಗೂ ಆರೋಪಕ್ಕೆ ಒಳಗಾಗಿರುವ ನ್ಯಾಯಾಧೀಶರನ್ನು ಅಥವಾ ನ್ಯಾಯಾಧೀಶರುಗಳನ್ನು ದುರ್ವರ್ತನೆ ಅಥವಾ ಭೌತಿಕ ಯಾ ಮಾನಸಿಕ ಅಸ್ಥಿರತೆಯ ಕಾರಣಕ್ಕಾಗಿ ಉಚ್ಚಾಟಿಸಬೇಕೆಂಬ ನಿರ್ಧಾರಕ್ಕೆ ಬರಬೇಕು. ಅನಂತರ ರಾಷ್ಟ್ರಪತಿ ಅವರನ್ನು ಉಚ್ಚಾಟಿಸಬೇಕು. ನ್ಯಾಯಾಧೀಶರ ಪಟ್ಟಿಯೊಂದನ್ನು ಈ ಉದ್ದೇಶಕ್ಕಾಗಿ ರಚಿಸಿ ಅವರ ವರದಿಯನ್ನಾಧರಿಸಿ ರಾಷ್ಟ್ರಪತಿ ಅವರನ್ನು ಉಚ್ಚಾಟಿಸಬಹುದೆಂಬ ಇನ್ನೊಂದು ತಿದ್ದುಪಡಿಯನ್ನು ಮಂಡಿಸಿದ್ದೇನೆ. ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಆಕ್ಷೇಪಣೆ ನ್ಯಾಯಿಕ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ಅಧಿಕಾರಿಯು ಒಕ್ಕೂಟದ ಕಾರ್ಯಾಂಗದ ಮುಖ್ಯಸ್ಥರ ಕೃಪೆಗೆ ಬೀಳಬೇಕೆಂಬ ಕಾರಣವನ್ನು ಆಧರಿಸಿದೆ. ನಿಜ; ನ್ಯಾಯಾಧೀಶರ ಸಮಿತಿಯೊಂದರ ವರದಿಯ ಆಧಾರದ ಮೇಲೆ ರಾಷ್ಟ್ರಪತಿಗಳು ಕ್ರಮ ಕೈಗೊಳ್ಳಬೇಕು. ಆದರೆ ಅವರ ಅಧಿಕಾರ ಸೀಮಿತ. ಆದರೆ ಸರ್ ಅಲ್ಲಾದಿಯವರು ಅಭಿಪ್ರಾಯಪಡುವಂತೆ ಈ ಅಧಿಕಾರ ಸಂಪೂರ್ಣ ರಾಷ್ಟ್ರಪತಿಯವರ ಕೈಯಲ್ಲೆ ಇರಬೇಕು. ಆಗ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ರಾಷ್ಟ್ರಪತಿಗೆ ಅಧೀನರಾಗಿರುತ್ತಾನೆ. ಆದುದರಿಂದ ಅವರು ಒಂದು ಪರಿಹಾರವನ್ನು ಸೂಚಿಸಿದ್ದಾರೆ. ಅದರಂತೆ ಶಾಸನಸಭೆ ಸರ್ವಾನುಮತದಿಂದ ರಾಷ್ಟ್ರಪತಿಗಳ ಮುಂದೆ ಪ್ರಸ್ತಾವ ಮಂಡಿಸಿದಾಗಷ್ಟೆ, ನ್ಯಾಯಾಧೀಶರನ್ನು ಉಚ್ಚಾಟಿಸಬೇಕು. ನಾನು ಒಂದು ಮಧ್ಯಮ ಮಾರ್ಗ ಸೂಚಿಸಿದ್ದೇನೆ ಮತ್ತು ಒಂದು ತಿದ್ದುಪಡಿಯನ್ನು ಮಂಡಿಸಿದ್ದೇನೆ. ಅದರಂತೆ ಸರ್ವೋಚ್ಚ ನ್ಯಾಯಾಲಯದ ಯಾರೇ ಒಬ್ಬರು ನ್ಯಾಯಾಧೀಶರನ್ನು, ಶಾಸನಸಭೆಯ ಉಭಯ ಸದನಗಳ ಮನವಿ ಪತ್ರ ಸಲ್ಲಿಕೆಯ ಆಧಾರದ ಮೇಲೆ ಉಚ್ಚಾಟಿಸಬಹುದು. ಆದರೆ ರಾಷ್ಟ್ರಪತಿಗೆ ಆ ಮನವಿ ಪತ್ರ ಸಲ್ಲಿಸುವ ಮೊದಲು ಅವರು ಉಚ್ಚ ನ್ಯಾಯಾಲಯದ ಏಳು ನ್ಯಾಯಾಧೀಶರ ಸಮಿತಿಯನ್ನು ನೇಮಕಮಾಡಿರಬೇಕು. ಆ ಸಮಿತಿಯ ನೇಮಕದ ಉದ್ದೇಶ, ಆರೋಪ ಕುರಿತು ತನಿಖೆ ಮಾಡುವುದು. ಆ ಸಮಿತಿಯು ಪ್ರಶ್ನಿಸಿ, ನ್ಯಾಯಾಧೀಶರು ಮಾಡಿರುವ ನಿಯಮೋಲ್ಲಂಘನೆಗಾಗಿ ಅವರು ಉಚ್ಚಾಟನಾರ್ಹರು ಎಂದು ವರದಿ ಮಾಡಿದಲ್ಲಿ ಆ ವರದಿಯನ್ನು ಅಭ್ಯಸಿಸಿ ಶಾಸನ ಸಭೆಯ ಉಭಯ ಸದನಗಳು ರಾಷ್ಟ್ರಪತಿಗೆ ಮನವಿ ಸಲ್ಲಿಸಬೇಕು; ಅಥವಾ ಅದನ್ನು ತಡೆದಿಟ್ಟುಕೊಳ್ಳಬಹುದು. ಆದುದರಿಂದ ಇದು ಎರಡೂ ಪರಿಹಾರಗಳ ಸಮ್ಮಿಶ್ರಣ. ನ್ಯಾಯಾಧೀಶರ ಉಚ್ಚಾಟನೆಯ ಮೇಲೆ ಶಾಸನಸಭೆಯ ನಿಯಂತ್ರಣ ಇರುತ್ತದೆ. ರಾಷ್ಟ್ರಪತಿಗಳಿಗೆ ಪ್ರತ್ಯೇಕವಾಗಿ ಈ ಅಧಿಕಾರವನ್ನು ವಹಿಸಿಕೊಡುವುದಿಲ್ಲ. ಅಥವಾ ನ್ಯಾಯಾಧೀಶರ ಸಮಿತಿಗೂ ನೀಡುವುದಿಲ್ಲ. ಉಭಯ ಸದನಗಳ ರಚನೆಯಾದ ಮೇಲೆ ಅವರ ಸಂಖ್ಯೆ ಸುಮಾರು ೬೦೦. ನಿಮಗೆ ನೆನಪಿರುವಂತೆ ರಾಷ್ಟ್ರಪತಿಗಳ ಉಚ್ಚಾಟನೆ ಸಂಬಂಧಿಸಿದಂತೆ ಒಂದು ತಿದ್ದುಪಡಿಯನ್ನು ಮಂಡಿಸಲಾಯಿತು. ಅದು ಅಂಗೀಕೃತವಾಯಿತು. ಅದರಂತೆ ಕೆಳಸದನ ಅಥವಾ ಉಭಯ ಸದನಗಳಲ್ಲಿ ಯಾವುದೇ ಸದನ ಛೀಮಾರಿ ಹಾಕಿ ರಾಷ್ಟ್ರಪತಿಗಳ ಉಚ್ಚಾಟನೆಗೆ ನಿರ್ಣಯವೊಂದನ್ನು ಮಂಡಿಸಬೇಕು. ಅದಕ್ಕೆಂದು ಇತರ ಸದನ ಒಂದು ಸಮಿತಿಯನ್ನು ರಚಿಸಬೇಕು. ಸಮಿತಿಯ ವರದಿಯನ್ನು ಅಭ್ಯಸಿಸಿ ನಿರ್ಣಯವೊಂದನ್ನು ರೂಪಿಸಬೇಕು. ಯಥೋಚಿತವಾಗಿ ಒಂದು ಸಣ್ಣ ಮಂಡಳಿ ಸಮ್ಮಿಶ್ರ ನ್ಯಾಯಾಲಯದ ನ್ಯಾಯಾಧೀಶರ ದುರ್ವರ್ತನೆಯ ಬಗ್ಗೆ ವಿಚಾರಣೆ ನಡೆಸಬೇಕು. ಅದರ ಫಲಿತಾಂಶವಾಗಿ ನ್ಯಾಯಾಧೀಶರ ಉಚ್ಚಾಟನೆಗೆ ಶಿಫಾರಸು ಮಾಡಬೇಕು. ಇಡೀ ೬೦೦ ಚಿಲ್ಲರೆ ಸದಸ್ಯರನ್ನೊಳಗೊಂಡ ಶಾಸನ ಸಭೆ ತನಿಖೆ ನಡೆಸಲು ಕಷ್ಟವಾಗಬಹುದು. ಇದು ಮಧ್ಯ ಪ್ರವೇಶಕ್ಕೆ ತಕ್ಕ ಪ್ರಕರಣವೆಂದು, ನ್ಯಾಯಾಧೀಶರ ಸಮಿತಿಯು ವರದಿ ಮಾಡಿದನಂತರ ಉಭಯ ಸದನಗಳು ಮಂಡಿಸುವುದು ಯುಕ್ತ. ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಸದಸ್ಯರಾಗಿದ್ದ ಸಪ್ರು ಸಮಿತಿ ತನ್ನ ವರದಿಯಲ್ಲಿ ಸಲಹೆ ಮಾಡಿರುವಂತೆ ಈ ಉದ್ದೇಶಕ್ಕಾಗಿ ನೇಮಕಗೊಳ್ಳುವ ಸಮಿತಿಯ ವರದಿಯ ಅನುಸಾರ, ರಾಷ್ಟ್ರಪತಿಗಳಿಗೆ ಸರ್ವೋಚ್ಚ ನ್ಯಾಯಾಲಯದ ಯಾರೇ ಒಬ್ಬರು ನ್ಯಾಯಾಧೀಶರನ್ನು

ಉಚ್ಚಾಟಿಸುವ ಅಧಿಕಾರವಿರಬೇಕು. ರಾಷ್ಟ್ರಪತಿಗಳಿಗೆ ವರದಿಯನ್ನು ಅಂಗೀಕರಿಸುವ ಇಲ್ಲವೆ ನಿರಾಕರಿಸುವ ಸಂಪೂರ್ಣ ಅಧಿಕಾರವಿರುತ್ತದೆ ಎಂಬ ಕಾರಣಕ್ಕಾಗಿ ಸಪ್ರು ಸಮಿತಿಯ ವರದಿಯ ಈ ಬಾಬಿನ ಬಗ್ಗೆ ಆಕ್ಷೇಪಣೆ ಇದ್ದರೆ ನ್ಯಾಯಾಂಗ ಮತ್ತು ಕಾರ್ಯಾಂಗ ಅಧಿಕಾರದ ಸಂಯೋಜನೆಯಂತೆ ರೂಪಿಸಿರುವ ನನ್ನ ತಿದ್ದುಪಡಿಯ ಮಂಡನೆಯಲ್ಲಿ ಯಾವುದೇ ಆಕ್ಷೇಪಕ್ಕೆ ಆಸ್ಪದವಿರಲಾರದು.

ನನ್ನ ತಿದ್ದುಪಡಿಯ ಅನಂತರದ ಬಾಬು ನ್ಯಾಯಾಧೀಶರುಗಳ ಅರ್ಹತೆ. ಇದು ಭಾರತ ಸರ್ಕಾರದ ಅಧಿನಿಯಮದಲ್ಲಿ ನಿಯಮಿತಗೊಳಿಸಿರುವ ಅರ್ಹತೆಗಳ ಪುನರಾವರ್ತನೆಯಷ್ಟೆ. ಇದಕ್ಕೆ ಶ್ರೀಮತಿ ದುರ್ಗಾಬಾಯಿ ಒಂದು ತಿದ್ದುಪಡಿಯನ್ನು ಮಂಡಿಸಿದ್ದಾರೆ. ನ್ಯಾಯಾಧೀಶರು ಭಾರತದ ಪೌರರೆ ಆಗಿರಬೇಕೆಂದು ಮಂಡಿಸಿದ್ದಾರೆ. ಮಂಡನೆಕಾರರು ಹೇಳಿದುದಕ್ಕಿಂತ ಹೆಚ್ಚಾಗಿ ಬೇರೇನೂ ಹೇಳುವ ಅಗತ್ಯವಿಲ್ಲ. ರಾಷ್ಟ್ರಪತಿಗಳ ಅರ್ಹತೆಗಳನ್ನು ತಿಳಿಸುವ ಖಂಡದಲ್ಲಿರುವಂತೆ ಸರ್ವೋಚ್ಚ ನ್ಯಾಯಾಲಯದಲ್ಲಿರುವ ನ್ಯಾಯಾಧೀಶರು ಭಾರತೀಯ ನಾಗರಿಕರೆ ಆಗಿರುವಂತೆ ನೋಡಿಕೊಳ್ಳುವುದು ನಮ್ಮ ಹೊಣೆಗಾರಿಕೆ; ಪ್ರಜಾಪ್ರಭುತ್ವದ ಕಾವಲಿಗ ಎಂಬ ಕಾರಣಕ್ಕಾಗಿ. ಅವರು ಘಟಕದ ಒಬ್ಬ ನಾಗರಿಕ ಆಗಿರಬೇಕು. ಮೂರನೆಯ ಅರ್ಹತೆಯೂ ಯುಕ್ತವಾಗಿರುತ್ತದೆ ಅದನ್ನೂ ಅಂಗೀಕರಿಸಬಹುದು.

ನಾಲ್ಕನೆಯ ಬಾಬು ವೇತನಕ್ಕೆ ಸಂಬಂಧಿಸಿದುದು. ವೇತನವೆಷ್ಟಿರಬೇಕೆಂಬುದನ್ನು ರಾಷ್ಟ್ರಪತಿಯ ವಿವೇಚನೆಗೆ ಬಿಡಬಾರದು. ಈ ಅಂಶ ಕುರಿತಂತೆ ನಾನೊಂದು ತಿದ್ದುಪಡಿಯನ್ನೂ ಸಹ ಮಂಡಿಸಿದ್ದೇನೆ. ಆದರೆ ಶ್ರೀ ಸಂತಾನಮ್ ಅವರು ತದ್ರೂಪು ತಿದ್ದುಪಡಿಯೊಂದನ್ನು ಮಂಡಿಸಿರುವುದರಿಂದ ನಾನು ನನ್ನ ತಿದ್ದುಪಡಿಯನ್ನು ಹೇರುತ್ತಿಲ್ಲ. ಒಬ್ಬ ವ್ಯಕ್ತಿಯು ಆ ಹುದ್ದೆಯಲ್ಲಿ ನೇಮಕಗೊಂಡು ಮುಂದುವರಿದಂತೆ ಶಾಸನಸಭೆಯಿಂದ ಆತನ ವೇತನದಲ್ಲಿ ಕಡಿತ ಸಲ್ಲದು. ಮಿಕ್ಕ ಪ್ರಕರಣಗಳಲ್ಲಿ ವೇತನವನ್ನು ಕಡಿತಗೊಳಿಸಲಾಗದು.

ಕೊನೆಯ ತಿದ್ದುಪಡಿ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದುದು. ನನಗೆ ವಿಷಾದವೆನಿಸುವುದೆಂದರೆ ಶ್ರೀ ಸಂತಾನಮ್ ಅವರು ಅಧಿಕಾರ ವ್ಯಾಪ್ತಿಯ ಪ್ರಶ್ನೆಯ ಬಗ್ಗೆ ಆಲೋಚಿಸಿದ ರೀತಿ ಸರಿಯಿಲ್ಲ. ಸರ್ವೋಚ್ಚ ನ್ಯಾಯಾಲಯ ಎಲ್ಲ ವಿಷಯಗಳಲ್ಲೂ ಪರಮೋಚ್ಚ ಅಧಿಕಾರ ಪಡೆದಿರಬೇಕು. ಆದರೆ ಸಮ್ಮಿಶ್ರೇತರ ಕಾನೂನುಗಳಿಗೆ ಸಂಬಂಧಿಸಿದಂತೆ ರಾಜ್ಯಗಳ ಪರವಾಗಿ ಒಂದು ಅಪವಾದವನ್ನು ಹುಟ್ಟು ಹಾಕಬಹುದು. ಸಂವಿಧಾನದ ಇತರೆ ಯಾವುದೇ ಕಾನೂನಿನ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಕಾನೂನು ರೂಪಿಸುವ ಅಧಿಕಾರವಿರಬೇಕು ಅದಕ್ಕೆ ರಾಜ್ಯಗಳೂ ಬದ್ಧವಾಗಿರಬೇಕು. ಬ್ರಿಟಿಷ್ ಭಾರತಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ದೇಶದ ಪರಮೋಚ್ಚ ನ್ಯಾಯಾಲಯ ಮತ್ತು ಅಂತರ ರಾಜ್ಯ ವಿಷಯಗಳಲ್ಲಿ ಮೂಲ ಅಧಿಕಾರ ವ್ಯಾಪ್ತಿ ಹೊಂದಿರುತ್ತದೆ. ನ್ಯಾಯಾಧಿಕರಣ ಅಧಿಕಾರವು ಎಲ್ಲ ಉಚ್ಚ ನ್ಯಾಯಾಲಯಗಳ ಮೇಲೂ ವ್ಯಾಪಿಸಿರುತ್ತದೆ. ನಮ್ಮ ಸರ್ವೋಚ್ಚ ನ್ಯಾಯಾಲಯ ಪ್ರಿವಿ ಕೌನ್ಸಿಲನ್ನು ಸ್ಥಾನಪಲ್ಲಟಗೊಳಿಸಬಹುದು. ಅದು ನ್ಯಾಯಾಧಿಕರಣ ಅಧಿಕಾರವನ್ನು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳೆರಡರ ಮೇಲೂ ಹೊಂದುತ್ತ ಬಂದಿದೆ. ಪ್ರಿವಿ ಕೌನ್ಸಿಲ್‌ನ ನ್ಯಾಯಾಧಿಕಾರ ವ್ಯಾಪ್ತಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ವರ್ಗಾಂತರಿಸಬಹುದು. ರಾಜ್ಯ ಕ್ರಿಮಿನಲ್ ಪ್ರಕರಣ ವಿಷಯದಲ್ಲಿ ಅದರ ನ್ಯಾಯಾಧಿಕಾರ ವ್ಯಾಪ್ತಿಯ ಮೇಲೆ ಕ್ವಚಿತ್ ನಿಯಂತ್ರಣ ಹೇರಬಹುದು.

ಈ ಸಂದರ್ಭದಲ್ಲಿ ನಾನು ಇನ್ನೊಂದು ಅಂಶವನ್ನು ಪ್ರಸ್ತಾವಿಸಲು ಬಯಸುತ್ತೇನೆ. ರಾಜ್ಯಗಳು ಒಪ್ಪಂದದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರ ವಹಿಸಿಕೊಡಲಾಗದೆಂದು ಹೇಳಲಾಗಿತ್ತು. ೧೯೩೫ರ ಭಾರತ ಸರ್ಕಾರದ ಅಧಿನಿಯಮ ಕೆಲ ನಿಬಂಧನೆಗಳೊಡನೆ ಕೆಲ ರಾಜ್ಯಗಳನ್ನು ಪದಾರೋಹಣ ಮಾಡುವ ಬಗ್ಗೆ ಆಲೋಚಿಸುತ್ತದೆ. ಆ ನಿಯಮಗಳಿಗೆ ಒಡಂಬಡಿಸಿ ರಾಜ್ಯಗಳು ಒಕ್ಕೂಟಕ್ಕೆ ಸೇರುವಾಗ ಸರ್ವೋಚ್ಚ ನ್ಯಾಯಕ್ಕೆ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುತ್ತವೆ. ಆ ಒಪ್ಪಂದದ ನಿಯಮ ನಿಬಂಧನೆಗಳ

ನ್ಯಾಯಿಕ ಪರಿಗಣನೆ ಮಾಡಿ ಅವುಗಳನ್ನು ಜಾರಿಗೆ ತರಬಹುದು. ಆದುದರಿಂದ ಅದು ತಪ್ಪಲ್ಲ. ಅಕ್ರಮವೂ ಅಲ್ಲ, ಅಧಿಕಾರ ವ್ಯಾಪ್ತಿಯ ಉಲ್ಲಂಘನೆಯೂ ಅಲ್ಲ. ಯಾವುದೇ ರಾಜ್ಯ, ಮಹಾಸಭೆಯ ನಿಬಂಧನೆಗೆ ಬದ್ಧವಾಗಿ ಸೇರುವಾಗ ಆ ನಿಬಂಧನೆಗಳು ಸರ್ವೋಚ್ಚ ನ್ಯಾಯಾಲಯದ ಅಧಿನಿಯಮದ ಅಧಿಕಾರ ವ್ಯಾಪ್ತಿಯ ಅವಿಭಾಜ್ಯ ಅಂಗಗಳಾಗಬೇಕೆಂಬ ತತ್ಸಮಾನ ಉಪಬಂಧಗಳನ್ನು ಅಳವಡಿಸುವುದು ತಪ್ಪಾಗುವುದಿಲ್ಲ. ಈ ವಿಷಯದಲ್ಲಿ ಹೆಚ್ಚಿನ ಅಧಿನಿಯಮವಿಲ್ಲದೆ, ಸರ್ವೋಚ್ಚ ನ್ಯಾಯಾಲಯ ತನಗೆ ವಹಿಸಿಕೊಟ್ಟ ಅಧಿಕಾರವನ್ನು ವಿಸ್ತರಿಸಬಹುದು. ಇದರಲ್ಲಿ ಹೊಸತೇನೂ ಇಲ್ಲ. ಆಗಲೆ ಇದು ೧೯೩೫ರ ಅಧಿನಿಯಮದಲ್ಲಿದೆ ಹಾಗೂ ಇದನ್ನು ಅಂಗೀಕರಿಸಬಹುದಾಗಿದೆ.

ಪ್ರಿವಿ ಕೌನ್ಸಿಲ್ ಮುಂದೆ ಈಗಿರುವ ಅಪೀಲುಗಳ ವಿಷಯಕ್ಕೆ ಬಂದಾಗ ಸ್ಥಿತ್ಯಂತರ ಉಪಬಂಧಗಳಲ್ಲಿ ಒಂದನ್ನು ಇದೇ ಕರಡಿನಲ್ಲಿ ಕಾಣಬಹುದೇನೋ ನಿಜ. ಆದರೆ ಆ ಉಪಬಂಧದಂತೆ ಇತ್ಯರ್ಥಗೊಳ್ಳಬೇಕಾದ ಎಲ್ಲ ಅಪೀಲುಗಳನ್ನೂ ಸ್ವತಃ ಪ್ರಿವಿಕೌನ್ಸಿಲ್ ಪೂರ್ಣಗೊಳಿಸಬೇಕು. ಅದರರ್ಥ ನಮಗೆ ಸ್ವಾತಂತ್ರ್ಯ ಬಂದಮೇಲೂ, ಹೊಸ ಸಂವಿಧಾನ ಜಾರಿಗೆ ಬಂದಮೇಲೂ, ಉಳಿದಿರುವ ಅಪೀಲುಗಳ ಮೇಲೆ ಪ್ರಿವಿ ಕೌನ್ಸಿಲ್ ಅಧಿಕಾರ ಚಲಾಯಿಸಬೇಕು. ಈ ವಿಷಯವನ್ನು ಸ್ಥಿತ್ಯಂತರ ಉಪಬಂಧಗಳ ಪರಿಶೀಲನೆಯ ಹಂತಕ್ಕೆ ಬಿಡೋಣವೆಂದು ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಸೂಚಿಸುತ್ತಾರೆ. ನಾನು ಆ ಸಲಹೆಯನ್ನು ಒಪ್ಪುತ್ತೇನೆ. ಈ ಎಲ್ಲ ಐದು ಅಂಶಗಳನ್ನು ಮತಕ್ಕೆ ಹಾಕಬೇಕೆಂಬುದು ನನ್ನ ಸಲಹೆ. ನೇಮಕಾತಿ, ಉಚ್ಚಾಟನೆ, ಅರ್ಹತೆ, ವೇತನ ನಿಗದಿಪಡಿಸುವುದು ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿ ಇವು ಒಂದೊಂದನ್ನೂ ಮತಕ್ಕೆ ಹಾಕುವ ಬದಲು ಇದು ಉತ್ತಮ.

**ಮಾನ್ಯ ಸಭಾಧ್ಯಕ್ಷರು** : ಇಂದು ನಗರಕ್ಕೆ ಮರಳುತ್ತಿರುವ ಶ್ರೀ ಜಗಜೀವನರಾಮ್ ಅವರನ್ನು ಬರಮಾಡಿಕೊಳ್ಳಲು ನಾನು ವಿಮಾನ ನಿಲ್ದಾಣಕ್ಕೆ ಹೋಗಬೇಕೆಂದಿರುವ ಕಾರಣ ಕೆಲ ಹೊತ್ತು ನನ್ನ ಗೈರು ಹಾಜರಿಗಾಗಿ ಸದನದ ಅನುಮತಿ ಬೇಡುತ್ತೇನೆ. (ಹರ್ಷೋದ್ಗಾರ) ನನ್ನ ಅನುಪಸ್ಥಿತಿಯಲ್ಲಿ ಸರ್ ವಿ.ಟಿ.ಕೃಷ್ಣಮಾಚಾರಿಯವರನ್ನು ಅಧ್ಯಕ್ಷ ಪೀಠವನ್ನಲಂಕರಿಸುವಂತೆ ಪ್ರಾರ್ಥಿಸುತ್ತೇನೆ. (ಅಧ್ಯಕ್ಷರು ಅನಂತರ ನಮ್ಮ ಸ್ಥಾನವನ್ನು ತೆರವು ಮಾಡಿದರು. ಉಪಸಭಾಧ್ಯಕ್ಷ ಸರ್ ವಿ.ಟಿ. ಕೃಷ್ಣಮಾಚಾರಿಯವರು ಹರ್ಷೋದ್ಗಾರದ ನಡುವೆ ಆಸೀನರಾದರು)

**ಶ್ರೀಯುತ ರೋಹಿಣಿ ಕುಮಾರ್ ಚೌಧುರಿ** (ಅಸ್ಸಾಮ್ : ಸಾಮಾನ್ಯ) : ಸನ್ಮಾನ್ಯ ಉಪಸಭಾಧ್ಯಕ್ಷರೆ, ನಾನು ಧ್ವನಿವರ್ಧಕದ ಮುಂದೆ ಮಾತನಾಡುವಾಗ ಗೌರವಾನ್ವಿತ ಸದಸ್ಯರು ತಮ್ಮ ಕಿವಿ ತಮಟೆಯನ್ನು ಭದ್ರಪಡಿಸಿಕೊಳ್ಳುವಂತೆ ಕೋರುತ್ತೇನೆ. ನಾನೇ ಒಂದು ಧ್ವನಿವರ್ಧಕ ಪೆಟ್ಟಿಗೆ, ಧ್ವನಿವರ್ಧಕದ ಮುಂದೆ ನಿಂತು ಮಾತನಾಡುವಾಗ ನನ್ನ ಧ್ವನಿ ಅವರಿಗೆ ಆಪತ್ಕಾರಿಯಾಗಬಹುದು. ಕ್ಷಮೆ ಕೋರಿ ಸದನವನ್ನು ಉದ್ದೇಶಿಸಿ ಮಾತನಾಡಲು ಬಯಸುತ್ತೇನೆ.

ಮಾನ್ಯರೆ, ನನಗನಿಸುತ್ತೆ ಚರ್ಚೆಯ ವಿಷಯ ಈಗ ಬಹಳ ಸಂಕೀರ್ಣವಾಗಿದೆ. ನನ್ನಂತಹ ಸರಳ ಮನಸ್ಸಿನ ವ್ಯಕ್ತಿಗಳು ಇಲ್ಲಿಯವರೆಗಿನ ಚರ್ಚೆಯನ್ನು ಕುರಿತು ತಿಳಿದುಕೊಂಡಿರುವುದನ್ನು ಸಭೆಯ ಮುಂದೆ ಪ್ರಸ್ತುತ ಪಡಿಸಲು ಪ್ರಯತ್ನಿಸುತ್ತೇನೆ. ನಾನಂದುಕೊಂಡಂತೆ ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಯ ಅನಂತರ ಪ್ರಿವಿಕೌನ್ಸಿಲ್‌ನ ಅಧ್ಯಾಯ ಮುಗಿಯುತ್ತದೆ. ಪ್ರಿವಿ ಕೌನ್ಸಿಲ್‌ನ ಇದುವರೆಗಿನ ಅಧಿಕಾರ ವ್ಯಾಪ್ತಿ ಹಸ್ತಾಂತರಗೊಂಡು, ಸರ್ವೋಚ್ಚ ನ್ಯಾಯಾಲಯ ಇನ್ನು ಮುಂದೆ ಅಧಿಕಾರ ಚಲಾಯಿಸಲಿದೆ. ಆದರೆ ಪ್ರಿವಿಕೌನ್ಸಿಲ್‌ನಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣದ ಇತ್ಯರ್ಥಕ್ಕೆ ಆಗುತ್ತಿದ್ದ ಅದೇ ವಿಳಂಬ ಇನ್ನು ಮುಂದೆಯೂ ಆಗಲಿದೆ. ಸಾರ್ವತ್ರಿಕ ಅಭಿಪ್ರಾಯದಂತೆ ಮಾನ್ಯರೆ, ನ್ಯಾಯಾಲಯದೊಳಗೆ ಪ್ರವೇಶಿಸುವುದು ಸುಲಭ ಹೊರಬರುವುದು ಸುಲಭವಲ್ಲ; ಬಲು ಕಷ್ಟ. ಪ್ರಿವಿ ಕೌನ್ಸಿಲ್‌ಗೆ ಯಾವುದೇ ವ್ಯಾಜ್ಯ ವಿಚಾರಣೆಗೆ

ಹೋದಾಗಲೂ ನಮ್ಮ ಅನುಭವ ಇದೇನೇ. ವಿಳಂಬದ ನಿವಾರಣೆಯ ಬಗ್ಗೆ ಯಾವುದೇ ಹೇಳಿಕೆ ಅಥವಾ ಕ್ರಮದ ಗೈರಿನಲ್ಲಿ ಪ್ರಿವಿಕೌನ್ಸಿಲ್ ದಿನಗಳಂತೆಯೇ ಈಗಲೂ ನ್ಯಾಯವಿತರಣೆಯಲ್ಲಿ ತಡವಾಗುತ್ತೆ. ಆದುದರಿಂದ ಸಂವಿಧಾನ ತಜ್ಞರಾದ ಅಥವಾ ತಜ್ಞ ವಕೀಲರನ್ನು ಅದರ ಬಗ್ಗೆ ಸಲಹೆ ಕೇಳುವ ಬದಲು ಈ ಸದನದಲ್ಲೆ ನ್ಯಾಯ ವಿತರಣಾನುಭವವುಳ್ಳ, ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಅಧಿಕಾರ ಚಲಾಯಿಸಿದ ತಜ್ಞರು, ನ್ಯಾಯ ನಿರ್ಣಯದಲ್ಲಿ ವಿಳಂಬವನ್ನು ತಡೆಯುವ ವಿಧಾನವನ್ನು ತಿಳಿಸಬಹುದು. ಏಕೆಂದರೆ ತಡವಾದ ನ್ಯಾಯ, ನ್ಯಾಯ ನಿರಾಕರಣೆಗೆ ಮೂಲವೆಂಬ ಸಂಗತಿ ಎಲ್ಲರೂ ತಿಳಿದಿರುವಂತಹುದೆ.

ಅನಂತರ ನಾವು ತಿಳಿದಂತೆ ರಾಷ್ಟ್ರಪತಿ, ನ್ಯಾಯಾಧೀಶರ ಸಮಿತಿಯೊಡನೆ ಸಮಾಲೋಚಿಸಿ ನ್ಯಾಯಾಧೀಶರನ್ನು ನೇಮಕ ಮಾಡುವರು. ಅಲ್ಲಿಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯಲ್ಲಿ ನ್ಯಾಯಾಧೀಶರ ದನಿಗೆ ಪ್ರಾಮುಖ್ಯ ದೊರೆಯುತ್ತದೆ. ಅದರರ್ಥ ಕೆಳಮಟ್ಟದ ನ್ಯಾಯಾಧೀಶರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡಲಿದ್ದಾರೆ. ಸರ್ವೋಚ್ಚ ನ್ಯಾಯಾಲಯಕ್ಕೆ ಯಾರು ಉಚ್ಚ ನ್ಯಾಯಾಧೀಶರಾಗಬೇಕೆಂಬ ಮೊದಲ ಸಲಹೆ ನೀಡುವವರು ಉಚ್ಚನ್ಯಾಯಾಲಯದ ನ್ಯಾಯಾಧೀಶರು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಖಂಡಿತವಾಗಿಯೂ ಸರ್ವೋಚ್ಚ ನ್ಯಾಯಾಧೀಶರಿಗಿಂತ ಕೆಳಮಟ್ಟದ ಸ್ಥಾನದಲ್ಲಿದ್ದು ಅವರಿಂದ ಸಲಹೆ ಬರುತ್ತದೆ. ಅದು ನನಗೆ ತಪ್ಪೆನಿಸುವುದಿಲ್ಲ. ಒಬ್ಬ ಸಬ್ ಇನ್ಸ್‌ಪೆಕ್ಟರ್ ಸಹ ತನ್ನ ಹಿರಿಯ ಅಧಿಕಾರಿಗಳ ಮೇಲಣ ಮೊಕದ್ದಮೆಯಲ್ಲಿ ತನಿಖೆ ನಡೆಸಬಹುದಾದರೆ ಸಾಧಾರಣ ಜನಪದರೂ ರಾಷ್ಟ್ರಪತಿಯನ್ನು ಚುನಾಯಿಸಬಹುದಾದರೆ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿ ಮಾಡುವುದಾಗಲಿ ಆ ಬಗ್ಗೆ ಸಲಹೆ ನೀಡುವುದಾಗಲಿ ಕಷ್ಟವಾಗುವುದಿಲ್ಲ. ವಾಸ್ತವವಾಗಿ ಇದಕ್ಕಿಂತ ಉತ್ತಮವಾದ ಸಲಹೆ ನೀಡಲು ನನಗೇ ತೋರುತ್ತಿಲ್ಲ. ಆದುದರಿಂದ ಅದೇ ಸರಿಯಾದ ಕ್ರಮವೆಂದುಕೊಳ್ಳುತ್ತೇನೆ.

ಅನಂತರ ಚರ್ಚೆಯ ಬಗ್ಗೆ ಕೇವಲ ನನ್ನ ಅಭಿಪ್ರಾಯವನ್ನು ತಿಳಿಸುತ್ತಿದ್ದೇನಷ್ಟೆ. ನನ್ನ ತಿಳಿವಳಿಕೆಗೆ ಬಂದಿರುವಂತೆ ಸಾಂವಿಧಾನಿಕ ವಿಷಯಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಸಮ್ಮಿಶ್ರ ನ್ಯಾಯಾಲಯದ ಅಧಿಕಾರವನ್ನೂ ತಾನೇ ಚಲಾಯಿಸುವುದೆಂದು ಭಾವಿಸಿದ್ದೇನೆ. ಅದಷ್ಟು ಮಾತ್ರವಲ್ಲ. ಕೆಲವು ಕಾನೂನು ವಿಷಯಗಳ ಬಗ್ಗೆ ಅದು ಸರ್ಕಾರಕ್ಕೆ ಸಲಹೆ ನೀಡುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಇದೊಂದು ತೀವ್ರತರ ಪ್ರಸ್ತಾವ. ಸರ್ಕಾರ ಮತ್ತು ಬಾಧಿತ ಪಕ್ಷಗಳ ನಡುವೆ ವ್ಯಾಜ್ಯ ಹುಟ್ಟಿದಾಗ ಮುಂದೆ ಕೆಲ ಕಾನೂನು ವಿಷಯಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಸರ್ಕಾರಕ್ಕೆ ಸಲಹೆ ನೀಡುವುದಾದರೆ ನ್ಯಾಯಾಧೀಶರು ಪಕ್ಷಪಾತ ರಹಿತವಾಗಿ ಹೇಗೆ ತಮ್ಮ ವಿವೇಚನಾನುಸಾರ ತೀರ್ಪು ನೀಡಬಲ್ಲರೋ ನನಗೆ ತಿಳಿಯದು. ಆ ಅಂಶದ ಬಗ್ಗೆ ನನಗೆ ಒಂದಿಷ್ಟು ತಿಳಿವಳಿಕೆ ನೀಡಬೇಕೆಂದು ಇಚ್ಛಿಸುತ್ತೇನೆ. ಈ ಕೆಲವು ಮಾತುಗಳಿಂದ ಈಗ ಮಂಡಿಸಿದ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ.

**ಶ್ರೀ ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಮಾನ್ಯರೆ, ಶ್ರೀ ಅನಂತಶಯನಮ್ ಅಯ್ಯಂಗಾರ್ ಮತ್ತು ಶ್ರೀ ಸಂತಾನಮ್ ಅವರು ಪ್ರಸ್ತಾವಿಸಿದ ಕೆಲ ವಿಷಯಗಳ ಬಗ್ಗೆ ಉತ್ತರಿಸಲು ಬಯಸುತ್ತೇನೆ.

ಮೊಟ್ಟ ಮೊದಲಿಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಯಾವುದೇ ವಿಶೇಷ ಅಥವಾ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುವ ವಿಷಯದಲ್ಲಿ, ಅದಕ್ಕಾಗಿ ವರದಿಯಲ್ಲಿ ಅವಕಾಶವಿದೆ. ಅದನ್ನು ಸದನದ ಅಂಗೀಕಾರಕ್ಕೆ ಸಲ್ಲಿಸಲಾಗಿದೆ. ವರದಿಯ ೭ನೇ ಖಂಡ ಹೀಗಿದೆ:

"ಒಂದು ವಿಷಯದ ಬಗ್ಗೆ ಒಕ್ಕೂಟದ ಶಾಸನ ಸಭೆ, ಶಾಸನ ರಚಿಸಲು ಸಮರ್ಥವಾಗಿದ್ದರೆ ಆ ಅಧಿಕಾರವನ್ನು ಅದೇ ವಿಷಯದ ಬಗ್ಗೆ ನಿರ್ಣಯಿಸುವ ಅಧಿಕಾರವನ್ನು ತಾನೇ ಆರಿಸಿದ ನ್ಯಾಯಾಧಿಕರಣಕ್ಕೆ ವಹಿಸಬಹುದೆಂಬುದು ಸುಸ್ಪಷ್ಟ. ಆ ಉದ್ದೇಶಕ್ಕಾಗಿ ಸರ್ವೋಚ್ಚ ನ್ಯಾಯಾಲಯವನ್ನು ಆಯ್ಕೆ ಮಾಡಿದರೆ ಆ ನ್ಯಾಯಾಲಯಕ್ಕೆ ವಹಿಸಿದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

ಆದುದರಿಂದ ಆ ವರದಿಯನ್ನು ನೀವು ಅಂಗೀಕರಿಸುವುದಾದರೆ ಹೆಚ್ಚುವರಿ ಅಧಿಕಾರವ್ಯಾಪ್ತಿನ್ನು ವಹಿಸಿಕೊಡಲು ಯಾವುದೇ ಪ್ರತಿರೋಧವಿರುವುದಿಲ್ಲ. ಸಂವಿಧಾನವು ರಚನೆಯಾಗಿ ಅಂತಿಮ ರೂಪ ತಾಳಿದಾಗ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುವುದಕ್ಕೆ ಅವಕಾಶ ಕಲ್ಪಿಸಬೇಕಾಗುತ್ತದೆ.

ಅನಂತರ ನನ್ನ ಮಿತ್ರ ಶ್ರೀ ಸಂತಾನಮ್ ಅವರು ಒಂದು ಟೀಕೆ ವ್ಯಕ್ತಪಡಿಸಿದರು. ವರದಿಯ ೧೧ನೇ ಕಂಡಿಕೆ ರೀತಿಯಲ್ಲಿ ವಿಶೇಷ ಒಪ್ಪಂದದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುವ ಸ್ವಾತಂತ್ರ್ಯ ಯಾವುದೇ ಭಾರತೀಯ ರಾಜ್ಯಕ್ಕಿದೆ ಎಂಬುದರ ಬಗ್ಗೆ ಅವರು ಟೀಕಿಸಿದರು. ಈ ಕಂಡಿಕೆಯಲ್ಲಿ ಸಮಿತಿಯು ಭಾರತೀಯ ರಾಜ್ಯಗಳ ವಿಷಯದಲ್ಲಿ ಚಲಾಯಿಸಬಹುದಾದ ಒಂದು ನಿರ್ದಿಷ್ಟ ಅಧಿಕಾರವನ್ನು ಕುರಿತು ವಿವೇಚಿಸುತ್ತಿತ್ತು. ಆ ಅಧಿಕಾರ ವ್ಯಾಪ್ತಿಗೆ ಅನ್ವಯಿಸುವ ಪ್ರಕರಣಗಳೆಂದರೆ, ಒಕ್ಕೂಟದ ಕಾನೂನಿನ ವ್ಯಾಖ್ಯಾನ, (ಸಂಬಂಧಿಸಿದ ರಾಜ್ಯದ ಹೊರಗಣ) ಘಟಕದ ಕಾನೂನಿನ ವ್ಯಾಖ್ಯಾನ. ಅದಕ್ಕಿಂತಲೂ ಮುಂದೆ ಹೋಗಲು ರಾಜ್ಯಗಳು ಸಿದ್ಧವಿರಲಿಲ್ಲ. ಕಾನೂನಿನ ಸಾಂವಿಧಾನಿಕ ಮಾನ್ಯತೆಯನ್ನು ಪರಾಮರ್ಶಿಸುವ ಅಧಿಕಾರವನ್ನು ನ್ಯಾಯಾಲಯವು ಪಡೆಯುವುದಲ್ಲದೆ ವಿಶೇಷ ಒಪ್ಪಂದದ ಮೇರೆ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನೂ ಸಹ ನ್ಯಾಯಾಲಯಕ್ಕೆ ವಹಿಸಿಕೊಡುವ ಸ್ವಾತಂತ್ರ್ಯ ಯಾವುದೇ ಭಾರತೀಯ ರಾಜ್ಯಕ್ಕಿದೆ. ಆದರೆ ಅದರಿಂದ ಶಾಸನಸಭೆಯ ಪರಮಾಧಿಕಾರಕ್ಕೇನೂ ಧಕ್ಕೆಯಿಲ್ಲ. ಏನೇ ಆಗಲಿ ಅದು ಸಮಿತಿಯ ಉದ್ದೇಶವೂ ಅಲ್ಲ, ಗುರಿಯೂ ಅಲ್ಲ. ಎರಡು ವಿಷಯಗಳ ಆವಶ್ಯಕತೆ ಇದೆ. ರಾಜ್ಯಗಳ ಮಟ್ಟಿಗೆ ಹೇಳುವುದಾದರೆ ೯ನೇ ಕಂಡಿಕೆಯಲ್ಲಿ ಸೂಚಿಸಿದಂತೆ ಅಧಿಕಾರ ವ್ಯಾಪ್ತಿಯಲ್ಲದೆ ಪೂರಕ ಅಧಿಕಾರವನ್ನು ನೀಡಲು ಅವು ಒಪ್ಪಬೇಕು. ಮತ್ತೆ ಇತರ ಅಗತ್ಯ ಪೂರ್ವಾರ್ಹತೆಯೂ ಬೇಕಿರುತ್ತೆ. ಎಂದರೆ ಸಮ್ಮಿಶ್ರ ಶಾಸನ ಸಭೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡಲು ಒಪ್ಪಬೇಕು. ಅದು ಉದ್ದೇಶವಾಗಿದ್ದರೆ, ತಿದ್ದುಪಡಿಗೆ ಅವಕಾಶವೇ ಇರುವುದಿಲ್ಲ. ರಾಜ್ಯಕ್ಕೆ ಸ್ವತಂತ್ರ ಅಧಿಕಾರ ಕೊಡುವುದು ಗುರಿಯಲ್ಲ; ಕೊಡಲು ಸಾಧ್ಯವೂ ಇಲ್ಲ. ಹೆಚ್ಚುವರಿ ಅಧಿಕಾರ ವ್ಯಾಪ್ತಿಯ ವಿಷಯವನ್ನು ಶಾಸನಸಭೆಗೆ ತಿಳಿಸಬೇಕು. ಆದುದರಿಂದ ರಾಜ್ಯಗಳು ಆಸಕ್ತಿ ಹೊಂದಿರುವ ವಿಷಯಗಳಲ್ಲಿ. ಅವುಗಳ ಸಮ್ಮತದೊಡನೆ. ಒಕ್ಕೂಟದ ಶಾಸನಸಭೆ ವಹಿಸಿಕೊಡಬಹುದಾದ ಅಧಿಕಾರ ವ್ಯಾಪ್ತಿಗೆ ಸಂವಿಧಾನದಲ್ಲಿ ವಿಶೇಷ ಅವಕಾಶ ಒದಗಿಸಬೇಕು. ಹೆಚ್ಚುವರಿ ಅಧಿಕಾರವ್ಯಾಪ್ತಿಯ ಅಗತ್ಯದ ವಿಷಯದಲ್ಲಿ ನಿಮ್ಮಲ್ಲಿ ನನ್ನ ನಿವೇದನೆ ಇದುವೆ. ಮಾನ್ಯರೆ, ವಾಸ್ತವವಾಗಿ ವರದಿಯ ಎರಡು ಖಂಡಗಳ ಗುರಿಯೂ ಅದುವೆ.

ಎರಡನೆಯದಾಗಿ ನ್ಯಾಯಾಧೀಶರ ಉಚ್ಚಾಟನೆಯ ಅಧಿಕಾರವನ್ನು ಸಂಸತ್ತಿಗೆ ವಹಿಸಿಕೊಡುವ ವಿಷಯ. ಮಾನ್ಯರೆ, ಇದರಲ್ಲಿ ಎಲ್ಲ ಆಧಿಪತ್ಯಗಳ ಸಂವಿಧಾನಗಳ ಪದ್ಧತಿಯನ್ನು ಅನುಸರಿಸಬೇಕೆಂದು ಕೋರುತ್ತೇನೆ. ಒಂದು ಕಡೆ, ನ್ಯಾಯಾಂಗದ ಪ್ರಾಮುಖ್ಯ ಹೆಚ್ಚಿಸುವ ಕಾತರ; ಮತ್ತೊಂದೆಡೆ ನ್ಯಾಯಾಂಗವನ್ನು ಸರ್ಕಾರಿ ಸೇವಕರ ಸ್ತರದಲ್ಲಿ ಪರಿಗಣಿಸುವುದೇಕೆಂಬುದು ನನಗೆ ಅರ್ಥವಾಗುತ್ತಿಲ್ಲ ಅಥವಾ ಉಚ್ಚಾಟನೆಯ ಅಧಿಕಾರ ಹೊಂದಿದ, ಒಂದು ಬಗೆಯ ವಿಶೇಷ ನ್ಯಾಯಾಧಿಕರಣದ ರಚನೆಯ ಔಚಿತ್ಯವೂ ತಿಳಿಯುತ್ತಿಲ್ಲ. ಆ ಕಾರಣದಿಂದಲೆ ಆಧಿಪತ್ಯದ ಸಂವಿಧಾನಗಳಲ್ಲಿ ರುಜುವಾತು ಪಡಿಸಿದ ದುರ್ವರ್ತನೆ ಎಂಬ ಪದಗಳನ್ನು ಬಳಸಲಾಗಿದೆ. ಅಂತಿಮ ಅಧಿಕಾರವು ಉಭಯ ಸದನಗಳ ಕೈಯಲ್ಲಿರುವಾಗ ಆರೋಪಗಳು ಸಾಬೀತಾಗಬೇಕೆಂಬುದನ್ನು ಖಂಡವು ಅಗತ್ಯಪಡಿಸುತ್ತದೆ. ಹೇಗೆ ಸಾಬೀತುಪಡಿಸಬೇಕೆಂಬುದನ್ನು ಸಮ್ಮಿಶ್ರ ಕಾನೂನು ತಿಳಿಸುತ್ತದೆ. ಇತರ ಅಧಿಕಾರವ್ಯಾಪ್ತಿಗಳಲ್ಲಿ, ಇಂತಹುದೆ ಒಂದು ಪ್ರಕರಣದಲ್ಲಿ, ವಿಚಾರಣೆ ನಡೆಸಿದವರಿಗಿಂತ, ಹೆಚ್ಚಾಗಿ ಕ್ರಮಬದ್ಧತೆ ಹಾಗೂ ವಿವರಗಳ ಬಗ್ಗೆ ನಾವು ಚಿಂತಿಸಬೇಕಿಲ್ಲ. ಜಗತ್ತಿನ ಬೇರೆಡೆ ಎಲ್ಲಾದರೂ ಇದಕ್ಕಿಂತ ಹೆಚ್ಚಾಗಿ ನ್ಯಾಯಾಧೀಶರ ಉಚ್ಚಾಟನೆಯ ಬಗ್ಗೆ ವಿವರಪೂರ್ಣ ಉಪಬಂಧವಿದ್ದರೆ ತಿಳಿಸಿ ಎಂದು ನನ್ನ ಮಿತ್ರರಿಗೆ ಸವಾಲೊಡ್ಡಿದೆ. ಸಂವಿಧಾನದಲ್ಲಿ ಸಾಮಾನ್ಯ ನಿಯಮ ನಿರೂಪಿಸಲ್ಪಟ್ಟಿದೆ. ಅನಂತರ ಸಮ್ಮಿಶ್ರ ಕಾನೂನು

ಸಮರ್ಪಕ ಕಾರ್ಯತಂತ್ರ ರೂಪಿಸುತ್ತದೆ. ಅದು ಖಂಡದ ಸಾರಭೂತ. ಆದುದರಿಂದ ಸಾಮಾನ್ಯ ನಿಯಮವನ್ನು ಅಂಗೀಕರಿಸುವಂತೆ ನಾನು ಸದನವನ್ನು ಕೋರುತ್ತೇನೆ. ಅರ್ಥಾತ್ ರಾಷ್ಟ್ರದ ಪರಮೋಚ್ಚ ಶಾಸನಸಭೆಯೊಡನೆ ಸಮಾಲೋಚಿಸುವ ಅಧಿಕಾರ ರಾಷ್ಟ್ರಪತಿಗೆ ಇರುತ್ತದೆ. ಅದರಿಂದ ಪರಮೋಚ್ಚ ಸಭೆ, ಅದನ್ನು ದುರುಪಯೋಗ ಮಾಡಿಕೊಳ್ಳುತ್ತದೆ ಎಂಬರ್ಥವಲ್ಲ. "ರುಜುವಾತು ಪಡಿಸಿದ ದುರ್ವರ್ತನೆ" ಎಂಬ ಉಲ್ಲೇಖದಲ್ಲಿ ಸಾಕಷ್ಟು ಸುರಕ್ಷತೆ ಇರುತ್ತದೆ. ಯಾವುದೇ ಒಕ್ಕೂಟ ಕಾನೂನಿನಲ್ಲಿ ಅಪರಾಧವನ್ನು ನ್ಯಾಯಾಧೀಶರ ಗಮನಕ್ಕೆ ತರುವ ಬಗ್ಗೆ ವಿವರಪೂರ್ಣ ಮತ್ತು ಸಮರ್ಪಕ ಉಪಬಂಧವನ್ನು ಅಳವಡಿಸಬಹುದು. ಅದು ಬೇರೆ ವಿಷಯ.

ಆದರೆ ಓರ್ವ ನಿರ್ದಿಷ್ಟ ನ್ಯಾಯಾಧೀಶರ ವಿರುದ್ಧ, ಛೀಮಾರಿ ಹಾಕಲೆಂದು ರಚಿಸಬೇಕಾದ ಆರೋಪಗಳ ಸೇರ್ಪಡೆಗೆ ಸಂವಿಧಾನದಲ್ಲಿ ಅವಕಾಶ ಕಲ್ಪಿಸಬೇಕಾದ ಅಗತ್ಯ ನನಗೆ ಕಂಡುಬರಲಿಲ್ಲ. ಈ ಎಲ್ಲಕ್ಕೂ ಒಂದು ವಿವರವಾದ ಉಪಬಂಧವನ್ನು ಸಂವಿಧಾನದಲ್ಲಿ ಸೇರಿಸುವುದು ನೂತನ ಪ್ರಕ್ರಿಯೆ. ಅದನ್ನು ಬೇರಾವ ಸಂವಿಧಾನದಲ್ಲೂ ಕಾಣಲಾಗದು ವಿವರಪೂರ್ಣವಾದ ಜರ್ಮನ್ನಿಯ ಸಂವಿಧಾನದಲ್ಲೂ ಸಹ ಅಥವಾ ಆಧಿಪತ್ಯಗಳ ಸಂವಿಧಾನಗಳಲ್ಲಿ, ಅಂತೆಯೇ ವ್ಯವಸ್ಥಾಪನಾ ಅಧಿನಿಯಮದಲ್ಲೂ ಸಹ; ಅಂತೆಯೇ ನ್ಯಾಯಾಧೀಶರ ಉಚ್ಚಾಟನೆಯ ಉಲ್ಲೇಖವಿರುವ ಬ್ರಿಟಿಷ್ ಸಂಸತ್ ಅಧಿನಿಯಮದಲ್ಲೂ ಇಲ್ಲ. ಸರ್ವೋಚ್ಚ ನ್ಯಾಯಾಲಯದ ಉಚ್ಚ ನ್ಯಾಯಧೀಶರ ಉಚ್ಚಾಟನೆಯ ಬಗ್ಗೆ ನಾಲ್ಕೈದು ನ್ಯಾಯಾಧೀಶರು ತೀರ್ಪು ನೀಡುವ ಕಾರ್ಯತಂತ್ರವನ್ನು ರೂಪಿಸಬಾರದೆಂಬುದಕ್ಕೆ ನಾವು ನ್ಯಾಯಾಧೀಶರಿಗೆ ಕೊಡುವ ಅಪಾರ ಗೌರವವೆ ಕಾರಣವಿರಬಹುದೆಂದು ನಾನಂದುಕೊಂಡಿದ್ದೇನೆ. ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಗೌರವವನ್ನು ಉನ್ನತಿಗೇರಿಸುವ ಬಗ್ಗೆ ತಾವೆಲ್ಲರೂ ಗಂಭೀರವಾಗಿ ಆಲೋಚಿಸುತ್ತಿದ್ದೀರಾ? ಹೌದು. ನನಗದರಲ್ಲಿ ಸಂದೇಹವೇ ಇಲ್ಲ. ಹಾಗಿದ್ದರೆ ಅವರ ಉಚ್ಚಾಟನೆಗೆ ಯಾವುದಾದರೊಂದು ಬಗೆಯ ಅಧಿಕಾರ ಎಲ್ಲೋ ಇರಬೇಕು. ಆ ಕಾರಣದಿಂದಲೇ ರಾಷ್ಟ್ರದ ಪರಮೋಚ್ಚ ಸಂಸತ್ ಸಭೆಗೆ ಆ ಅಧಿಕಾರವನ್ನು ವಹಿಸಿಕೊಟ್ಟಿದ್ದೀರಿ. ಆದರೆ ಅದು ನಿರುಪಾಧಿಕವಾಗಿ ಅಲ್ಲ. ಅದು ವ್ಯಕ್ತ, ಸ್ವಾಭಾವಿಕ, ಸಾಧಾರಣ ಪಾರಂಪರಿಕ ಕ್ರಮಗಳಿಂದ ನಡೆಯುವ ಅಧಿಕಾರ ನ್ಯಾಸವಾಗಬೇಕು. ಉಭಯ ಸದನಗಳ ಯಾವ ಒಂದರ ವಿವೇಚನೆಗೂ ಉಚ್ಚಾಟನೆಯ ನಿರ್ಧಾರ ಬಿಟ್ಟಿದ್ದಲ್ಲ. ಆದರೆ ಅದು ಸಂಸತ್ತಿನ ಉಭಯ ಸದನಗಳಿಗೆ ವಹಿಸಿದ ಅಂತಿಮ ಸರ್ವತಂತ್ರ ಸ್ವತಂತ್ರ ಅಧಿಕಾರ. ಮಾನ್ಯರೆ ಅದು ನನ್ನ ತಿದ್ದುಪಡಿಯ ಅಭಿಪ್ರಾಯ.

ಅನಂತರ ಎತ್ತಲಾದ ಅಂಶಗಳೆಂದರೆ ಭಾರತ ಸರ್ಕಾರದ ಅಧಿನಿಯಮದಿಂದ ಎರವಲು ಪಡೆದವು ಎಂಬುದನ್ನು ತಾವು ನೆನಪಿನಲ್ಲಿಡಬೇಕು. ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿ ತಿಳಿಸಿರುವಂತೆ ನ್ಯಾಯಾಧೀಶರ ಸೇವಾವಧಿಯಲ್ಲಿ ವೇತನವನ್ನು ಕಡಿತಗೊಳಿಸಲಾಗದು. ತಾವು ಯಾವ ಗಣ್ಯರಿಗೆ ಸಂವಿಧಾನದ ಕರಡು ರಚನೆಯ ಕಾರ್ಯವನ್ನು ವಹಿಸಿಕೊಡುತ್ತೀರೋ ಅವರು ಇದಕ್ಕೆ ಅನ್ವಯಿಸಿದ ಉಪಬಂಧವನ್ನು ಹೊಸ ಸಂವಿಧಾನದಲ್ಲಿ ಅಳವಡಿಸಲು ಎಚ್ಚರಿಕೆ ವಹಿಸುತ್ತಾರೆಂಬ ಭರವಸೆ ನನಗಿದೆ. ಹೊಸ ಸಂವಿಧಾನದಲ್ಲಿ ಎಂದಿನಂತೆ ನಿಯತ ನ್ಯಾಯಾಂಗ ಅಧಿನಿಯಮವನ್ನು ಸಕ್ರಮಗೊಳಿಸಲು ಉಪಕ್ರಮಿಸದಿರಲು ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ. ನನ್ನ ತಿದ್ದುಪಡಿಯ ಬಗ್ಗೆ ನನಗೆ ಅತಿಯಾದ ಕಾಳಜಿ ಏನೂ ಇಲ್ಲ. ಇದರ ಅಂಗೀಕಾರ ಅಥವಾ ತಿರಸ್ಕಾರದ ವಿಷಯವನ್ನು ಸದನಕ್ಕೆ ಬಿಡುತ್ತೇನೆ. ಆದರೆ ಅನಗತ್ಯ ಉಪಬಂಧಗಳ ಸೇರ್ಪಡೆಯಾಗದೆಂದು ನಂಬುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ಪ್ರತಿಯೋರ್ವ ನ್ಯಾಯಾಧೀಶನೂ ಭಾರತೀಯ ಪೌರನೆ ಆಗಿರಬೇಕೆಂಬ ತಿದ್ದುಪಡಿಯನ್ನು ನಾನು ಮಂಡಿಸಿದೆ. ಮಾನ್ಯ ಸಭಾಧ್ಯಕ್ಷರೆ, ಇದನ್ನು ಕುರಿತು ನಾನೇನೂ ಹೆಚ್ಚಿಗೆ ಹೇಳುವಂತಿಲ್ಲವೆಂಬುದು ನನಗೆ ತಿಳಿದಿದೆ. ಈ ವಿಷಯದ ಪ್ರಾಮುಖ್ಯವನ್ನು ಸದನ ಅರಿತಿದೆ ಹಾಗೂ ನನ್ನೊಡನೆ ಸಹಮತ ವ್ಯಕ್ತಪಡಿಸುತ್ತದೆ. ನನ್ನ ತಿದ್ದುಪಡಿ ಅಂಗೀಕೃತವಾದರೆ ಅದರ ಪರಿಣಾಮವಾಗಿ

ನ್ಯಾಯಾಧೀಶರ ನೇಮಕಾತಿಯ ಕ್ಷೇತ್ರದಿಂದ ಪರಕೀಯನನ್ನು ಯಾ ವಿದೇಶಿ ಅಭ್ಯರ್ಥಿಯನ್ನು ಹೊರಗಿಡುತ್ತದೆ. ನಾನು ಒಂದೆರಡು ಮಾತುಗಳನ್ನು ಸೇರಿಸಲು ಬಯಸುತ್ತೇನೆ. ಭಾರತದ ಆಧಿಪತ್ಯಕ್ಕೆ ತನ್ನ ನಿಷ್ಠೆಯನ್ನು ತೋರುವ ನಾಗರಿಕನೊಬ್ಬನೆ ಹುದ್ದೆಗೆ ಸಮರ್ಥನಾಗಿರುತ್ತಾನೆ. ಒಬ್ಬ ಪರಕೀಯನಿಗೆ ಅಥವಾ ವಿದೇಶಿ ವ್ಯಕ್ತಿಗೆ ಆತನೆಷ್ಟೆ ಪರಿಪೂರ್ಣನಿರಲಿ ನ್ಯಾಯಶಾಸ್ತ್ರದಲ್ಲಿ ಪ್ರಾಜ್ಞನಿರಲಿ ಈ ಹುದ್ದೆಗೆ ತಕ್ಕ ಕ್ಷಮತೆ ಇರುವುದಿಲ್ಲ. ಅದು ನನ್ನ ತಿದ್ದುಪಡಿಯ ಪರಿಣಾಮ. ಮಾನ್ಯ ಸಭಾಧ್ಯಕ್ಷರೆ ನಾವು ಈಗಾಗಲೇ ಮಹಾಸಭೆ ಮತ್ತು ಪ್ರಾಂತೀಯ ರಾಜ್ಯಪಾಲರ ವಿಷಯದಲ್ಲಿ ಅರ್ಹತೆಯನ್ನು ಸ್ಪಷ್ಟಪಡಿಸಿದ್ದೇವೆ. ಈ ಎರಡು ವಿಷಯಗಳಲ್ಲಿ ನಿಯಮಿಸಿರುವುದಾದರೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ನಿಯಮಿಸುವುದು ಇದಕ್ಕಿಂತಲೂ ಹೆಚ್ಚು ಅಗತ್ಯ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಸರ್ವೋಚ್ಚ ನ್ಯಾಯಾಲಯ ಕಾವಲಿಗನಂತೆ, ಪ್ರಜಾಪ್ರಭುತ್ವ ಮೂಲಭೂತ ಹಕ್ಕುಗಳ ಖಾತರಿ ನೀಡುತ್ತದೆ. ಭಾರತೀಯ ನಾಗರಿಕರ ಇತರ ಸವಲತ್ತುಗಳಿಗೆ ಖಾತರಿ ದೊರೆಯುವುದು ಪ್ರಜಾಪ್ರಭುತ್ವದಿಂದ, ಸದನದ ಅಂಗೀಕಾರಕ್ಕೆ ನನ್ನ ತಿದ್ದುಪಡಿಯನ್ನು ಶಿಫಾರಸು ಮಾಡುವ ಮುನ್ನ ನಾನು ಹೇಳಬಯಸುವುದಿಷ್ಟೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಭಾವಿ ಒಕ್ಕೂಟದ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಮತ್ತು ಪ್ರಕಾರ್ಯ. ಈ ಬೆಳಗ್ಗೆ ಅಗತ್ಯಕ್ಕಿಂತ ಹೆಚ್ಚು ಕಾಲಾವಧಿ ಬೇಡುವುದೆಂದು ತಿಳಿದಿದ್ದೆ. ಆದರೆ ಮುಖ್ಯ ವಿಷಯಗಳೆಲ್ಲ ಇಂದು ಪ್ರಸ್ತಾವಿಸಿದ ತಿದ್ದುಪಡಿಗಳ ರೂಪದಲ್ಲಿ ಸದನದ ಮುಂದೆ ನಿವೇದಿಸಲ್ಪಟ್ಟಿವೆ ಎನಿಸುತ್ತದೆ. ಸರ್ ಅಲ್ಲಾದಿ ಅವರು ಸದನದ ಮುಂದಿಟ್ಟ ಪ್ರಸ್ತಾವಗಳನ್ನು ಸಾಮಾನ್ಯವಾಗಿ ನಾನು ಅನುಮೋದಿಸುತ್ತೇನೆ. ಅವುಗಳಲ್ಲೊಂದು ಸಾಮಾನ್ಯ ಪ್ರಸ್ತಾವ ಹೀಗಿದೆ. ಸಂವಿಧಾನದ ಪಠ್ಯದೊಳಗೆ ಅಳವಡಿಸಬೇಕಾದ ಮೂಲಭೂತ ನಿಯಮಗಳನ್ನು ಇತ್ಯರ್ಥ ಪಡಿಸುವಾಗ ಅಧಿಕಾರ ವ್ಯಾಪ್ತಿಯ ಬಗ್ಗೆಯಾಗಲಿ, ಪ್ರಕ್ರಿಯೆಯ ಬಗ್ಗೆಯಾಗಲಿ ನಾವು ಅತಿಯಾದ ವಿವರಗಳಿಗೆ ಹೋಗಬೇಕಿಲ್ಲ ಈ ನಿಯಮಗಳ ಒಳಗೆ ಸಂವಿಧಾನದ ಮುಖ್ಯ ಪರಿಶೀಲನಾರ್ಹ ಅಂಶಗಳನ್ನಷ್ಟೆ ಸೇರಿಸಬೇಕು. ಅವು ಅನಂತರ ಸಂವಿಧಾನ ರಚನಾಸಭೆಯ ಅವಗಾಹನೆಗೆ ಬರುತ್ತವೆ. ನನಗೆ ತೃಪ್ತಿತರುವ ಸಂಗತಿ ಎಂದರೆ ನ್ಯಾಯಾಲಯದ ವಿಷಯದಲ್ಲಿ ತಾತ್ಪೂರ್ತಿಕ ಸಮಿತಿಯ ವರದಿಯ ಪ್ರಸ್ತಾವಗಳನ್ನು ಸದನ ಅಂಗೀಕರಿಸಿದೆ. ಸಮಿತಿಯ ವರದಿಯಲ್ಲಿ ಇರುವ ಒಂದಂಶದ ಬಗ್ಗೆ ಸದನದ ಗಮನ ಸೆಳೆಯಲು ಬಯಸುತ್ತೇನೆ. ಅದರಲ್ಲಿರುವಂತೆ ಅನೇಕ ಅಂಶಗಳನ್ನು ವರದಿ ಒಳಗೊಂಡಿದೆಯಾದರೂ ಕೆಲವೊಂದನ್ನು ಮಾತ್ರ ಸಂವಿಧಾನದಲ್ಲಿ ಅಳವಡಿಸುವುದು ಅಗತ್ಯ. ಮಿಕ್ಕವೆಲ್ಲ ನ್ಯಾಯಾಂಗ ಅಧಿನಿಯಮದೊಳಗೆ ಸೇರತಕ್ಕವು. ಒಕ್ಕೂಟ ಸಂಸತ್ತು ಅಸ್ತಿತ್ವಕ್ಕೆ ಬಂದಾಗ ಅದು ಅಂಗೀಕರಿಸಲ್ಪಡಬಹುದು. ಆ ವಾಸ್ತವತೆಯನ್ನು ನಾವು ನೆನಪಿನಲ್ಲಿಟ್ಟರೆ ಪ್ರಸ್ತುತದಲ್ಲಿ ಅತಿಹೆಚ್ಚಿನ ವಿವರಗಳಿಗೆ ಹೋಗುವುದು ಅನಗತ್ಯವೆಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು.

ಈಗಾಗಲೇ ಎತ್ತಲಾದ ಒಂದೆರಡು ವಿಷಯಗಳನ್ನು ಮಾತ್ರ ನಾನು ವಿವರಿಸಲು ಇಷ್ಟಪಡುತ್ತೇನೆ. ಕೊನೆಯ ಅಂಶವನ್ನು ಕುರಿತು ಮೊದಲು ಮಾತನಾಡುತ್ತೇನೆ. ಸರ್ವೋಚ್ಚ ನ್ಯಾಯಾಲಯದ ಪ್ರತಿಯೊರ್ವ ನ್ಯಾಯಾಧೀಶರೂ ಭಾರತೀಯ ನಾಗರಿಕರಾಗಿರಬೇಕೆಂದು ಶ್ರೀಮತಿ ದುರ್ಗಾಬಾಯಿಯವರು ಸಲಹೆ ಮಾಡಿದ್ದಾರೆ. ಸಾಮಾನ್ಯ ಪ್ರಸ್ತಾವದ ರೂಪದಲ್ಲಿ ಅದರ ಬಗ್ಗೆ ಯಾರ ಆಕ್ಷೇಪಣೆಯೂ ಇಲ್ಲ. ಆದರೆ ಸಂವಿಧಾನವನ್ನು ಜಾರಿಗೊಳಿಸುವಾಗ ನ್ಯಾಯಾಲಯದ ರಚನೆಯನ್ನು ಪ್ರಾಯಃ ಗಣನೆಗೆ ತೆಗೆದುಕೊಳ್ಳಬೇಕಾಗುತ್ತೆ. ಈಗ ತಿದ್ದುಪಡಿಯಲ್ಲಿ ಪ್ರಸ್ತಾವಿಸಿರುವಂತೆಯೇ ಸಂವಿಧಾನದೊಳಗೆ ಅಡಕಗೊಳಿಸಬೇಕೆ ಅಥವಾ ಬೇರಾವ ರೀತಿಯಲ್ಲೆ ಎಂಬುದನ್ನು ಕರಡು ತಯಾರಕರಿಗೆ ಬಿಡಬೇಕೆಂದು ಸೂಚಿಸುತ್ತಿದ್ದೇನೆ.

ಮಾನ್ಯರೆ, ಚರ್ಚೆಯಲ್ಲಿ ಪ್ರಸ್ತಾಪಿಸಲಾದ ಎರಡನೆಯ ಅಂಶವೆಂದರೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದುದು. ತಾತ್ಪೂರ್ತಿಕ ಸಮಿತಿ ಕೆಲವು ಪ್ರಸ್ತಾವಗಳನ್ನು ಮುಂದಿಟ್ಟಿತು.

ಒಕ್ಕೂಟದ ಸಂವಿಧಾನ ಸಮಿತಿಯು ಅದನ್ನು ಪರಿಷ್ಕರಿಸಿತು. ಒಕ್ಕೂಟದ ಸಂವಿಧಾನ ಸಮಿತಿ ಮುಂದಿಟ್ಟ ಪರಿಷ್ಕೃತ ಶಿಫಾರಸುಗಳನ್ನು ಮತ್ತಷ್ಟು ಪರಿಷ್ಕರಿಸುವಂತೆ ಪ್ರಸ್ತಾವಿಸಲಾಗಿದೆ. ನನ್ನ ಗಮನಕ್ಕೆ ಬಂದಿರುವ ಮಟ್ಟಿಗೆ ಈ ನೇಮಕಾತಿಯನ್ನು ಮಾಡಬೇಕಾದ ಮೂಲಭೂತ ನಿಯಮಗಳ ಬಗ್ಗೆ ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಹಾಗೂ ಶ್ರೀ ಸಂತಾನಮ್ ಅವರಲ್ಲಿ ಪರಸ್ಪರ ಸಹಮತವಿದೆ. ಮಹಾಸಭೆಯ ಅಧ್ಯಕ್ಷರು ನೇಮಕಾತಿ ಮಾಡಬೇಕು. ಈ ಸಂಬಂಧವಾಗಿ ತಮ್ಮ ಅರ್ಹತೆಗಳನ್ನು ನಿವೇದಿಸಿರುವವರ ಬಗ್ಗೆ ಪರಿಶೀಲಿಸಲು ಅವರ ಅರ್ಹತೆ ಮತ್ತು ಕಾರ್ಯವೈಖರಿಯ ಪರಿಚಯ ಹೊಂದಿರುವವರೊಡನೆ ಸಮಾಲೋಚಿಸಿ ಅನಂತರ ನೇಮಕ ಮಾಡಬೇಕು. ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಪ್ರಸ್ತಾವಿಸಿದಂತೆ ರಾಷ್ಟ್ರಪತಿಗಳು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಇತರ ನ್ಯಾಯಾಧೀಶರು ಹಾಗೂ ಆ ಉದ್ದೇಶಕ್ಕಾಗಿ ಅಗತ್ಯಬಿದ್ದರೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳೊಡನೆ ಸಮಾಲೋಚಿಸಿ ರಾಷ್ಟ್ರಪತಿಗಳು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡಬೇಕು. ಅದನ್ನೆ ಕಾರ್ಯಸಾಧ್ಯವಾಗುವಂತೆ ಶ್ರೀ ಸಂತಾನಮ್ ಅವರು ತಮ್ಮ ತಿದ್ದುಪಡಿಯಲ್ಲಿ ಸಲಹೆ ಮಾಡಿದ್ದಾರೆ. ಇದರ ಬಗ್ಗೆ ಒಂದು ಟೀಕೆಯೆದ್ದಿತು. ಅದೇಂದರೆ ಈ ಉಪಬಂಧ ಮುಖ್ಯ ನ್ಯಾಯಾಧೀಶರ ನೇಮಕಾತಿಯ ಬಗ್ಗೆ ಏನೂ ಅವಕಾಶವೊದಗಿಸಿಲ್ಲ. ಹೀಗೆ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ಮಾಡಿರುವ ಟೀಕೆಯನ್ನು ಮೊದಲೆ ನಿರೀಕ್ಷಿಸಿ ಅದನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆ ಎನಿಸುತ್ತೆ. ಖಂಡವು ಈಗಿರುವ ರೂಪದಲ್ಲೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಎಂದಾಗ ಅದರಲ್ಲಿ ಮುಖ್ಯ ನ್ಯಾಯಾಧೀಶರೂ ಸೇರಿರುತ್ತಾರೆನಿಸುತ್ತದೆ. ಕೆಳಮಟ್ಟದ ನ್ಯಾಯಾಧೀಶರು ಎಂಬರ್ಥ ಕೊಡುವುದಿಲ್ಲ. ಸಮಾಲೋಚಿಸಬೇಕಾದ ವ್ಯಕ್ತಿಗಳ ವಿಷಯಕ್ಕೆ ಬಂದಾಗ ಮುಖ್ಯನ್ಯಾಯಾಧೀಶರು ಮತ್ತು ಅಂತಹ ವರಿಷ್ಠ ನ್ಯಾಯಾಧೀಶರೊಡನೆ ಸಮಾಲೋಚಿಸಬೇಕು. ಮುಖ್ಯ ನ್ಯಾಯಾಧೀಶರ ನಿವೃತ್ತಿಯ ಮೊದಲೆ ನೇಮಕಾತಿಯ ವಿಷಯ ಇತ್ಯರ್ಥಗೊಳ್ಳುತ್ತೆ ಅದು ಅತಾರ್ಕಿಕವೇನಲ್ಲ. ಪ್ರಾಯಃ ಹೆಚ್ಚು ಉಚಿತವಾದ ಕ್ರಮ-ನಿರ್ಗಮಿಸುವ ಉಚ್ಚ ನ್ಯಾಯಾಧೀಶರು ಮತ್ತಿರರ ಸಹೋದ್ಯೋಗಿಗಳೊಡನೆ ಸಮಾಲೋಚಿಸುವುದು ಸೂಕ್ತ ಕ್ರಮ. ಆದುದರಿಂದ ಮಾನ್ಯರೆ, ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಮಂಡಿಸಿರುವ ಖಂಡ ಮುಖ್ಯ ನ್ಯಾಯಾಧೀಶರ ನೇಮಕಾತಿಯನ್ನೂ ವ್ಯಾಪಿಸುತ್ತದೆ ಎಂದೆನಿಸುತ್ತದೆ.

ಮಾನ್ಯರೆ, ಮತ್ತೊಂದು ಮುಖ್ಯವಾದ ವಿಷಯ; ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಉಚ್ಚಾಟನೆಗೆ ಸಂಬಂಧಿಸಿದ್ದು. ಇದರಲ್ಲಿ ಎರಡು ಪರ್ಯಾಯ ಕ್ರಮಗಳು ಪರಿಶೀಲನಾರ್ಹ. ಅದನ್ನು ತಿಳಿಸುವ ಮುನ್ನ, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳನ್ನು ಪದಚ್ಯುತಗೊಳಿಸುವುದು ನಮ್ಮ ಆಲೋಚನೆಗೆ ಬರಬಹುದಾದ ಬಹು ಅಪರೂಪದ ಸಂಗತಿಯೆಂಬುದನ್ನು ತಿಳಿಸಲು ಬಯಸುತ್ತೇನೆ. ಗ್ರೇಟ್ ಬ್ರಿಟನ್‌ನಲ್ಲಿ ಸಂಸತ್ತಿನ ಉಭಯಸದನಗಳ ಮನವಿಯಂತೆ ಒಬ್ಬರು ನ್ಯಾಯಾಧೀಶರನ್ನು ಪದಚ್ಯುತಿಗೊಳಿಸಿದ ಪ್ರಕರಣ ನನ್ನ ನೆನಪಿಗೆ ಬರುತ್ತಿಲ್ಲ. ನನ್ನ ಮಾತಲ್ಲಿ ತಪ್ಪಿದ್ದಲ್ಲಿ ತಿದ್ದುಕೊಳ್ಳುತ್ತೇನೆ. ಆಧಿಪತ್ಯದ ಸಂವಿಧಾನಗಳಲ್ಲಿ ಇಂಥದ್ದೊಂದು ಉಪಬಂಧವಿದ್ದರೆ ಅದನ್ನು ಬಳಸಿದ ದೃಷ್ಟಾಂತ ನನ್ನ ನೆನಪಿಗೆ ಬರುತ್ತಿಲ್ಲ. ಆದುದರಿಂದ ನ್ಯಾಯಾಧೀಶರ ದುರ್ವರ್ತನೆ ಅಥವಾ ಅಸಭ್ಯ ನಡವಳಿಕೆಯು ಸಾಬೀತಾದರೆ ಅಂತಹ ಸಂದರ್ಭದಲ್ಲಿ ಅಳವಡಿಸಬೇಕಾದ ಉಚ್ಚಾಟನಾ ಪ್ರಕ್ರಿಯೆಯನ್ನು ಅತ್ಯಪರೂಪದ, ತುರ್ತಿನಲ್ಲಿ ಮಾತ್ರ ಬಳಸುವ, ಸಂಭವವಿದೆ. ಪ್ರಾಯಃ ನನ್ನ ಜೀವಿತಾವಧಿಯಲ್ಲಿ ಅಥವಾ ಸದನದಲ್ಲಿ ನನಗಿಂತ ಅತಿ ಕಿರಿಯವರಾದವರ ಜೀವನದಲ್ಲೂ ಇದು ಸಂಭವಿಸದು.

ಒಂದು ಪ್ರಕ್ರಿಯೆಯನ್ನು ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಸೂಚಿಸಿದ್ದಾರೆ. ಅದು ಹೀಗಿದೆ. "ರುಜುವಾತು ಪಡಿಸಿದ ದುರ್ವರ್ತನೆ ಅಥವಾ ಅಸಾಮರ್ಥ್ಯದ ಕಾರಣಕ್ಕಾಗಿ ಒಕ್ಕೂಟದ ಉಭಯಸದನಗಳ ಮನವಿಯಂತೆ ರಾಷ್ಟ್ರಪತಿಗಳು ಅದೇ ಅಧಿವೇಶನದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು

ಉಚ್ಚಾಟಿಸಬಹುದೇ ಹೊರತು ಬೇರಾರೂ ಉಚ್ಚಾಟನೆ ಮಾಡಲಾಗದು. ಇದಕ್ಕೆ ಸಂಬಂಧಿಸಿದ ಮುಂದಿನ ಪ್ರಕ್ರಿಯೆಯನ್ನು ಸಮ್ಮಿಶ್ರ ಕಾನೂನಿನಲ್ಲಿ ಉಪಬಂಧಿಸಬೇಕು."

ಈ ಕರಡಿನ ಪರಿಣಾಮವನ್ನು ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ವಿವರಿಸಿದ್ದಾರೆ. ಅದರ ಒಂದು ಆಯಾಮ ನನಗೆ ಮೆಚ್ಚುಗೆಯಾಯಿತು. ಅದರ ನಕಾರಾತ್ಮಕ ಸ್ವರೂಪ. ನ್ಯಾಯಾಧೀಶರ ಉಚ್ಚಾಟನೆಯ ಬಗ್ಗೆ ನಾವು ಸಮಚಿತ್ತದಿಂದ ಆಲೋಚಿಸಲು, ಅವರು ಅಂತಹ ಕಾರ್ಯನಿರ್ವಾಹಕರಲ್ಲವೆಂಬ ಅಂಶವನ್ನು ಅದು ಗಣನೆಗೆ ತಂದುಕೊಳ್ಳುತ್ತದೆ. ಅವರು ಹೇಳುವಂತೆ ಕೆಲ ಪ್ರಕ್ರಿಯೆಗಳ ಅನುಷ್ಠಾನದ ಹೊರತಾಗಿ ನ್ಯಾಯಾಧೀಶರನ್ನು ಪದಚ್ಯುತಗೊಳಿಸಲಾಗದು. ಕಾಲಕಾಲಕ್ಕೆ ನೀಡಲಾಗುತ್ತಿರುವ ಸಲಹೆಗಳಿಗಿಂತ ಇದು ಒಂದಂಶ ಪರಿಷ್ಕೃತಗೊಂಡ ಸಲಹೆ ಎಂದೆನಿಸುತ್ತದೆ.

ಇನ್ನೊಂದು ಪರ್ಯಾಯ ಕ್ರಮವನ್ನು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ಮುಂದಿಟ್ಟಿದ್ದಾರೆ. ಅವರ ಕರಡು ಹೀಗಿದೆ:

"ದುರ್ವರ್ತನೆ ಅಥವಾ ಭೌತಿಕ ಅಥವಾ ಮಾನಸಿಕ ಅಸ್ಥಿರತೆಯ ಕಾರಣಕ್ಕಾಗಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರನ್ನು ಸೇವೆಯಿಂದ ಪದಚ್ಯುತಗೊಳಿಸಬೇಕೆಂದು ರಾಷ್ಟ್ರಪತಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ತಿಳಿಯಪಡಿಸಿದರೆ ಆ ಉದ್ದೇಶಕ್ಕಾಗಿ ಉಚ್ಚನ್ಯಾಯಾಲಯದ ನ್ಯಾಯಾಧೀಶರು ಅಥವಾ ನಿವೃತ್ತ ನ್ಯಾಯಾಧೀಶರು ಅಥವಾ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನೊಳಗೊಂಡಂತೆ ಅವರು ನೇಮಿಸಿದ ವಿಶೇಷ ನ್ಯಾಯಾಧಿಕರಣ ತನ್ನ ವರದಿಯಲ್ಲಿ ಅಂತಹ ಯಾವುದೇ ಕಾರಣಕ್ಕಾಗಿಯಾದರೂ ಆ ನ್ಯಾಯಾಧೀಶರನ್ನು ಪದಚ್ಯುತಗೊಳಿಸಬೇಕೆಂದು ತಿಳಿಸಿದರೆ ರಾಷ್ಟ್ರಪತಿ ಅವರನ್ನು ಪದವಿಮುಕ್ತಗೊಳಿಸಬಹುದು."

ಈ ವಿಷಯದಲ್ಲಿ ಸಪ್ರು ಸಮಿತಿ ಮಾಡಿದ ಶಿಫಾರಸಿಗಿಂತ ಇದು ತುಸು ಪರಿಷ್ಕೃತ ರೂಪದ ಆವೃತ್ತಿ.

ಇವೆರಡು ತಿದ್ದುಪಡಿಗಳಲ್ಲಿ ಯಾವುದರ ಪರವಾಗಿ ನಾವು ನಿರ್ಧರಿಸಬೇಕೆನ್ನುವ ಮೊದಲು ಕೆಲ ಪರಿಶೀಲನಾರ್ಹ ಅಂಶಗಳನ್ನು ಗಣನೆಗೆ ತಂದುಕೊಳ್ಳಬೇಕು. ಅವುಗಳಲ್ಲಿ ಒಂದೆಂದರೆ ಓರ್ವ ನ್ಯಾಯಾಧೀಶರನ್ನು ಪದಚ್ಯುತಗೊಳಿಸಬೇಕೆ ಎಂಬ ವಿಷಯವನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ ಉಭಯ ಸದನಗಳನ್ನು ಆಹ್ವಾನಿಸುವುದು ವಿಚಿತ್ರ ಎನಿಸುತ್ತದೆ. ಎರಡು ಸದನಗಳಲ್ಲೊಂದರ ಸದಸ್ಯರ ಸಂಖ್ಯೆ ೫೦೦–೬೦೦. ಇನ್ನೊಂದರಲ್ಲಿ ಪ್ರಾಯಃ ಅದರ ಅರ್ಧದಷ್ಟು ಸದಸ್ಯರಿರುತ್ತಾರೆ. ಅವರು ಓರ್ವ ನ್ಯಾಯಾಧೀಶರು ಅಸಭ್ಯವಾಗಿ ವರ್ತಿಸಿದ್ದಾರೆಯೆ ಎಂಬುದರ ಬಗ್ಗೆ ತಮ್ಮ ತೀರ್ಪು ನೀಡುವುದು ಮತ್ತು ಅವರನ್ನು ಪದಚ್ಯುತಗೊಳಿಸಬೇಕೆ ಎಂಬುದನ್ನು ತೀರ್ಮಾನಿಸಿ ನಿರ್ಣಯವೊಂದನ್ನು ಅಂಗೀಕರಿಸುವುದು ಅಸಂಗತವೆನಿಸುತ್ತದೆ. ಆ ಪ್ರಕ್ರಿಯೆಯನ್ನು ಅಂಗೀಕರಿಸುವ ಮೊದಲು ನಾವು ವ್ಯಗ್ರಚಿತ್ತರಾಗಿ ಆಲೋಚಿಸಬೇಕು. ನಾನು ಹೀಗೆ ಹೇಳಲು ಕಾರಣವೆಂದರೆ ಸಾಧಾರಣ ಸರ್ಕಾರಿ ಸೇವಕರ ವಿಷಯದಲ್ಲಿ ಜನಮತದಿಂದ ಆಯ್ಕೆಗೊಂಡವರ ನೇಮಕಾತಿ ಅಥವಾ ಜನಮತದಿಂದ ಪದಚ್ಯುತಗೊಳಿಸುವ ನಿಯಮಗಳನ್ನೂ ಇಲ್ಲಿ ಕೈಬಿಟ್ಟು ಗಾವುದ ದೂರ ಕ್ರಮಿಸಿದ್ದೇವೆನಿಸುತ್ತದೆ. ಕಟುಮಾತಿನಲ್ಲಿ ಹೇಳಬೇಕೆಂದರೆ ಸಾಮಾನ್ಯ ಸರ್ಕಾರಿ ಸೇವಕರ ವಿಷಯದಲ್ಲೂ ತಾವು ಅಂಗೀಕರಿಸಲು ಸಿದ್ಧರಿಲ್ಲದ ನಿಯಮಗಳನ್ನು ಅತ್ಯುಚ್ಚ ನ್ಯಾಯಾಲಯದ ನ್ಯಾಯಾಧೀಶರ ವಿಷಯದಲ್ಲಿ ಅಂಗೀಕರಿಸಲು ಸಿದ್ಧರಿಲ್ಲವೆಂದಾಗ, ಅಂತಹ ಪ್ರಕ್ರಿಯೆಯನ್ನು ತೀವ್ರ ಸಮರ್ಥನೆಗೆ ಒಳಪಡಿಸಬೇಕೆನಿಸುತ್ತದೆ. ಇನ್ನೊಂದು ಪ್ರಕ್ರಿಯೆಯ ಬಗ್ಗೆ ಸಲಹೆ ನೀಡಲಾಗಿದೆ. ಅದರಂತೆ ನ್ಯಾಯಾಧೀಶರ ನಡವಳಿಕೆ ಅಸಭ್ಯವೇ ಮತ್ತು ಅವರನ್ನು ಪದಚ್ಯುತಗೊಳಿಸಬೇಕೆ ಎಂಬುದನ್ನು ರಾಷ್ಟ್ರಪತಿಗಳು ನಿರ್ಧರಿಸಬೇಕು ಮತ್ತು ನ್ಯಾಯ ನಿರ್ಣಯ ಮಾಡಬೇಕು. ಆ ತೀರ್ಪು, ಈ ಉದ್ದೇಶಕ್ಕಾಗಿಯೇ ಅವರು ವಿಶೇಷವಾಗಿ ನೇಮಿಸಿದ ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರು ಅಥವಾ ನಿವೃತ್ತ ನ್ಯಾಯಾಧೀಶರ ನ್ಯಾಯಾಧಿಕರಣ ನೀಡಿದ ವರದಿಯನ್ನು ಆಧರಿಸಿರಬೇಕು; ಅದರರ್ಥ ನ್ಯಾಯಾಧೀಕರಣದ ಮುಂದೆ ನ್ಯಾಯಾಧೀಶರನ್ನು

ದುರ್ವರ್ತನೆಯ ಆರೋಪ ಹೊತ್ತ ಆರೋಪಿ ಸ್ಥಾನದಲ್ಲಿ ನಿಲ್ಲಿಸಬೇಕು. ನ್ಯಾಯಾಧಿಕರಣದ ಕೆಲ ಸದಸ್ಯರು ದೇಶದ ನ್ಯಾಯಿಕ ಶ್ರೇಣಿಯಲ್ಲಿ ಅವರಿಗಿಂತ ಕೆಳಸ್ತರದಲ್ಲಿರುವವರು; ಆ ಪ್ರಕ್ರಿಯೆಯ ವಿರುದ್ಧವೂ ಹೇಳಬೇಕಾದುದು ಇದೆ. ಆದರೆ ಇವೆರಡರಲ್ಲಿ ಇದನ್ನೋ ಅಥವಾ ಅದನ್ನೋ ಉತ್ತಮವೆಂದು ಆಯ್ಕೆ ಮಾಡಬೇಕೆಂದು ಹೇಳಲು ನಾನು ತಯಾರಿಲ್ಲ. ಏಕೆಂದರೆ ಇವೆರಡರಲ್ಲಿ ಯಾವ ಒಂದನ್ನಾಗಲಿ ಸರ್ವೋಚ್ಚ ನ್ಯಾಯಾಲಯದ ಯಾರೊಬ್ಬ ನ್ಯಾಯಾಧೀಶರ ವಿಷಯದಲ್ಲೂ ಕಾರ್ಯರೂಪಕ್ಕೆ ತರಲು ನಮಗೆ ಪ್ರಾಯಃ ಅವಕಾಶವಿರಲಾರದು ಎಂಬುದು ನನ್ನ ನಿರೀಕ್ಷೆ. ಈ ಎರಡು ಪರ್ಯಾಯ ಆಯ್ಕೆಗಳಲ್ಲಿ ಒಂದರ ಬಗ್ಗೆ ನಿರ್ಧರಿಸುವ ವಿಷಯವನ್ನು ಸದನಕ್ಕೆ ಬಿಡುತ್ತೇನೆ. ಅದರ ಆಯ್ಕೆಯನ್ನು ಸಂವಿಧಾನದ ಕರಡಿಗೆ ಸೇರಿಸಲಾಗುತ್ತದೆ.

ಸರ್ವೋಚ್ಚ ನ್ಯಾಯಾಲಯಕ್ಕೆ ರಾಜ್ಯಗಳು ವಹಿಸಿಕೊಡುವ ಹೆಚ್ಚುವರಿ ಅಧಿಕಾರ ವ್ಯಾಪ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಅಂಶ ಸುಸ್ಪಷ್ಟ ಮತ್ತು ಅಸಂದಿಗ್ಧ. ಭಾರತೀಯ ರಾಜ್ಯ ಒಪ್ಪಂದದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚುವರಿ ಅಧಿಕಾರ ವ್ಯಾಪ್ತಿಯನ್ನು ವಹಿಸಿಕೊಡುವುದಾದರೆ ಅದು ಸಮ್ಮಿಶ್ರ ಕಾನೂನಿನ ಮೂಲಕ ನಡೆಯತಕ್ಕದ್ದು. ಹಾಗಿರುವಾಗ ಅದರ ಬಗ್ಗೆ ನನ್ನದೊಂದು ಸಲಹೆಯನ್ನು ತಮ್ಮ ಪರಿಶೀಲನೆಗಾಗಿ ಮುಂದಿಡುತ್ತೇನೆ. ಅದೆಂದರೆ ನ್ಯಾಯಾಧೀಶರ ಪೌರತ್ವ ಮತ್ತು ಅವರಿಗೆ ಹೆಚ್ಚುವರಿ ಅಧಿಕಾರ ವ್ಯಾಪ್ತಿ ವಹಿಸಿಕೊಡುವುದಕ್ಕೆ ಸಂಬಂಧಿಸಿದಂತೆ ಆ ಉದ್ದೇಶಕ್ಕಾಗಿ ಮಂಡಿಸಿದ ತಿದ್ದುಪಡಿಗಳನ್ನು ಮಂಡನೆಕಾರರು ಒಪ್ಪಿದರೆ ಹಿಂಪಡೆಯಬೇಕು; ಆದರೆ ಈ ವಾಪಸಾತಿಯ ಸಂದರ್ಭದಲ್ಲಿ ಅವರಿಗೊಂದು ಆಶ್ವಾಸನೆ ನೀಡಲಾಗುವುದು. ಅವರು ಚರ್ಚೆಯಲ್ಲಿ ಮಂಡಿಸಿದ ಅಂಶಗಳನ್ನು ನೆನಪಿನಲ್ಲಿಟ್ಟು ಸಂವಿಧಾನದ ಕರಡು ತಯಾರಿಕೆಯಲ್ಲಿ ಅವುಗಳ ಬಗ್ಗೆ ಗಮನ ಕೊಡಲಾಗುವುದು. ತಾವು ಸಮ್ಮತಿಸಿದರೆ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದ ಖಂಡವನ್ನು ಮಾತ್ರ ಸದನದ ಮತಕ್ಕೆ ಹಾಕಬಹುದು. ಅಂತೆಯೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಪದಚ್ಯುತಿಗೆ ಸಂಬಂಧಿಸಿದ ಪರ್ಯಾಯ ಖಂಡಗಳನ್ನೂ ಮತಕ್ಕೆ ಹಾಕಬಹುದು. ಆ ಅಂಶಗಳನ್ನು ಕುರಿತ ತೀರ್ಮಾನ ಹಾಗೂ ಮುಂದಿನ ತೀರ್ಮಾನಗಳೊಡನೆ ನಾವು ಸಾಮಾನ್ಯವಾಗಿ ತಾತ್ಪೂರ್ತಿಕ ಸಮಿತಿಯ ವರದಿಯನ್ನು ಅಂಗೀಕರಿಸಬಹುದು. ಸಂವಿಧಾನದ ಕರಡು ಪಠ್ಯ ಸಿದ್ಧಗೊಳಿಸಲು ನಮ್ಮ ಮುಂದೆ ಸಾಕಷ್ಟು ಅಧಿಕೃತ ವಿಷಯಗಳಿವೆ.

**ಮಾನ್ಯ ಉಪಸಭಾಧ್ಯಕ್ಷರು :** ನಾನು ಮೊದಲು ಉಚ್ಚಾಟನೆಯ ಖಂಡಕ್ಕೆ ಅನ್ವಯಿಸಿದ ತಿದ್ದುಪಡಿಗಳನ್ನು ಸದನದ ಮುಂದೆ ಮತಕ್ಕೆ ಹಾಕುತ್ತೇನೆ. ಮೊದಲ ತಿದ್ದುಪಡಿ ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರದು ಇದನ್ನು ೩ನೇ ಪೂರಕ ಪಟ್ಟಿಯ ೭-ಸಿ ಕಂಡಿಕೆಯಲ್ಲಿ ಕಾಣಬಹುದು.

"ವೈಯಕ್ತಿಕ ಅಸಭ್ಯ ವರ್ತನೆ ಅಥವಾ ಅಸಾಮರ್ಥ್ಯದ ಕಾರಣಕ್ಕಾಗಿ ಒಕ್ಕೂಟದ ಸಂಸತ್ತಿನ ಉಭಯ ಸದನಗಳ ಮನವಿಯ ಮೇರೆಗೆ ಅದೇ ಅಧಿವೇಶನದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ರಾಷ್ಟ್ರಪತಿಗಳಿಂದ ಪದಚ್ಯುತಿಗೊಳಿಸಲ್ಪಡಬಹುದೇ ಹೊರತು ಬೇರಾರಿಂದಲೂ ಅಲ್ಲ. ಇದಕ್ಕೆ ಸಂಬಂಧಿಸಿದ ಮುಂದಿನ ಪ್ರಕ್ರಿಯೆಗಾಗಿ ಸಮ್ಮಿಶ್ರ ಕಾನೂನಿನಲ್ಲಿ ಉಪಬಂಧವನ್ನು ರಚಿಸಬಹುದು."

ಆ ತಿದ್ದುಪಡಿಯನ್ನು ಸದನದ ಮುಂದೆ ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು :** ಮುಂದುವರಿದು ಇನ್ನೊಂದು ತಿದ್ದುಪಡಿಯನ್ನು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ಪ್ರಸ್ತಾವಿಸಿದ್ದಾರೆ. ೨೧ (ಬಿ) ಆ ತಿದ್ದುಪಡಿಯನ್ನು ಒತ್ತಾಯಿಸಿಲ್ಲವೆಂದುಕೊಳ್ಳುತ್ತೇನೆ.

ಈಗ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿ ೨೧(ಎ) ಪೂರಕ ಪಟ್ಟಿ ೨ ಇದನ್ನು ಮತಕ್ಕೆ ಹಾಕುತ್ತೇನೆ. ಅದು ಹೀಗಿದೆ:

"೧(ಎ) ನ್ಯಾಯಾಧೀಶರೊಬ್ಬರು ರಾಷ್ಟ್ರಪತಿಗಳನ್ನು ಸಂಪರ್ಕಿಸಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಬಹುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ನಾನೀಗ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ತಿದ್ದುಪಡಿ ೨೧–೧ (ಸಿ) ಇದನ್ನು ಮತಕ್ಕೆ ಹಾಕುತ್ತೇನೆ. ಅದು ಹೀಗಿದೆ:

"ನ್ಯಾಯಾಧೀಶರೊಬ್ಬರು ದಿವಾಳಿಯೆಂದು ತೀರ್ಮಾನಿಸಲ್ಪಟ್ಟಾಗ ಅವರು ಹುದ್ದೆಯಿಂದ ನಿರ್ಗಮಿಸುತ್ತಾರೆ."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ನಾನು ಶ್ರೀ ಅನಂತಶಯನಂ ಅಯ್ಯಂಗಾರ್ ಅವರ ತಿದ್ದುಪಡಿ–೧೯(ಎ) ಇದನ್ನು ಮತಕ್ಕೆ ಹಾಕುತ್ತೇನೆ. ಅದು ಹೀಗಿದೆ:

"ಪ್ರತಿಯೊಬ್ಬ ನ್ಯಾಯಾಧೀಶರು ಭಾರತದ ಒಕ್ಕೂಟದ ನಾಗರಿಕನಾಗಿರಬೇಕು."

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ಆ ತಿದ್ದುಪಡಿಯನ್ನು ಮಂಡಿಸಿದೆ. ಆದರೆ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಕೊಟ್ಟ ಆಶ್ವಾಸನೆಯ ಮೇರೆಗೆ ನಾನು ಆ ತಿದ್ದುಪಡಿಯನ್ನು ಒತ್ತಾಯಿಸುತ್ತಿಲ್ಲ. ಆದರೆ ಕರಡಿನಲ್ಲಿ ಅದಕ್ಕೊಂದು ಸ್ಥಾನವಿರಬೇಕು.

**ಮಾನ್ಯ ಉಪಸಭಾಧ್ಯಕ್ಷರು** : ತಿದ್ದುಪಡಿ–೧೯ (ಎ) ಹಿಂಪಡೆಯುವಂತೆ ಕೋರಲಾಗಿದೆ. ಸದನಕ್ಕೆ ಒಪ್ಪಿಗೆಯೇ?

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ನಾನೀಗ ಪೂರಕ ಪಟ್ಟಿ ೩ರ ೮ನೇ ಸಿ ತಿದ್ದುಪಡಿಯನ್ನು ಸದನದ ಮುಂದೆ ಮತಕ್ಕೆ ಹಾಕುತ್ತೇನೆ.

"(ಸಿ) ಮುಖ್ಯ ನ್ಯಾಯಾಧೀಶರು ಮತ್ತಿತರ ನ್ಯಾಯಾಧೀಶರ ವೇತನವನ್ನು ಶಾಸನ ನಿಗದಿಗೊಳಿಸುತ್ತದೆ ಮತ್ತು ಯಾವ ನ್ಯಾಯಾಧೀಶರ ವೇತನವನ್ನೂ ಅವರ ಸೇವಾವಧಿಯಲ್ಲಿ ಕಡಿತಗೊಳಿಸಲಾಗದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ನಾನು ೨ನೇ ಪಟ್ಟಿಯ ೧೭ನೇ ತಿದ್ದುಪಡಿಯನ್ನು ಸದನದ ಮುಂದೆ ಮತಕ್ಕೆ ಹಾಕುತ್ತೇನೆ.

"ಅನುಬಂಧದ ೯ನೇ ಕಂಡಿಕೆಯಲ್ಲಿ ಹೀಗೆ ತಿಳಿಸಿದೆ:

'ಎ) ಪ್ರಿವಿಕೌನ್ಸಿಲ್‌ನ ಅಪೀಲು ನ್ಯಾಯಾಧಿಕರಣ ವ್ಯಾಪ್ತಿ ಇನ್ನು ಮುಂದೆ ರದ್ದಾಗುತ್ತದೆ ಮತ್ತು ಅಧಿಕಾರ ವ್ಯಾಪ್ತಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ವಹಿಸಲಾಗಿತ್ತೆ.

ಬಿ) ಪ್ರಿವಿ ಕೌನ್ಸಿಲ್‌ನಲ್ಲಿ ಇತ್ಯರ್ಥವಾಗಲಿರುವ ಅಪೀಲುಗಳನ್ನು ಸರ್ವೋಚ್ಚ ನ್ಯಾಯಾಲಯ ಇತ್ಯರ್ಥಗೊಳಿಸುತ್ತದೆ'."

**ಶ್ರೀ ಎಮ್. ಅನಂತ ಶಯನಮ್ ಅಯ್ಯಂಗಾರ್** : ಮಾನ್ಯರೆ, ನಾನು ಅದನ್ನು ಅನಂತರದಲ್ಲಿ ಮಂಡಿಸುತ್ತೇನೆ.

**ಮಾನ್ಯ ಉಪಸಭಾಧ್ಯಕ್ಷರು** : ಆಯಿತು. ತಿದ್ದುಪಡಿಯ ಪ್ರಸ್ತಾವವನ್ನು ಮುಂದೂಡಲಾಗಿದೆ. ಈಗ ಶ್ರೀ ಸಂತಾನಂ ಅವರ ತಿದ್ದುಪಡಿ ಸಂ. ೮ (ಬಿ)

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನಾನು ತಿದ್ದುಪಡಿಯನ್ನು ಒತ್ತಾಯಿಸುವುದಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು** : ಸದನಕ್ಕೆ ತಿದ್ದುಪಡಿಯ ವಾಪಸಾತಿ ಸಮ್ಮತವೆ?

**ಗೌರವಾನ್ವಿತ ಸದಸ್ಯರು** : ಹೌದು

ಸದನದ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ನಾನೀಗ ತಿದ್ದುಪಡಿಯಾದ ಖಂಡವನ್ನು ಮತಕ್ಕೆ ಹಾಕುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನ್ಯಾಯಾಧೀಶರ ನೇಮಕಾತಿಯ ಬಗ್ಗೆ ಪ್ರಸ್ತಾವಿಸಿದ ಎರಡು ತಿದ್ದುಪಡಿಗಳನ್ನು ಇನ್ನೂ ಮತಕ್ಕೆ ಹಾಕಿಲ್ಲವೆಂಬುದನ್ನು ನಾನು ತಿಳಿಸಬಹುದೆ?

**ಮಾನ್ಯ ಉಪಸಭಾಧ್ಯಕ್ಷರು :** ಯಾವ ತಿದ್ದುಪಡಿಗಳೂ ಇಲ್ಲ. ಎಲ್ಲ ಪ್ರಸ್ತಾವಗಳೂ ಏಕರೀತಿಯಾಗಿವೆ ಎಂದೆನಿಸುತ್ತದೆ. ಅವೆಲ್ಲವೂ ಜ್ಞಾಪನ ಪತ್ರದ ಕಂಡಿಕೆಗೆ ಹೊಂದುವಂಥವೆ; ಗಮನಾರ್ಹ ವ್ಯತ್ಯಾಸವಿಲ್ಲ.

ಈಗ ನಾನು ತಿದ್ದುಪಡಿಯಾದ ೧೮ನೇ ಖಂಡವನ್ನು ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯಾದಂತೆ ೧೮ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ – ೧೮ಎ

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯ ಉಪಸಭಾಧ್ಯಕ್ಷರೆ, ನಿನ್ನೆ ನಾನೊಂದು ತಿದ್ದುಪಡಿಯನ್ನು ಮಂಡಿಸಿದ್ದೆ. ೧೮ ಎ ಖಂಡವನ್ನು ೧೮ನೇ ಖಂಡದೊಳಗೆ ವಿಲೀನಗೊಳಿಸುವ ತಿದ್ದುಪಡಿಯ ಪ್ರಸ್ತಾವ ಅದು. ಈಗ ಪೂರಕ ಪಟ್ಟಿಯಲ್ಲಿ ೧೫ನೇ ತಿದ್ದುಪಡಿಯ ರೂಪದಲ್ಲಿದೆ. ಅದು ಹೀಗಿದೆ.

"೧೮ಎ. ಒಂದು ಪ್ರಾಂತ್ಯದ ಶಾಸನಸಭೆ ರಾಜ್ಯಪಾಲರಿಗೊಂದು ಮನವಿ ಪತ್ರ ಸಲ್ಲಿಸಿ ಅದನ್ನು ರಾಷ್ಟ್ರಪತಿಗಳು ಅನುಮೋದಿಸಿದ ಮೇಲೆ ಯಾವುದೇ ಪ್ರಾಂತ್ಯದಲ್ಲಿ ಹೊಸದಾಗಿ ಉಚ್ಚ ನ್ಯಾಯಾಲಯಗಳನ್ನು ಸ್ಥಾಪಿಸಬೇಕು."

**ಮಾನ್ಯ ಉಪಸಭಾಧ್ಯಕ್ಷರು :** ಪ್ರಸ್ತಾವಿತ ಖಂಡ ೧೫ರ ಬಗ್ಗೆ ಯಾರಾದರೂ ಮಾತನಾಡಲು ಬಯಸುತ್ತಾರೆಯೇ?

**ಶ್ರೀಮತಿ ಜಿ. ದುರ್ಗಾಬಾಯಿ :** ನನ್ನ ತಿದ್ದುಪಡಿಯನ್ನು ಬೆಂಬಲಿಸಿ ಕೆಲವು ಮಾತುಗಳನ್ನಾಡಲು ಬಯಸುತ್ತೇನೆ. ಮಾನ್ಯರೆ, ನನ್ನ ತಿದ್ದುಪಡಿಯಲ್ಲಿರುವಂತೆ ಯಾವ ಉಪಬಂಧವನ್ನೂ ಸಂವಿಧಾನದ ಕರಡಿನಲ್ಲಿ ಕಾಣಿಸಿಲ್ಲ. ಆದುದರಿಂದ ಅದು ನನಗೆ ಅಗತ್ಯವೆನಿಸಿತು. ಏಕೆಂದರೆ ಸಮ್ಮಿಶ್ರ ಶಾಸನಸಭೆಗೆ ನಾವು ಕೊಟ್ಟಿರುವ ಅಧಿಕಾರಬಲದಿಂದ ಇನ್ನು ಮುಂದೆ ಕೆಲ ಹೊಸ ಘಟಕಗಳು ಹುಟ್ಟಿಕೊಳ್ಳುವುದನ್ನು ನಾವು ಕಾಣಬಹುದು. ಅದಷ್ಟು ಮಾತ್ರವಲ್ಲ. ಈಗಾಗಲೇ ಎರಡು ಹೊಸ ಘಟಕಗಳನ್ನು ಸ್ಥಾಪಿಸಲಾಗಿರುವುದರಿಂದ ಪಶ್ಚಿಮ ಬಂಗಾಲ ಮತ್ತು ಪೂರ್ವ ಪಂಜಾಬ್ ಪ್ರಾಂತ್ಯಗಳಲ್ಲಿ ಅದರ ಅಗತ್ಯ ಇನ್ನೂ ಹೆಚ್ಚು. ಆದುದರಿಂದ ಈಗ ಹೊಸದಾಗಿ ಸ್ಥಾಪಿಸಲಾಗಿರುವ ಘಟಕಗಳಲ್ಲಿ ಉಚ್ಚ ನ್ಯಾಯಾಲಯಗಳ ಸ್ಥಾಪನೆಗೆ ಅಗತ್ಯವಿರುವ ಪ್ರಕ್ರಿಯೆಯನ್ನು ನಿರೂಪಿಸುವ ಆವಶ್ಯಕತೆ ಏರ್ಪಡುತ್ತದೆ. ಆ ಕಾರಣಕ್ಕಾಗಿಯೇ ನಾನು ಹೆಚ್ಚುವರಿಯಾಗಿ ೧೮–ಎ ಖಂಡವನ್ನು ಸೂಚಿಸಿದ್ದೇನೆ.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಅಂತಹ ಉಪಬಂಧದ ಅಗತ್ಯವೇನೂ ನನಗೆ ತೋರಲಿಲ್ಲ. ಏಕೆಂದರೆ ಒಂದು ಪ್ರಾಂತ್ಯ ಅಸ್ತಿತ್ವಕ್ಕೆ ಬರುತ್ತಿದ್ದಂತೆ ನ್ಯಾಯಾಂಗ ಶಾಸನಸಭೆ ಎಲ್ಲವೂ ಪೂರಕವಾಗಿ ಸೇರ್ಪಡೆಯಾಗುತ್ತವೆ. ಅದು ಪ್ರಾಂತೀಯ ಸಂವಿಧಾನದ ಒಂದು ಭಾಗವಾಗುತ್ತದೆ. ಆದುದರಿಂದ ಒಂದು ಉಚ್ಚ ನ್ಯಾಯಾಲಯವಿರಬೇಕೆಂದು ಹೇಳುವ ಅಗತ್ಯವೇ ಇಲ್ಲ. ಪ್ರತ್ಯೇಕ ನ್ಯಾಯ ನಿರ್ಣಯ ಮತ್ತು ಪ್ರತ್ಯೇಕ ಶಾಸನ ಸಭೆಯ ಗೈರಿನಲ್ಲಿ ಪ್ರಾಂತ್ಯವೊಂದರ ಕಲ್ಪನೆ ಅಸಾಧ್ಯ. ಶಾಸನಸಭೆಯ ವಿಶೇಷ ನಿರ್ಣಯವೊಂದರ ಅಗತ್ಯವೂ ಅಲ್ಲ. ಅದು ಪ್ರಾಂತೀಯ ಸಂವಿಧಾನದ ಭಾಗವಾಗಬಹುದು. ಅದರಂತೆ ಪ್ರತಿಯೊಂದು ಪ್ರಾಂತ್ಯದಲ್ಲೂ ಉಚ್ಚ ನ್ಯಾಯಾಲಯ ಇರಲೇಬೇಕು. ಆದುದರಿಂದ ತಾತ್ತ್ವಿಕವಾಗಿ ಯಾವುದೇ ಕರಡು ರಚನೆ ಅಥವಾ ಇತರ ಮಾರ್ಪಾಟುಗಳನ್ನು ಮಾಡುವುದಿದ್ದರೆ ಅವಕ್ಕೆ ಬದ್ಧವಾಗಿ ಶ್ರೀಮತಿ ದುರ್ಗಾಬಾಯಿ ಅವರ ಮಾತುಗಳನ್ನು ಅಂಗೀಕರಿಸಬಹುದು. ಆದರೆ ಅದಕ್ಕೆಂದು ಒಂದು ಉಪಬಂಧವನ್ನು ರಚಿಸುವ ಅಗತ್ಯವಿಲ್ಲ. ನಾವೀಗಾಗಲೇ ಸಾಮಾನ್ಯ ಉಚ್ಚ ನ್ಯಾಯಾಲಯಗಳ ಕಾರ್ಯನಿರ್ವಹಣೆಯನ್ನು ಕಂಡಿದ್ದೇವೆ. ಆದರೆ ಹೊಸ ವ್ಯವಸ್ಥೆಯಲ್ಲಿ ಅದರ ಅಗತ್ಯ ಇರಲಾರದು. ಅಸ್ಸಾಮ್ ಮತ್ತು ಒರಿಸ್ಸಾ ಪ್ರಾಂತ್ಯಗಳಿಗೆ ಅದರ ಅಗತ್ಯವೊದಗಬಹುದೆಂದು ನನಗೆ ತಿಳಿದುಬಂದಿದೆ. ಅಂತಿಮವಾಗಿ ಸಂವಿಧಾನವು ಅಸ್ತಿತ್ವಕ್ಕೆ ಬಂದಾಗ ಪ್ರಾಂತ್ಯಗಳಲ್ಲಿ ಮಾಡುವ ಉಪಬಂಧಕ್ಕೆ

ಇದು ಬದ್ಧವಾಗಿರುತ್ತದೆ. ಆ ತಿಳಿವಳಿಕೆಗೆ ಒಳಪಟ್ಟು ಈ ಖಂಡದ ಅಂಗೀಕಾರಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ.

**ಶ್ರೀ ಎಮ್ ಅನಂತಶಯನಮ್ ಅಯ್ಯಂಗಾರ್ :** ಅಂತಹ ಉಪಬಂಧವು ಸಂವಿಧಾನದಲ್ಲಿರಬೇಕಾದುದು ಅಗತ್ಯ. ಉಚ್ಚನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದಂತೆ ನಾವು ಅಂಗೀಕರಿಸಿರುವ ಪ್ರಾಂತೀಯ ಸಂವಿಧಾನದಲ್ಲಿ ಒಂದು ಉಪಬಂಧವಿದೆ. ಅದರಂತೆ ನ್ಯಾಯಾಧೀಶರನ್ನು ರಾಷ್ಟ್ರಪತಿಗಳು ನೇಮಕ ಮಾಡಬೇಕು. ಅದಕ್ಕೆ ಮುನ್ನ ಭಾರತದ ಮುಖ್ಯ ನ್ಯಾಯಾಧೀಶರು, ಪ್ರಾಂತೀಯ ಮುಖ್ಯ ನ್ಯಾಯಾಧೀಶರು ಮತ್ತಿತರ ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಬೇಕು. ನ್ಯಾಯಾಧೀಶರ ನೇಮಕಾತಿಯ ವಿಷಯ ಕೂಡ ಒಕ್ಕೂಟ ಹಾಗೂ ಒಕ್ಕೂಟದ ಅಧ್ಯಕ್ಷರ ಅಧಿಕಾರಕ್ಕೆ ಬದ್ಧವಾಗಿದೆ. ಹೊಸದಾಗಿ ಸ್ಥಾಪಿತವಾಗುವ ಪ್ರಾಂತ್ಯದಲ್ಲಿ ಉಚ್ಚ ನ್ಯಾಯಾಲಯದ ಸ್ಥಾಪನೆಗೆ ಯಾವುದೇ ಪ್ರಾಧಿಕಾರವನ್ನೂ ನಿರ್ದಿಷ್ಟಪಡಿಸಿಲ್ಲ. ಉಚ್ಚ ನ್ಯಾಯಾಲಯವನ್ನು ಸ್ಥಾಪಿಸುವ ಅಧಿಕಾರಿ ಯಾರೆಂದು ನಾನು ಕೇಳುತ್ತೇನೆ. ಅದು ಕೇಂದ್ರದ ಸಹಮತವಿಲ್ಲದೆ, ಕೇವಲ ಪ್ರಾಂತ್ಯಗಳಿಗೆ ಬಿಡಬೇಕಾದ ವಿಷಯವೆ? ಇದಕ್ಕೆ ಸೂಕ್ತ ಅವಕಾಶ ಕಲ್ಪಿಸಿಲ್ಲ. ಪ್ರಸ್ತುತ ಸಂವಿಧಾನದ ಅಡಿಯಲ್ಲಿ ಭಾರತ ಸರ್ಕಾರ ಅಧಿನಿಯಮವು ಕೆಲವು ಪ್ರಾಂತ್ಯಗಳಲ್ಲಿ ಸ್ಥಾಪಿಸಲ್ಪಟ್ಟ ಹಲವಾರು ಉಚ್ಚ ನ್ಯಾಯಾಲಯಗಳನ್ನು ಗಣನೆಗೆ ತೆಗೆದುಕೊಂಡಿದೆ. ಹೊಸ ಪ್ರಾಂತೀಯ ಉಚ್ಚ ನ್ಯಾಯಾಲಯಗಳನ್ನು ಮಹಾಪ್ರಭುಗಳು ಸ್ಥಾಪಿಸಬೇಕೆಂದು ಅದು ತಿಳಿಸಿದೆ – ೨೨೯ನೇ ಪ್ರಕರಣ ಓದಿ [ಭಾರತ ಸಂವಿಧಾನ ಅಧಿನಿಯಮ] ಮುಂದೆ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸುವ ಅಧಿಕಾರ ಯಾರಿಗಿರುತ್ತದೆ ಎಂಬುದು ಇಲ್ಲೆ ಈಗಲೇ ನಿರ್ಧಾರವಾಗಬೇಕು. ಸರ್ ಅಲ್ಲಾದಿಯವರು ಹೇಳಿದಂತೆ ಇಡೀ ವಿಷಯವನ್ನು ಪ್ರಾಂತ್ಯಗಳಿಗೆ ಬಿಡೋಣ ಎನ್ನೋಣವೆ? ಹಾಗಾದರೆ ಆ ಪ್ರಾಂತ್ಯದಲ್ಲಿ ಉಚ್ಚ ನ್ಯಾಯಾಲಯದ ಸ್ಥಾಪನೆ ಇಡೀ ಶಾಸನಸಭೆಯ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೆ. ಆದರೆ ಅದಕ್ಕಿಂತಲೂ ಮುಖ್ಯವೆನಿಸುವಂತೆ ನ್ಯಾಯಾಧೀಶರ ನೇಮಕಾತಿಯನ್ನು ಒಕ್ಕೂಟದ ಅಧ್ಯಕ್ಷರು/ರಾಷ್ಟ್ರಪತಿಗಳು ನಿಯಂತ್ರಿಸುತ್ತಾರೆ ಇದು ವಿಲೋಮ ಪ್ರಕ್ರಿಯೆ. ಇಂತಹ ಸಂದರ್ಭದಲ್ಲಿ ನನ್ನ ಗೌರವಾನ್ವಿತ ಸ್ನೇಹಿತೆ ಶ್ರೀಮತಿ ದುರ್ಗಾಬಾಯಿ ಅವರು ಸೂಚಿಸಿರುವುದು ಸರಿಯಾಗಿಯೇ ಇದೆ. ಈ ಅಧಿಕಾರವನ್ನು ರಾಷ್ಟ್ರಪತಿಗೆ ವಹಿಸಬೇಕು. ಅವರು ಪ್ರಾಂತೀಯ ಶಾಸನಸಭೆಯು ಹೊಸ ಉಚ್ಚ ನ್ಯಾಯಾಲಯದ ಸ್ಥಾಪನೆ ವಿಷಯದಲ್ಲಿ ಸಲ್ಲಿಸಿದ ಯಾವುದೇ ಮನವಿಯನ್ನು ಅನುಮೋದಿಸಬಹುದು. ಇಲ್ಲವೆ ತಿರಸ್ಕರಿಸಬಹುದು.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯ ಉಪಸಭಾಧ್ಯಕ್ಷರೆ, ತಮ್ಮ ಅನುಮತಿ ಬೇಡಿ ಈ ತಿದ್ದುಪಡಿಗೆ ಒಂದೆರಡು ಹೆಚ್ಚುವರಿ ಪದಗಳನ್ನು ಸೇರಿಸುತ್ತೇನೆ.

"ಹೊಸ ಉಚ್ಚ ನ್ಯಾಯಾಲಯಗಳು, ಈಗಾಗಲೇ ಅಸ್ತಿತ್ವದಲ್ಲಿರುವ ಒರಿಸ್ಸಾ ಮತ್ತು ಅಸ್ಸಾಮ್ ರಾಜ್ಯಗಳಲ್ಲೂ ಹೊಸದಾಗಿ ರಚಿಸಲಾದ ಪ್ರಾಂತ್ಯಗಳಲ್ಲೂ ಸ್ಥಾಪನೆಯಾಗಬೇಕು."

ಉಳಿದದ್ದು ಅಂತೆಯೇ ಇರುತ್ತದೆ.

ಈ ತಿದ್ದುಪಡಿಯನ್ನು ಸದನದ ಅಂಗೀಕಾರಕ್ಕಾಗಿ ಶಿಫಾರಸು ಮಾಡುತ್ತೇನೆ.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಈ ವಿಷಯದಲ್ಲಿ ಸರ್ ಅಲ್ಲಾದಿಯವರ ಅಭಿಪ್ರಾಯದ ಬಗ್ಗೆ ನನ್ನ ಸಹಮತವಿಲ್ಲವೆಂಬುದು ನನ್ನ ಗೌರವಪೂರ್ವಕ ನಿವೇದನೆ. ನನ್ನ ಹಿಂದಿನ ಭಾಷಣಕಾರರು ಹೇಳಿದಂತೆ ಪ್ರಾಂತ್ಯಗಳಲ್ಲಿ ಹೊಸ ಉಚ್ಚ ನ್ಯಾಯಾಲಯಗಳ ಸ್ಥಾಪನೆಗೆ ನಾವು ಪ್ರಕ್ರಿಯೆಯನ್ನು ರೂಪಿಸಬೇಕು. ನಮ್ಮೆಲ್ಲರಿಗೂ ತಿಳಿದಿರುವಂತೆ ಹೊಸ ಉಚ್ಚ ನ್ಯಾಯಾಲಯ ಸ್ಥಾಪನೆ, ಅತಿ ವಿಳಂಬಿತವಾದುದು. ಪ್ರಾಂತ್ಯಗಳು ತಮ್ಮದೇ ಇಚ್ಛಾನುಸಾರ ತಮ್ಮ ನಿರ್ಧಾರದಂತೆಯೇ ಆ ಪ್ರಕ್ರಿಯೆಯಲ್ಲಿ ತೊಡಗಲು ಬಿಡಬಾರದು. ಯಾವುದಾದರೂ ಒಂದು ಅಧಿಕಾರದ ಅಡಿಯಲ್ಲಿ ಈ ಕಾರ್ಯಕ್ರಮ ಚಾಲೂ ಆಗಬೇಕು. ಸೂಕ್ತ ಅಧಿಕಾರ ಒಕ್ಕೂಟ ಸಂಸತ್ತಿನ ಕೈಯಲ್ಲಿರಬೇಕು. ಒಂದು ಘಟಕದ ಗಾತ್ರ ಹಿರಿದೋ

ಅಲ್ಲವೋ ಅಥವಾ ಸಾಕಷ್ಟು ಸಕ್ಷಮವೋ ಎಂಬುದನ್ನೂ, ಅಥವಾ ಸ್ವತಂತ್ರ ಉಚ್ಚ ನ್ಯಾಯಾಲಯದ ಅಗತ್ಯ ಸಾಕಷ್ಟು ಇದೆಯೇ ಎಂಬುದನ್ನೂ ರಾಷ್ಟ್ರಪತಿಗಳು ನಿರ್ಧರಿಸಬೇಕು.

ಉಚ್ಚನ್ಯಾಯಾಲಯದ ಸ್ಥಾಪನೆ ಸಾಧಾರಣ ವಿಷಯವಲ್ಲ. ಸಂವಿಧಾನದಲ್ಲಿ ಸಮರ್ಪಕ ಸೌಲಭ್ಯಗಳ ಅಭಾವ ಅಥವಾ ಪ್ರಕ್ರಿಯೆಗಳ ಲೋಪ ಇವು ನ್ಯಾಯಾಲಯದ ಸ್ಥಾಪನೆಗೆ ಅಡ್ಡಬರುವ ಅಪಾರ ನ್ಯೂನತೆಗಳು, ಮಹಿಳಾ ಸದಸ್ಯರು ಈ ಲೋಪದೋಷಗಳನ್ನು ಎತ್ತಿ ತೋರಿಸಿರುವುದು ನನಗೆ ಅಪಾರ ಹರ್ಷ ತಂದಿದೆ. ಪ್ರಸ್ತಾವಿತ ತಿದ್ದುಪಡಿ ಅಂಗೀಕೃತವಾಗುವುದೆಂದು ನಂಬಿದ್ದೇನೆ.

**ಶ್ರೀ ರಾಜ್‌ಕೃಷ್ಣ ಬೋಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ಈ ತಿದ್ದುಪಡಿಯ ಮಂಡನೆಕಾರರ ಬಗ್ಗೆ ಗೌರವ ಪೂರ್ವಕವಾಗಿ ತಿಳಿಸುವುದೇನೆಂದರೆ ಈ ಪ್ರಶ್ನೆಯನ್ನು ಸಂಚಾಲಕ ಸಮಿತಿ ಪ್ರಸ್ತಾಪಿಸಿಯೂ ಇಲ್ಲ, ಪರಿಶೀಲಿಸಿಯೂ ಇಲ್ಲ. ಉಚ್ಚ ನ್ಯಾಯಾಲಯದ ಸ್ಥಾಪನೆಯ ವಿಷಯದಲ್ಲಿ ತಿದ್ದುಪಡಿ, ಪ್ರಾಂತ್ಯಗಳ ಅಧಿಕಾರಕ್ಕೆ ಬಾಧಕವಾಗಿದೆ. ತಿದ್ದುಪಡಿಯ ಪ್ರಸ್ತಾವದಂತೆ ಈ ಅಧಿಕಾರಗಳು ಕೇಂದ್ರದ ನಿಯಂತ್ರಣದಲ್ಲಿರುತ್ತವೆ. ಈ ವಿಷಯದಲ್ಲಿ ತಿದ್ದುಪಡಿಯು ಪ್ರಾಂತೀಯ ಅಧಿಕಾರದ ಮೇಲೆ ಏನೆಲ್ಲ ಪರಿಣಾಮ ಬೀರಬಲ್ಲವೋ ಹೇಳಲಾಗದು. ಕೆಲವು ಪ್ರಾಂತ್ಯಗಳ ಹೆಸರನ್ನು ತಿಳಿಸಲಾಗಿದೆ. ಅವುಗಳಲ್ಲಿ ಒರಿಸ್ಸಾ ಒಂದು. ಮಾನ್ಯರೆ, ನನಗೆ ತಿಳಿದಂತೆ ಆ ಪ್ರಾಂತ್ಯದಲ್ಲಿ ಒಂದು ಸಮಿತಿಯನ್ನು ಕೆಲ ವರ್ಷಗಳ ಹಿಂದೆ ರಚಿಸಲಾಯಿತು. ಉಚ್ಚ ನ್ಯಾಯಾಲಯದ ಸ್ಥಾಪನೆಯ ಬಗ್ಗೆ ಸಮಿತಿ ವರದಿ ಮಾಡಿತು. ಅದನ್ನು ಶಾಸನ ಸಭೆ ಇನ್ನೂ ಪರಿಶೀಲಿಸಿಲ್ಲ ಮತ್ತು ಅದರ ಬಗ್ಗೆ ಯಾವ ನಿರ್ಧಾರವನ್ನೂ ತಳೆದಿಲ್ಲ. ನನಗೆನಿಸುತ್ತದೆ, ಈ ತಿದ್ದುಪಡಿ ಎಷ್ಟು ಮುಖ್ಯವೆಂದರೆ ಅದು ಸಂಚಾಲಕ ಸಮಿತಿಯ ಪರಿಶೀಲನೆಗೆ ಬರಬೇಕಿತ್ತು. ಅದರ ಬಗ್ಗೆ ಸಾಕಷ್ಟು ಆಲೋಚನೆ ಮಾಡಿ, ಅನಂತರ ಅಂತಿಮ ಪರಿಶೀಲನೆಗೆಂದು ಸದನದ ಅವಗಾಹನೆಗೆ ತರಬೇಕಿತ್ತು. ಆದುದರಿಂದ ಈ ತಿದ್ದುಪಡಿಯನ್ನು ಸಂಚಾಲಕರ ಸಮಿತಿಯ ಅವಗಾಹನೆಗೆ ತರಲು ಒಪ್ಪುವಂತೆ ನಾನು ಅವರನ್ನು ಕೋರುತ್ತೇನೆ. ಅವರ ಅಭಿಪ್ರಾಯ ಕೋರಿ ಅನಂತರ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಬಹುದು.

**ಶ್ರೀ ಎಮ್.ಎಸ್. ಅನೆ** (ದಕ್ಷಿಣ ರಾಜ್ಯಗಳು) : ಮಾನ್ಯರೆ, ಈ ತಿದ್ದುಪಡಿ ಪ್ರಾಂತೀಯ ಉಚ್ಚನ್ಯಾಯಾಲಯಗಳ ಸ್ಥಾಪನೆಗೆ ಅನ್ವಯಿಸುವಂತಹುದು; ಹಾಗೂ ಈ ಅಧ್ಯಾಯ ಒಕ್ಕೂಟ ನ್ಯಾಯನಿರ್ಣಯಕ್ಕೆ ಸಂಬಂಧಿಸಿದೆ; ಆದುದರಿಂದ ಇದರಡಿಯಲ್ಲಿ ಆ ತಿದ್ದುಪಡಿ ಬರುವಂತಿಲ್ಲ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಶ್ರೀ ಅನೆಯವರು ತಿಳಿಸಿದ ಅಂಶಗಳ ಬಗ್ಗೆ ನನ್ನ ಸಂಪೂರ್ಣ ಸಹಮತ ಇದೆ. ಈ ಅಧ್ಯಾಯದ ಶೀರ್ಷಿಕೆ ಒಕ್ಕೂಟ ನ್ಯಾಯನಿರ್ಣಯ. ಪ್ರಸ್ತಾವಿತ ಖಂಡವು ಇದರಡಿಯಲ್ಲಿ ಬರುತ್ತದೆ ಎಂದು ನಾನು ಭಾವಿಸಿಲ್ಲ. ಹೊಸದಾಗಿ ರಚಿಸಿದ ಪ್ರಾಂತ್ಯಗಳಲ್ಲಿ ಉಚ್ಚ ನ್ಯಾಯಾಲಯದ ಸ್ಥಾಪನೆಯನ್ನು ಪ್ರಸ್ತಾವಿಸಲಾಗಿದೆ. ನೂತನ ಸಂವಿಧಾನದ ಪಠ್ಯವನ್ನು ನೋಡಿದಾಗ ಪ್ರಾಯಃ ಅದರಲ್ಲೊಂದು ಉಪಬಂಧವನ್ನು ಕಾಣಬಹುದು. ಅದರಂತೆ ಒಕ್ಕೂಟಕ್ಕೆ ಸರ್ವೋಚ್ಚ ನ್ಯಾಯಾಲಯವಿರುವಂತೆ ಪ್ರತಿಯೊಂದು ಪ್ರಾಂತ್ಯದಲ್ಲೂ ಒಂದು ಉಚ್ಚ ನ್ಯಾಯಾಲಯವಿರಬೇಕು. ಅಥವಾ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಲು ಸಾಮರ್ಥ್ಯವಿರುವ ಪ್ರಾಂತ್ಯಗಳು ಮತ್ತು ಸಾಮರ್ಥ್ಯವಿಲ್ಲದ ಪ್ರಾಂತ್ಯಗಳೆಂದು ಭೇದ ಕಲ್ಪಿಸುವುದಾದರೆ, ಆಗ ಉಚ್ಚ ನ್ಯಾಯಾಲಯಗಳಿರುವ ಪ್ರಾಂತ್ಯಗಳನ್ನು ಹೆಸರಿಸಿ ಅವು ಇಲ್ಲದೆಡೆ ಅವುಗಳ (ಉಚ್ಚ ನ್ಯಾಯಾಲಯಗಳ) ಸ್ಥಾಪನೆಗೆ ಅಧಿಕಾರವನ್ನು ಪಡೆಯಬೇಕು. ನಾನು ತಿಳಿಯಪಡಿಸುವುದು ಇಷ್ಟೆ, ಸಂವಿಧಾನದ ಪ್ರಾಂತೀಯ ಭಾಗದ ಅಂತಿಮ ಪಠ್ಯವನ್ನು ರಚಿಸುವಾಗ ಇಂತಹ ವಿವರಗಳು ಪರಿಗಣನೆಗೆ ಕಣ್‌ತಪ್ಪಿ ಮರೆಯಾಗಬಾರದು. ಈ ಅಧ್ಯಾಯದ ಮಟ್ಟಿಗೆ ಹೇಳುವುದಾದರೆ ಇದು ಇಲ್ಲಿ ಅಸಂಗತ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ನಾನು ಸಂಚಾಲಕ ಸಮಿತಿಯ ಒಬ್ಬ ಸದಸ್ಯ, ನನಗೆ ತಿಳಿದಂತೆ ಇಲ್ಲಿ ಮಂಡಿಸಿರುವ ಹಲವಾರು ತಿದ್ದುಪಡಿಗಳು, ಆ ಸಮಿತಿಯ ಮುಂದೆ

ಬಂದಿಲ್ಲ. ಸಂಚಾಲಕ ಸಮಿತಿಯ ವ್ಯಾಪ್ತಿಯ ಬಗ್ಗೆ ನನಗೆ ಅರಿವಿದೆ. ಈ ಸಂವಿಧಾನದ ಕರಡನ್ನಾಗಲಿ ಪ್ರಾಂತೀಯ ಸಂವಿಧಾನವನ್ನಾಗಲಿ ಖಂಡಾನುಕ್ರಮಣಿಕೆಯಲ್ಲಿ ಪರಿಶೀಲಿಸಿಲ್ಲ. ಇತರ ಸಲಹಾ ಸಮಿತಿಗಳು ಇವೆ. ಪ್ರಾಂತೀಯ ಸಂವಿಧಾನ ಸಮಿತಿ ಇದೆ. ಒಕ್ಕೂಟ ಸಂವಿಧಾನ ಸಮಿತಿ ಇದೆ; ಹೀಗೆ ಹಲವಾರು ಇವೆ. ಈ ತಿದ್ದುಪಡಿಯನ್ನು ಪರಿಶೀಲಿಸುವ ಹೊಣೆ ಸಂಚಾಲಕ ಸಮಿತಿಗೆ ಸೇರಿಲ್ಲ. ಆದುದರಿಂದ ಇದು ಮೊದಲು ತಿದ್ದುಪಡಿಗೆ ಹೋಗಬೇಕೆಂಬ ಆಕ್ಷೇಪಣೆಯಲ್ಲಿ ಅರ್ಥವಿಲ್ಲ. ಈ ತಿದ್ದುಪಡಿ ವಾಸ್ತವವಾಗಿ ಅಲ್ಲಿಗೆ ಬಂದರೆ ಅದು ನಮ್ಮ ಕೆಲಸವಲ್ಲವೆಂದು ಹೇಳುತ್ತೇವೆ.

ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಒಂದು ಕ್ರಿಯಾಲೋಪವನ್ನೆತ್ತಿದ್ದಾರೆ. ಈ ತಿದ್ದುಪಡಿ ಪ್ರಸ್ತುತ ಅಧ್ಯಾಯಕ್ಕೆ ಸಂಬಂಧಿಸಿಲ್ಲವೆಂದು ಆಕ್ಷೇಪವೆತ್ತಿದ್ದಾರೆ. ೧೮(ಎ) ಖಂಡದಲ್ಲಿ ಮಾನ್ಯ ಸದಸ್ಯೆ ಆಕ್ಷೇಪಿಸಿರುವಂತೆ ಶಾಸನಸಭೆಯ ಮನವಿಯ ಮೇರೆಗೆ ರಾಷ್ಟ್ರಪತಿಯವರು ಉಚ್ಚನ್ಯಾಯಾಲಯವನ್ನು ಸ್ಥಾಪಿಸಬೇಕು. ಇದನ್ನು ಇಡಿಯಾಗಿ ಪ್ರಾಂತೀಯ ಸಂವಿಧಾನಕ್ಕೆ ಅನ್ವಯಿಸಬೇಕಿದ್ದರೆ, ಇಲ್ಲಿ ರಾಷ್ಟ್ರಪತಿಗಳು ಮತ್ತು ಸಚಿವ ಮಂಡಳಿಯೇ ಅಂತಿಮ ಪ್ರಾಧಿಕಾರವೆಂಬುದನ್ನು ಇಲ್ಲಿ ಉಪಬಂಧಿಸದಿದ್ದರೆ, ಆಗ ಅದು ಲೋಪವೆಂದು ತೋರುತ್ತದೆ. ಪ್ರಾಂತೀಯ ಸಂವಿಧಾನದ ಉಪಬಂಧ ಏಕಪಕ್ಷೀಯವಾಗುತ್ತದೆ. ಸಂವಿಧಾನ ಅಧಿನಿಯಮದಲ್ಲಿ ಒಕ್ಕೂಟ ಭಾಗದಲ್ಲೊಂದು ಅನುರೂಪವಾದ ಉಪಬಂಧ ಇರುವುದಿಲ್ಲ. ಅದು ೧೮ (ಎ) ಖಂಡದೊಳಗೆ ಅಂತರ್ಗತವಾಗುತ್ತದೆಯೋ ಅಥವಾ ವಿಧೇಯಕದ ಮೊದಲ ಭಾಗದಲ್ಲೋ ಅಥವಾ ಕೊನೆಯ ಭಾಗದಲ್ಲೋ ಎಂಬುದು; ಅಪ್ರಸ್ತುತ ಆದರೆ ಸಂವಿಧಾನದಲ್ಲೊಂದು ಉಪಬಂಧ ಅಳವಡಿಸಲಿಕ್ಕೆ ಅವಕಾಶ ಇರಲೇಬೇಕು. ಅಂತೆಯೇ ತತ್ಸಮಾನವಾದ ಉಪಬಂಧವನ್ನು ಸಹ ವಿವರಪೂರ್ಣವಾಗಿ, ಪ್ರಾಂತೀಯ ಸಂವಿಧಾನದಲ್ಲಿ ಸೇರಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು :** ಸಂವಿಧಾನದ ಯಾವುದೇ ಭಾಗದಲ್ಲಾದರೂ ಅಗತ್ಯವಿರುವೆಡೆ ಉಪಬಂಧಕ್ಕೆ ಅವಕಾಶವಿರುವುದೆಂದು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಆಶ್ವಾಸನೆ ನೀಡಿದ್ದಾರೆಂದುಕೊಂಡಿದ್ದೇನೆ. ಆ ಬಗ್ಗೆ ಕರಡು ತಯಾರಕರು ಗಮನವಿಡುತ್ತಾರೆ. ಹಾಗಾಗಿ ಮಂಡನೆಕಾರರು ತಿದ್ದುಪಡಿಗೆ ಒತ್ತಾಯಿಸುತ್ತಾರೆಯೇ?

**ಶ್ರೀಮತಿ ಜಿ. ದುರ್ಗಾಬಾಯಿ :** ಆ ಭರವಸೆ ಹೊತ್ತು ನಾನು ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತೇನೆ. ಸದನದ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

## ಖಂಡ – ೧೯

**ಮಾನ್ಯ ಉಪಸಭಾಧ್ಯಕ್ಷರು :** ನಂತರ ನಾವು ೧೯ನೇ ಖಂಡಕ್ಕೆ ಹೋಗೋಣ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ೧೯ನೇ ಖಂಡ ಕೆಳಕಂಡಂತಿದೆ–

"ಮಹಾಸಭೆಯಲ್ಲಿ ಒಬ್ಬರು ಪ್ರಧಾನ ಲೆಕ್ಕಪರಿಶೋಧಕರು ಇರುತ್ತಾರೆ. ಅವರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಪದಚ್ಯುತವಾಗುವ ರೀತಿಯಲ್ಲೆ ಮತ್ತು ಕಾರಣಗಳಿಗಾಗಿ ಮಾತ್ರವೆ ಅವರನ್ನು ಅಧಿಕಾರದಿಂದ ಪದಚ್ಯುತಗೊಳಿಸಬಹುದು."

ಈ ಖಂಡದ ಹಿಂದಣ ತತ್ತ್ವವೇನೆಂದರೆ, ಪ್ರಧಾನ ಲೆಕ್ಕಪರಿಶೋಧಕರು ದಕ್ಷತೆಯಿಂದ ತಮ್ಮ ಪ್ರಕಾರ್ಯವನ್ನು ನೆರವೇರಿಸುವಂತಹವರಾಗಿದ್ದರೆ, ಅವರು ತಮ್ಮನ್ನು ಒಬ್ಬ ಲೆಕ್ಕಪರಿಶೋಧಕನಾಗಿ ಕಾರ್ಯಕಾರಿ ಸರ್ಕಾರದ ಆಮಿಷಕ್ಕೆ ಪಕ್ಕಾಗದೆ ಸ್ವತಂತ್ರ ಅಧಿಕಾರಿ ಎಂದು ಭಾವಿಸಬೇಕು. ಆದುದರಿಂದಲೇ ಅವರ ಸ್ಥಾನಮಾನಗಳು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಸ್ಥಾನಕ್ಕೆ ಸಮನಾಗಿರುತ್ತವೆ. ನನ್ನ ಅಭಿಪ್ರಾಯದಂತೆ ಸಂವಿಧಾನದಲ್ಲಿ ಅತ್ಯಗತ್ಯವಾಗಿ ಇರಬೇಕಾದ ಖಂಡ ಇದು.

**ಮಾನ್ಯ ಉಪಸಭಾಧ್ಯಕ್ಷರು :** ೧೯ನೇ ಖಂಡಕ್ಕೆ ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರ ತಿದ್ದುಪಡಿಯೊಂದೆ ಇದೆ. (೧ನೇ ಪೂರಕ ಪಟ್ಟಿಯ ೧೮ನೇ ಸಂಖ್ಯೆಯ ಬಾಬು)

(ಈ ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲ.)

**ಮಾನ್ಯ ಉಪಸಭಾಧ್ಯಕ್ಷರು :** ಯಾರಾದರೂ ೧೯ನೇ ಸಂಖ್ಯೆಯ ಮೂಲಖಂಡದ ಬಗ್ಗೆ ಮಾತನಾಡಲು ಬಯಸುತ್ತಾರೆಯೇ?

ಮುಂದಿಟ್ಟಿರುವ ವಿಷಯ :

"೧೯ನೇ ಖಂಡವನ್ನು ಅಂಗೀಕರಿಸಬೇಕು."

೧೯ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ – ೨೦

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ೨೦ನೇ ಖಂಡವನ್ನು ಅಂಗೀಕರಿಸಬೇಕೆಂದು ನಾನು ಮಂಡಿಸುತ್ತಿದ್ದೇನೆ. ಖಂಡ ಹೀಗಿದೆ:

"ಪ್ರಧಾನ ಲೆಕ್ಕಪರಿಶೋಧಕರ ಕರ್ತವ್ಯಗಳು ಹಾಗೂ ಅಧಿಕಾರಗಳು ೧೯೩೫ರ ಅಧಿನಿಯಮದಲ್ಲಿರುವ ಉಪಬಂಧಗಳ ಅನುಸಾರ ಇರುತ್ತವೆ."

(೨ನೇ ಪಟ್ಟಿಯ ೩೩೭ನೇ ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲ.)

೨೦ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ – ೨೧

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ೨೧ನೇ ಖಂಡ ಅಂಗೀಕರಿಸಬೇಕೆಂದು ನಾನು ಮಂಡಿಸುತ್ತಿದ್ದೇನೆ. ಅದು ಹೀಗಿದೆ:

"ಮಹಾಸಭೆಗಾಗಿ ಒಂದು ಲೋಕಸೇವಾ ಆಯೋಗದ ರಚನೆಯಾಗಬೇಕು. ಅದು ೧೯೩೫ರ ಅಧಿನಿಯಮದಲ್ಲಿರುವ ಉಪಬಂಧಗಳ ಅನುಸಾರ ಸಂಯೋಜಿತವಾಗಿರಬೇಕು. ಪರಂತು, ಆಯೋಗದ ಅಧ್ಯಕ್ಷರು ಮತ್ತು ನೇಮಕಾತಿಯನ್ನು ರಾಷ್ಟ್ರಪತಿಗಳು ತಮ್ಮ ಸಚಿವರ ಸಲಹೆಯ ಮೇರೆಗೆ ಮಾಡುತ್ತಾರೆ."

**ಮಾನ್ಯ ಉಪಸಭಾಧ್ಯಕ್ಷರು :** ಶ್ರೀ ಎಚ್.ವಿ. ಪಾಟಸ್ಕರ್ ಅವರ ಹೆಸರಿನಲ್ಲೊಂದು ತಿದ್ದುಪಡಿ ಇದೆ.

**ಶ್ರೀ ಎಚ್.ವಿ. ಪಾಟಸ್ಕರ್** (ಬಾಂಬೆ : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸುತ್ತೇನೆ:

"೨೧ನೇ ಖಂಡದಲ್ಲಿ 'ಅವರ ಸಚಿವರು' ಎಂಬ ಪದಗಳಿಗೆ ಬದಲಾಗಿ 'ಅವರ ಸಚಿವರ ಮಂಡಲಿ' ಎಂದು ಪ್ರತಿಯೋಜಿಸಬೇಕು."

ನನ್ನ ತಿದ್ದುಪಡಿಯ ಅನಂತರ ಇನ್ನೊಂದು ತಿದ್ದುಪಡಿ ಇದೆ ಎಂದು ತಿಳಿದುಬಂದಿದೆ ಸಂ.೩೩೯, ಅದರಂತೆ ಈ ಎಲ್ಲ ಪದಗಳನ್ನು ಬಿಡಬೇಕೆಂದು ಸೂಚಿಸಲಾಗಿದೆ. ಪದಗಳನ್ನು ಉಳಿಸಿಕೊಳ್ಳುವ ಹಾಗಿದ್ದರೆ ಸಚಿವ ಮಂಡಳಿ ಎಂಬ ಪದವಿರಬೇಕು. ಸಚಿವರು ಎಂದಲ್ಲ. ಇದಕ್ಕೆ ಕಾರಣ ಸರಳವಾದುದು. ೧೦ನೇ ಖಂಡವನ್ನು ಈಗಾಗಲೇ ಅನುಮೋದಿಸಿದ್ದೇವೆ. ಅದರಲ್ಲಿ ಒಂದು ಸಚಿವ ಮಂಡಳಿ ಎಂದು ನಮೂದಿಸಿದ್ದೇವೆ. ನಾನು ಪ್ರಸ್ತಾವಿಸಿರುವುದು ಕೇವಲ ಶಾಬ್ದಿಕ ತಿದ್ದುಪಡಿ. ಅದರ ಉಳಿವು ಅಳಿವು ೩೩೯ನೇ ತಿದ್ದುಪಡಿಯನ್ನು ಅವಲಂಬಿಸಿದೆ.

(೩೩೯ ಮತ್ತು ೩೪೦ನೇ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** (ಮದ್ರಾಸ್ : ಸಾಮಾನ್ಯ) : "ಈ ವಿಷಯಗಳನ್ನೆಲ್ಲ ಅಲ್ಪ ಸಂಖ್ಯಾತರ ಉಪಸಮಿತಿಯಲ್ಲಿ ಪರಿಶೀಲಿಸಲಾಗುತ್ತಿರುವ ಕಾರಣ ನನ್ನ ಸಂ.೩೪೧ನೇ ಸಂಖ್ಯೆಯ ತಿದ್ದುಪಡಿಯನ್ನು ನಾನು ಮಂಡಿಸುತ್ತಿಲ್ಲ.

(೩೪೨ನೇ ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲ.)

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಇಲ್ಲಿ ಮಂಡಿಸಲಾಗಿರುವ ಒಂದೇ ತಿದ್ದುಪಡಿ ಎಂದರೆ ಶ್ರೀ ಪಾಟಸ್ಕರ್ ಅವರದು. 'ಅವರ ಸಚಿವರು' ಎಂಬ ಪದಗಳಿಗೆ ಬದಲಾಗಿ 'ಸಚಿವ ಮಂಡಲಿ' ಎಂಬ ಪದಗಳನ್ನು ಪ್ರತಿಯೋಜಿಸಬೇಕೆಂದು ಅವರ ಅಪೇಕ್ಷೆ. ಶ್ರೀ ಶಿಬನ್‌ಲಾಲ್ ಸಕ್ಸೇನ ಅವರು ತಮ್ಮ ಸಂ.೩೩೯ನೇ ತಿದ್ದುಪಡಿಯನ್ನು ಮಂಡಿಸಿದ್ದರೆ ಅದು ಅಂಗೀಕೃತವಾಗಬೇಕಿತ್ತು. ಏಕೆಂದರೆ ವಾಸ್ತವವಾಗಿ ಅವರ 'ಸಚಿವರ ಸಲಹೆಯ ಮೇರೆಗೆ' ಎಂಬ ಪದಗಳು ಸಂಪೂರ್ಣ ಅನಗತ್ಯವಾದವು. ರಾಷ್ಟ್ರಪತಿಗಳು ನೇಮಕಾತಿ ಮಾಡಬೇಕಿದ್ದರೆ, ಒಕ್ಕೂಟದ ಸಂವಿಧಾನದ ನಿಯಮಗಳ ಅಡಿಯಲ್ಲಿ ಅವರ ಸಚಿವರ ಸಲಹೆ ಇಲ್ಲದೆ ನೇಮಕಾತಿ ಮಾಡುವ ಸ್ವಾತಂತ್ರ್ಯ ಅವರಿಗಿಲ್ಲ. ಆದರೆ ಆ ಪದಗಳು ಅಲ್ಲಿ ಸೇರಿವೆ. ಜೊತೆಗೆ ಅವುಗಳನ್ನು ಬಿಡಬೇಕೆಂಬ ತಿದ್ದುಪಡಿಯನ್ನೂ ಯಾರೂ ಮಂಡಿಸಿಲ್ಲವಾದುದರಿಂದ ಈಗ 'ಸಚಿವರು' ಎಂಬ ಪದಗಳ ಬದಲು 'ಸಚಿವ ಮಂಡಲಿ' ಎಂಬ ಪದಗಳ ಪ್ರತಿಯೋಜನೆಗೆ ಒಪ್ಪಿಕೊಳ್ಳುವ ಅಗತ್ಯ ತೋರಲಿಲ್ಲ.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಶ್ರೀ ಶಿಬನ್‌ಲಾಲ್ ಸಕ್ಸೇನ ಅವರ ಹೆಸರಲ್ಲೊಂದು ತಿದ್ದುಪಡಿ ಇದೆ. ನಾನದನ್ನು ಮಂಡಿಸಲು ಇಚ್ಛಿಸುತ್ತೇನೆ. ಅದರಿಂದ ಏಕರೂಪತೆಯನ್ನು ತರುವ ಸಾಧ್ಯತೆಯಿದೆ. ರಾಷ್ಟ್ರಪತಿಗಳು ಎಂಬ ಪದ ಬಂದಾಗಲೇ ರಾಷ್ಟ್ರಪತಿ ತಮ್ಮ ಸಚಿವ ಸಂಪುಟದೊಡನೆ ಸಮಾಲೋಚಿಸಿ ಎಂಬ ಅರ್ಥಬರುತ್ತದೆ. ಏಕಾಏಕಿ ಒಂದು ನಿರ್ದಿಷ್ಟ ಖಂಡದಲ್ಲಿ ಸಚಿವರ ಬಗ್ಗೆ ನಮೂದು ಮಾಡಿದರೆ ಅದು ಸಮಸ್ಯೆಗೆ ಕಾರಣವಾಗುತ್ತದೆ. ಹಾಗಾಗಿ ಸ್ಪಷ್ಟನೆ ಮತ್ತು ಏಕರೂಪತೆಗಾಗಿ 'ತಮ್ಮ ಸಚಿವರ ಸಲಹೆಯ ಮೇರೆಗೆ' ಎಂಬ ಪದಗಳನ್ನು ಬಿಡಬೇಕು.

**ಮಾನ್ಯ ಉಪಸಭಾಧ್ಯಕ್ಷರು** : ಶ್ರೀ ಶಿಬನ್‌ಲಾಲ್ ಸಕ್ಸೇನ ಅವರು ಆ ಅರ್ಥದಲ್ಲಿ ತಿದ್ದುಪಡಿಯನ್ನು ಮಂಡಿಸಿರಲಾರರು. ಪ್ರಾಯಃ ಅವರು ಪೂರ್ತಿಯಾಗಿ ಬೇರೊಂದು ಅರ್ಥದಲ್ಲೆ ಮಂಡಿಸಿರಬಹುದು.

[ಆ ಹೊತ್ತಿಗೆ, ಸದನದಲ್ಲಿ ಶ್ರೀ ಶಿಬನ್‌ಲಾಲ್ ಸಕ್ಸೇನ ಅವರು ಹಾಜರಿದ್ದರು.]

**ಪ್ರೊಫೆಸರ್ ಶಿಬನ್‌ಲಾಲ್ ಸಕ್ಸೇನಾ** (ಉತ್ತರ ಪ್ರದೇಶ : ಸಾಮಾನ್ಯ) : ಮಾನ್ಯರೆ ನನ್ನ ತಿದ್ದುಪಡಿ ಸಂ.೩೩೯ ನಾನದನ್ನು ಮಂಡಿಸುತ್ತಿದ್ದೇನೆ.

"೨೧ನೇ ಖಂಡದಲ್ಲಿ ಕೆಳಕಂಡ ಪದಗಳನ್ನು ಬಿಡಬೇಕು:

'ಅವರ ಸಚಿವರ ಸಲಹೆಯ ಮೇರೆಗೆ'."

ರಾಷ್ಟ್ರಪತಿ ತಮ್ಮ ವಿವೇಚನಾನುಸಾರ ಕ್ರಮಕೈಗೊಳ್ಳಲಿಕ್ಕೆ ಅವರಿಗೆ ಯಾವ ಅಧಿಕಾರವೂ ಇಲ್ಲದಿರುವುದರಿಂದ ಈ ಪದಗಳು ಅನಾವಶ್ಯಕ, ಆ ಕಾರಣ ಈ ಪದಗಳನ್ನೂ ಬಿಡಬಹುದು.

**ಸರ್ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ನಾನು ತಿದ್ದುಪಡಿಯನ್ನು ಅನುಮೋದಿಸುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ತಿದ್ದುಪಡಿಯನ್ನು ಮಂಡಿಸಿರುವುದರಿಂದ ನಾನು ಅದನ್ನು ಅಂಗೀಕರಿಸಿದ್ದೇನೆ.

**ಶ್ರೀ ಎಚ್.ವಿ. ಪಾಟಸ್ಕರ್** : ೩೩೯ನೇ ತಿದ್ದುಪಡಿಯನ್ನು ಮಂಡಿಸಿರುವುದರಿಂದ ನಾನು ನನ್ನ ತಿದ್ದುಪಡಿಯನ್ನು ಹಿಂಪಡೆಯುತ್ತಿದ್ದೇನೆ.

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"೨೧ನೇ ಖಂಡದಲ್ಲಿ ಕೆಳಕಂಡ ಪದಗಳನ್ನು ಬಿಡಬೇಕು:

'ಅವರ ಸಚಿವರ ಸಲಹೆ ಮೇರೆಗೆ'."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ – ೨೨

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಾನು ೨೨ನೇ ಖಂಡವನ್ನು ಮಂಡಿಸುತ್ತೇನೆ. ಅದು ಹೀಗಿದೆ:

"೨೨ ಅಖಿಲ ಭಾರತ ಸೇವಾ ವ್ಯವಸ್ಥೆಗೆ ಅವಕಾಶ ಕಲ್ಪಿಸಬೇಕು. ಅದರ ನೇಮಕಾತಿ ಮತ್ತು ಸೇವಾ ನಿಯಮಗಳು ಸಮ್ಮಿಶ್ರ ಕಾನೂನಿನ ನಿಯಂತ್ರಣದಲ್ಲಿರಬೇಕು."

ಸದನಕ್ಕೆ ತಿಳಿದಿರುವಂತೆ ಲಾಗಾಯ್ತಿನಿಂದ ನಾವು ಅಖಿಲ ಭಾರತ ಸೇವಾ ವ್ಯವಸ್ಥೆಯನ್ನು ಚಾಲ್ತಿಯಲ್ಲಿ ಇಟ್ಟುಕೊಂಡಿದ್ದೇವೆ. ಅವು ರಾಜ್ಯ ಸರ್ಕಾರದ ಕಾರ್ಯದರ್ಶಿಯ ನಿಯಂತ್ರಣದಲ್ಲಿವೆ. ೧೫ನೇ ಆಗಸ್ಟ್‌ನಿಂದ ಈ ನಿಯಂತ್ರಣ ರದ್ದಾಗುತ್ತದೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಪ್ರಾಂತೀಯ ಸ್ವಾಯತ್ತತೆಯ ನಿಯಮಗಳಿಗೆ ಹೊಂದಿಕೊಂಡಂತೆ ಸಮ್ಮಿಶ್ರ ಕಾನೂನಿನ ನಿಯಂತ್ರಣದಲ್ಲಿ ಅಖಿಲ ಭಾರತ ಆಧಾರಿತ ಸೇವಾ ವ್ಯವಸ್ಥೆಯಿಂದ ನೇಮಕಗೊಳ್ಳಬೇಕೆ ಎಂಬುದು ಪ್ರಶ್ನೆ.

ಅಖಿಲ ಭಾರತ ಆಡಳಿತ ಸೇವಾ ವ್ಯವಸ್ಥೆಯ ಸ್ಥಾಪನೆಯ ಔಚಿತ್ಯದ ಬಗ್ಗೆ ಭಾರತ ಸರ್ಕಾರದ ಗೃಹ ಇಲಾಖೆ, ಪ್ರಾಂತೀಯ ಸಚಿವರ ಅಪೇಕ್ಷೆಯನ್ನು ತಿಳಿಯಲು ಕೈಗೊಂಡ ಕ್ರಮಗಳ ಬಗ್ಗೆ ತಮ್ಮಲ್ಲಿ ಕೆಲವರಿಗೆ ಅರಿವಿದೆ. ಈ ವಿಷಯದಲ್ಲಿ ಸರ್ವಾನುಮತ ಕಂಡುಬಂದಿರುವುದರಿಂದ ಅಂತಹ ಸೇವಾ ವ್ಯವಸ್ಥೆಯನ್ನು ತೆರೆಯಲು ತೆಗೆದುಕೊಂಡ ಕಾರ್ಯನಿರ್ವಾಹಕ ಕ್ರಮಗಳಿಗೆ ಕಾನೂನಿನ ಅಧಿಕಾರದ ಲೇಪಕೊಡುವ ಬಗ್ಗೆ ಒಂದು ಪ್ರಯತ್ನದ ಫಲಶ್ರುತಿ ಈ ತಿದ್ದುಪಡಿ. ಇದು ನಿಯಮಿಸುವಂತೆ ಎಲ್ಲೆಲ್ಲಿ ಈ ವ್ಯವಸ್ಥೆಯ ಅಗತ್ಯವಿದೆಯೋ ಅಲ್ಲೆಲ್ಲ ತೆರೆಯಲು ಸಂವಿಧಾನದಲ್ಲಿ ಉಪಬಂಧಗಳನ್ನು ಅಳವಡಿಸಬೇಕು. ಅಖಿಲ ಭಾರತ ಸೇವಾವ್ಯವಸ್ಥೆ ಅಪೇಕ್ಷಣೀಯ. ಅತ್ಯುನ್ನತ ಸೇವಾಕ್ಷೇತ್ರಗಳಲ್ಲಿ ರಾಷ್ಟ್ರದ ಅತ್ಯುತ್ಕೃಷ್ಟ ಪ್ರತಿಭೆಯನ್ನು ಬಳಸಿಕೊಳ್ಳಬಹುದು ಎಂದು ನನಗನ್ನಿಸುತ್ತದೆ. ಪ್ರಾಂತೀಯ ಸರ್ಕಾರದಲ್ಲೋ ಅಥವಾ ಸಮ್ಮಿಶ್ರ ಸರ್ಕಾರದ ಅಡಿಯಲ್ಲೋ ಅತ್ಯುತ್ಕೃಷ್ಟ ಗುಣಮಟ್ಟದ ಪ್ರತಿಭೆಯನ್ನು ಆಕರ್ಷಿಸುವ ಉದ್ದೇಶದಿಂದ ಪ್ರಾಂತೀಯ ಸೀಮೋಲ್ಲಂಘನೆ ಮಾಡಬೇಕಿರುತ್ತೆ. ಇದು ಪ್ರಾಂತೀಯ ಸ್ವಾಯತ್ತತೆಗೆ ಭಂಗತರುತ್ತದೆಯೇ ಇಡೀ ಸೇವಾ ವ್ಯವಸ್ಥೆಯನ್ನು ಪ್ರಾಂತೀಯ ಸಚಿವರಿಗೆ ಬಿಟ್ಟರಾಗದೆ ಎಂಬೆಲ್ಲ ಪ್ರಶ್ನೆಗಳು ಏಳುತ್ತವೆ. ನಾನು ಹೇಳಬಯಸುವುದಿಷ್ಟೆ. ಪ್ರಸ್ತುತದಲ್ಲಿ ಜವಾಬ್ದಾರಿಯುತ ಸಚಿವರು–ಯಾರೆಲ್ಲ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ ಅವರು ಈಗಾಗಲೇ ಅಖಿಲ ಭಾರತ ಆಧಾರಿತ ನೇಮಕಾತಿಯ ಅಗತ್ಯವನ್ನು ಮನಗಂಡಿದ್ದಾರೆ. ಹೊಸ ಸಂವಿಧಾನದಲ್ಲಿ ಅಂತಹ ವ್ಯವಸ್ಥೆಗೊಂದು ಅವಕಾಶ ಕಲ್ಪಿಸುವುದು, ವಿವೇಕಯುತ ಕ್ರಮ.

**ಮಾನ್ಯ ಉಪಸಭಾಧ್ಯಕ್ಷರು** : ಶ್ರೀ ಸಂತಾನಮ್ ಅವರ ಒಂದು ತಿದ್ದುಪಡಿ ಇದೆ.

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನಾನು ಮಂಡಿಸುತ್ತಿಲ್ಲ.

**ಮಾನ್ಯ ಉಪಸಭಾಧ್ಯಕ್ಷರು** : ಈ ಖಂಡಕ್ಕೆ ಬೇರಾವ ತಿದ್ದುಪಡಿಗಳಿಲ್ಲದಿರುವ ಕಾರಣ, ೨೨ನೇ ಖಂಡವನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"೨೨ನೇ ಖಂಡವನ್ನು ಅಂಗೀಕರಿಸಬೇಕು."

೨೨ನೇ ಖಂಡವನ್ನು ಅಂಗೀಕರಿಸಲಾಯಿತು.

## ಖಂಡ – ೨೨ಎ

**ಮಾನ್ಯ ಉಪಸಭಾಧ್ಯಕ್ಷರು** : ೨೨–ಎ ಸಂಖ್ಯೆಯ ಹೊಸ ಖಂಡದ ಬಗ್ಗೆ ಸೂಚನೆ ಬಂದಿದೆ. ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರಿಗೆ ಖಂಡದ ಮಂಡನೆಗೆ ಕರೆ ಕೊಡುತ್ತಿದ್ದೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ ನಾನು ಮಂಡಿಸುತ್ತೇನೆ.

"೨೨ನೇ ಖಂಡದ ಅನಂತರ ಹೊಸ ಖಂಡವನ್ನು ಒಳಸೇರಿಸಬೇಕು:

'೨೨–ಎ ಸೇನೆ, ನೌಕೆ ಮತ್ತು ವಾಯುಪಡೆಗಳಲ್ಲಿ ಆಯೋಗಗಳನ್ನು ತೆರೆಯಲು ಸಂವಿಧಾನದಲ್ಲಿ ಉಪಬಂಧ ಇರಬೇಕು ಹಾಗೂ ರಕ್ಷಣಾ ಸೇವೆಯ ನೇಮಕಾತಿ ಸೇವಾ ನಿಯಮಗಳು ಮತ್ತು ಸೇವಾ ನಿಯಂತ್ರಣಕ್ಕಾಗಿ ಸಂವಿಧಾನದಲ್ಲಿ ಉಪಬಂಧವಿರಬೇಕು.

ಲೋಕ ಸೇವಾ ಆಯೋಗದ ಮಾದರಿಯಲ್ಲೇ ಸೇನೆ ಮತ್ತು ರಕ್ಷಣಾ ಸೇವೆಗಳಿಗೆ ಆಯೋಗಗಳನ್ನು ಸ್ಥಾಪಿಸಬೇಕು'."

ಮಾನ್ಯರೆ, ಸೇವಾ ವ್ಯವಸ್ಥೆಗೆ ಸಂಬಂಧಿಸಿದ ೬ನೇ ಅಧ್ಯಾಯವನ್ನು ಈಗಷ್ಟೇ ಮಂಡಿಸಿ ಅಂಗೀಕರಿಸಿದ್ದೇವೆ. ೧೯೩೫ರ ಭಾರತ ಸರ್ಕಾರ ಅಧಿನಿಯಮದ ಅನುಸಾರ ಲೋಕ ಸೇವಾ ಆಯೋಗದ ಸ್ಥಾಪನೆಗೆ ೨೧ನೇ ಖಂಡ ಅವಕಾಶ ಕಲ್ಪಿಸಿದೆ. ೧೯೩೫ರ ಭಾರತ ಸರ್ಕಾರ ಅಧಿನಿಯಮದ ೨೬೬ನೇ ಪ್ರಕರಣದಲ್ಲಿ ಲೋಕ ಸೇವಾ ಆಯೋಗಕ್ಕೆ ಕೇವಲ ನಾಗರಿಕ ಸೇವಾ ನೇಮಕಾತಿಯ ಅಧಿಕಾರವನ್ನು ಮಾತ್ರ ಕೊಡಲಾಗಿದೆ. ಉಪ ಪ್ರಕರಣ(ಎ) ಹೀಗಿದೆ:

"ನಾಗರಿಕ ಸೇವೆ ಮತ್ತು ನಾಗರಿಕ ಪಡೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ."

ಆದುದರಿಂದ ೨೧ ಮತ್ತು ೨೨ನೇ ಖಂಡಗಳು ಕೇವಲ ನಾಗರಿಕ ಪಡೆಗಳಿಗೆ ಮಾತ್ರ ಸಂಬಂಧಿಸಿವೆ. ರಕ್ಷಣಾ ಸೇವೆಗಳಿಗೆ ೬ನೇ ಅಧ್ಯಾಯದಲ್ಲಿ ಯಾವ ಉಪಬಂಧವೂ ಇಲ್ಲ. ೧೯೩೫ರ ಭಾರತ ಸರ್ಕಾರ ಅಧಿನಿಯಮದ ೧೦ನೇ ಭಾಗದಲ್ಲಿ ರಕ್ಷಣಾ ಸೇವೆಗೆ ಉಪಬಂಧವಿದೆ. ಬುದ್ಧಿ ಪೂರ್ವಕವಾಗಿಯೋ ಅಥವಾ ಪ್ರಮಾದವಶಾತ್ ಸಂವಿಧಾನ ಕರಡಿನಲ್ಲಿ ಈ ನಿರ್ದಿಷ್ಟ ಉಪಬಂಧಗಳನ್ನು ಸೇರಿಸಿಲ್ಲ. ಅಧ್ಯಾಯದ ಮೊದಲ ಭಾಗ ರಕ್ಷಣಾ ಸೇವಾ ನೇಮಕಾತಿಗೆ ಸಂಬಂಧಿಸಿದೆ. ಎರಡನೆಯ ಭಾಗ ಲೋಕ ಸೇವಾ ನೇಮಕಾತಿ (ನಾಗರಿಕ ಸೇವಾ ನೇಮಕಾತಿ)ಗೆ ಸಂಬಂಧಿಸಿದೆ. ಇದಕ್ಕಾಗಿ ಲೋಕ ಸೇವಾ ಆಯೋಗವನ್ನು ರಚಿಸಲಾಗಿದೆ. ಆದರೆ ನಮ್ಮ ಕರಡು ಸಂವಿಧಾನದಲ್ಲಿ ೬ನೇ ಅಧ್ಯಾಯ ಕೇವಲ ನಾಗರಿಕ ಸೇವೆಗೆ ಮಾತ್ರ ಸಂಬಂಧಿಸಿದೆ. ಭಾರತ ಸರ್ಕಾರ ಅಧಿನಿಯಮದ ಅಧ್ಯಾಯದ ಪ್ರಾರಂಭಿಕ ಭಾಗ, ರಕ್ಷಣಾ ಸೇವೆಗೆ ಸಂಬಂಧಿಸಿದ್ದು ಅದನ್ನು ಬಿಡಲಾಗಿದೆ. ಪ್ರಸ್ತುತ ಸಂವಿಧಾನದಲ್ಲಿ ಕಮಿಷನರ್ ಶ್ರೇಣಿ ದೊರೆಯ ಕಮಿಷನ್ (ಆಯೋಗ) ಅಥವಾ ವೈಸ್‌ರಾಯ್ ಅವರ ಕಮಿಷನ್ ಹುದ್ದೆಗೆ ನೇಮಕಾತಿಯನ್ನು ಮಹಾಪ್ರಭುಗಳ ರಾಜಾಜ್ಞೆಗಳಿಂದ ನಿಯಂತ್ರಿಸಲಾಗಿದೆ. ಜೊತೆಗೆ ಸಾಧಾರಣ ರಕ್ಷಣಾ ಸೇವೆಗೆ ನೇಮಕಾತಿಯ ಬಗ್ಗೆ ಉಲ್ಲೇಖವಿದೆ. ಈಗ ಮಹಾಪ್ರಭುಗಳ ರಾಜಾಜ್ಞೆಯ ಸ್ಥಾನದಲ್ಲಿ ಯಾವ ಆದೇಶ ಜಾರಿಗೆ ಬರುತ್ತದೆ? ನಮ್ಮ ಸೇವಾ ವ್ಯವಸ್ಥೆಯಲ್ಲಿ ರಕ್ಷಣಾ ಸೇವೆಗಳು ಅತಿ ಮುಖ್ಯ ಭಾಗವಾಗುತ್ತವೆ; ಆ ಹುದ್ದೆಗಳು ಜವಾಬ್ದಾರಿಯುತವೂ ಆಗಿರುತ್ತವೆ. ಇವೆಲ್ಲ ಹುದ್ದೆಗಳಿಗೆ ನೇಮಕಾತಿ ವಿಷಯವನ್ನು ಮಹಾಸೇನಾನಾಯಕರಿಗೆ ಅಥವಾ ಲೆಫ್ಟಿನೆಂಟ್‌ಗಳಿಗೆ ಬಿಡುವುದೇ? ಅವರ ಇಚ್ಛಾನುಸಾರ ನೇಮಕ ಮಾಡಬಹುದೆ? ನಿಸ್ಸಂದೇಹವಾಗಿ ಈ ಆಯೋಗಗಳ ರಚನೆಗೆ ಮಂಜೂರಾತಿ ನಿಯಮಗಳನ್ನು ರೂಪಿಸಲಾಗುತ್ತದೆ. ಪ್ರಭುಗಳ ಆಯೋಗದ ನೇಮಕಾತಿ ಹಾಗೂ ಲೋಕಸೇವಾ ಆಯೋಗ ಮಾದರಿಯಲ್ಲಿ ಸ್ವತಂತ್ರ ಸಂಸ್ಥೆಯೊಂದು ನಮಗಿರಬೇಡವೆ?

ಮಾನ್ಯರೆ, ಇಲ್ಲಿಯವರೆಗೆ ಅಧಿಕಾರಾರೂಢರಾಗಿರುವವರು ಭಾರತದ ಜನರನ್ನು ಯೋಧರು ಮತ್ತು ಯೋಧೇತರ ವರ್ಗಗಳಾಗಿ ವಿಂಗಡಿಸಿದರು. ಅದು ಬಹಳಷ್ಟು ಕಾಲ ಮಾನ್ಯತೆ ಪಡೆದಿದ್ದ ಅಭಿಪ್ರಾಯ. ಆದರೆ ಕಳೆದ ಯುದ್ಧದಲ್ಲಿ ಯೋಧೇತರರು ನೇಮಕಗೊಂಡಾಗ, ಯೋಧರಷ್ಟೆ ಸಮರ್ಥರೆಂದು ಶತಪ್ರತಿಶತ ಸಾಧಿಸಿ ತೋರಿಸಿದರು. ಆದರೆ ಆ ಅಧಿಕಾರವನ್ನು ಸರ್ಕಾರಿ ಆಡಳಿತಾರೂಢ ಅಧಿಕಾರಿಗಳ ಕೈಯಲ್ಲಿ ತಾತ್ಕಾಲಿಕವಾಗಿ ಕೊಟ್ಟರೆ, ರಕ್ಷಣಾ ಸೇವೆಗಾಗಿ ಲೋಕಸೇವಾ ಆಯೋಗದಂತಹ ಸ್ವತಂತ್ರ ಪ್ರಾಧಿಕಾರ ಸ್ಥಾಪನೆಯಾಗದಿದ್ದರೆ, ಪ್ರಾದೇಶಿಕ ಪಕ್ಷಪಾತಕ್ಕೆ ಇಂಬು ಕೊಟ್ಟಂತಾಗುತ್ತದೆ. ಅವರಲ್ಲಿ ಒಂದು ವರ್ಗಕ್ಕೆ ಸೇವೆಗೆ ಸೇರುವಂತೆ ಪ್ರೋತ್ಸಾಹಿಸುತ್ತದೆ. ಮಿಕ್ಕವರನ್ನು ಅಲಕ್ಷ್ಯ ಮಾಡಿದಂತಾಗುತ್ತದೆ. ನಾಗರಿಕ ಸೇವೆಗಳಿಗೆ ಲೋಕ ಸೇವಾ ಆಯೋಗದಂತಹ ಸ್ವತಂತ್ರ ಸಂಸ್ಥೆಯೊಂದರ ಅಗತ್ಯವಿರುವುದಾದರೆ ಪ್ರಾಂತ್ಯಗಳ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಿದ್ದರೆ, ನಿಸ್ಸಂಶಯವಾಗಿ ಅದಕ್ಕಿಂತಲೂ ಹೆಚ್ಚಿನ ಕಾರಣ ರಕ್ಷಣಾ ಸೇವಾ ಆಯೋಗ ಸ್ಥಾಪನೆಗೆ ಇದೆ. ಅಂತಹ ತಿದ್ದುಪಡಿಯನ್ನು ನಾನು ಮಂಡಿಸಿದ್ದೇನೆ. ಅದನ್ನೇಕೆ ಬಿಟ್ಟರೆಂದು ನಾನು ಕಾರಣ ತಿಳಿಯಬೇಕು. ರಕ್ಷಣಾ ಸೇವೆಗಳಿಗೆ ನೇಮಕಾತಿಗಾಗಿ ಯಾವ ಉಪಬಂಧವನ್ನೂ ಸಂವಿಧಾನದಲ್ಲಿ ಮಾಡಿಲ್ಲವೇಕೆಂಬುದನ್ನು ತಿಳಿಯಬಯಸುತ್ತೇನೆ.

ನಾವು ಭಾರತ ಸರ್ಕಾರದ ಅಧಿನಿಯಮದ ೧೦ನೇ ಅಧ್ಯಾಯವನ್ನು ಅನುಕರಿಸುವುದಾದರೆ ಇಡೀ ಅಧ್ಯಾಯವನ್ನು ಅನುಕರಿಸಬೇಕು. ರಕ್ಷಣಾ ಸೇವಾ ನೇಮಕಾತಿ ಬಹುಮುಖ್ಯವಾದ ವಿಷಯ. ಅದನ್ನು ಸಮ್ಮಿಶ್ರ ಶಾಸನ ಸಭೆಗೆ (ಅದು ಎಷ್ಟೇ ಒಳ್ಳೆಯದಾಗಿದ್ದರೂ) ಬಿಡುವುದು ನನಗೆ ಇಷ್ಟವಿಲ್ಲ. ಪ್ರಾಯಃ ಒಂದು ಪಕ್ಷ ಅಧಿಕಾರದಲ್ಲಿರಬಹುದು. ನನ್ನ ವಾದ ಇಷ್ಟೆ. ಒಂದು ವರ್ಗಕ್ಕೆ ಪ್ರಾಧಾನ್ಯ ಸಿಕ್ಕು ಮತ್ತೊಂದಕ್ಕೆ ಬಾಧಕವಾಗಬಾರದು. ಮಾನ್ಯರೆ, ಲೋಕ ಸೇವಾ ಆಯೋಗದ ಮಾದರಿಯಲ್ಲಿ ರಕ್ಷಣಾ ಸೇವಾ ಆಯೋಗದ ನೇಮಕವಾಗಲೆಂಬ ಆಶಯಹೊತ್ತು, ಸದನದ ಅಂಗೀಕಾರಕ್ಕಾಗಿ ಈ ತಿದ್ದುಪಡಿಯನ್ನು ಶಿಫಾರಸು ಮಾಡುತ್ತಿದ್ದೇನೆ.

**ಮಾನ್ಯ ಉಪಸಭಾಧ್ಯಕ್ಷರು** : ಈ ತಿದ್ದುಪಡಿಯ ಬಗ್ಗೆ ಬೇರೆ ಯಾರಾದರೂ ಮಾತನಾಡುವುದು ಇದೆಯೆ?

**ಗೌರವಾನ್ವಿತ ಶ್ರೀ ಜೈಪಾಲ್ ಸಿಂಗ್** (ಬಿಹಾರ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ನನಗೆ ಈ ತಿದ್ದುಪಡಿಯನ್ನು ಬೆಂಬಲಿಸಲು ಅಪಾರ ಸಂತೋಷವಾಗುತ್ತಿದೆ. ಅಧ್ಯಾಯ ೨, ೪ನೇ ಭಾಗದ ೭ನೇ ಕಂಡಿಕೆಯನ್ನು ನೋಡಿದರೆ, ಮಹಾಸಭೆಯ ರಕ್ಷಣಾ ಪಡೆಯ ಪರಮೋಚ್ಚ ನಾಯಕತ್ವಕ್ಕೆ ರಾಷ್ಟ್ರಪತಿಗಳ ನೇಮಕಾತಿಯನ್ನು ಈಗಾಗಲೇ ಅನುಮೋದಿಸಿದ್ದೇವೆ. ತಾವು 'ಪರಮೋಚ್ಚ ನಾಯಕ' ಎಂಬ ಪದಮುಚ್ಚಯ ಬಳಸಿರುವಾಗ ನಾನೆಂದುಕೊಂಡಂತೆ, ರಾಷ್ಟ್ರಪತಿಗಳು ತಮ್ಮ ಅಧೀನದಲ್ಲಿರುವ ಪಡೆಗಳ ನೇಮಕಾತಿಗೆ ಸೂಕ್ತ ಕ್ರಮಗಳನ್ನು ರೂಪಿಸುವರು, ಈ ತಿದ್ದುಪಡಿ ರಕ್ಷಣಾ ಪಡೆಗಳ ಅಧಿಕಾರಿಗಳ ನೇಮಕಾತಿಯ ಸ್ಪಷ್ಟ ಚಿತ್ರಣ ನೀಡುತ್ತದೆ. ಪ್ರಸ್ತುತದಲ್ಲಿ ಮಾನ್ಯ ಉಪಸಭಾಧ್ಯಕ್ಷರೆ, ನಿಮಗೆ ತಿಳಿದಿರುವಂತೆ ಸೇವಾ ಆಯ್ಕೆ ಮಂಡಲಿಗಳು ರಾಷ್ಟ್ರದಲ್ಲಿ ಬಹಳಷ್ಟು ಸಂಖ್ಯೆಯಲ್ಲಿವೆ; ನಾನೇ ಸ್ವತಃ ಅಂತಹ ಒಂದು ಮಂಡಲಿಯಲ್ಲಿ ಕಳೆದ ಮೂರು ವರುಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಪ್ರಸ್ತುತ ವ್ಯವಸ್ಥೆ, ಎಂದರೆ ಮನಃಶಾಸ್ತ್ರ ಪದ್ಧತಿ ಎಂಬ ಹೆಸರಿನಲ್ಲಿ ಚಾಲ್ತಿಯಲ್ಲಿರುವ ವ್ಯವಸ್ಥೆ ಸರಿಯಾದುದು. ಅದು ಪ್ರಭಾವಿ ವಲಯದ ಬೆಂಬಲವನ್ನು ಪ್ರತಿರೋಧಿಸಿ, ಸಮಾಜವನ್ನು ನೇರವಾಗಿ ತಲುಪುತ್ತದೆ. ಈ ಪದ್ಧತಿಯಲ್ಲಿ ಪ್ರತಿಯೊಬ್ಬನಿಗೂ ನೇಮಕಾತಿಯ ಸಮಾನಾವಕಾಶವಿರುತ್ತದೆ. ಈ ತಿದ್ದುಪಡಿಯ ಮಂಡನೆಕಾರರು ಈಗಾಗಲೇ ಸೂಚಿಸಿದಂತೆ ಭಾರತದ ಭಾವಿ ಸೇನಾಪಡೆಗಳಲ್ಲಿ ಆಯೋಗಗಳು ಅಖಿಲ ಭಾರತ ಸೇವಾ ವ್ಯವಸ್ಥೆಯಲ್ಲಿ ಉನ್ನತ ಅಧಿಕಾರಿಗಳ ಸ್ಥಾನಮಾನವನ್ನು ಪಡೆಯಬೇಕು. ನನಗನಿಸುವಂತೆ ಸೇವಾ ಆಯ್ಕೆ ಮಂಡಳಿಗೆ ಸಮಾನವಾದ ಮಂಡಳಿಯನ್ನು ಕಡ್ಡಾಯವಾಗಿ ಹೊಂದಬೇಕು. ಅದನ್ನು ರಕ್ಷಣಾ ಸೇವಾ ಕಮಿಷನ್ ಎಂತಲಾದರೂ ಕರೆಯಿರಿ ಸೇವಾ ಆಯ್ಕೆ ಮಂಡಳಿ

ಎಂತಲಾದರೂ ಕರೆಯಿರಿ, ಅಂತಹುದೊಂದು ಮಂಡಳಿ ಇರಲೇಬೇಕಾದುದು ಅಗತ್ಯ ಎಂಬುದರ ಬಗ್ಗೆ ನನಗೆ ಸಂದೇಹವೇ ಇಲ್ಲ.

**ಶ್ರೀ ರಘುರಾಜ್ ಸಿಂಗ್** (ಪೌರಸ್ತ್ಯ ರಾಜ್ಯಗಳು) : ಮಾನ್ಯ ಉಪಸಭಾಧ್ಯಕ್ಷರೆ, ಈಗಷ್ಟೆ ಮಂಡಿಸಲಾದ ತಿದ್ದುಪಡಿಯ ಬಗ್ಗೆ ನನ್ನ ಕೆಲವು ಮಾತುಗಳಿವೆ. ರಕ್ಷಣಾಸೇವೆಗಳಿಗೆ ನೇಮಕಾತಿ, ಒಂದು ಭಾರಿ ತಾಂತ್ರಿಕ ವಿಷಯ. ಅದು ರಕ್ಷಣಾ ಸಂಸ್ಥೆಯ ಭಾಗವಾಗಬೇಕು. ರಕ್ಷಣಾಸೇವಾ ಆಯೋಗವನ್ನು ರಚಿಸಿದರೆ, ಅದು ರಕ್ಷಣಾ ಸಂಸ್ಥೆಯ ಸಮಿತಿಯ ಕೈಕಟ್ಟಿಹಾಕುತ್ತದೆ. ಅಧಿಕಾರವರ್ಗಕ್ಕೆ ನೇಮಕಾತಿ ಮಾಡುವಾಗ, ಯೋಧರು ಮತ್ತು ಯೋಧೇತರ ವರ್ಗವೆಂದು ಈ ಹಿಂದೆ ಭೇದವೆಣಿಸಿರಲಿಲ್ಲ. ಶ್ರೇಣಿಗಳ ವಿಷಯದಲ್ಲಿ ಮಾತ್ರ ಅಂತರವಿತ್ತು. ಯುದ್ಧದ ಸಂದರ್ಭದಲ್ಲಿ ಸೇವಾ ನೇಮಕಾತಿಗೆಂದು ವಿಶೇಷ ನಿರ್ದೇಶನಾಲಯವನ್ನು ತೆರೆಯಲಾಗಿತ್ತು. ಅದು ತನ್ನದೇ ತಂತ್ರವನ್ನು ಅಭಿವೃದ್ಧಿಪಡಿಸಿತ್ತು. ನನಗನಿಸುತ್ತೆ ಈ ವಿಷಯವನ್ನು ರಕ್ಷಣಾ ಇಲಾಖೆಯ ವಿವೇಚನೆಗೆ ಬಿಡಬೇಕು. ರಕ್ಷಣಾ ಸೇವಾ ಆಯೋಗವನ್ನು ರಚಿಸಿದ್ದರೆ ಅದು ರಕ್ಷಣಾ ಸಂಸ್ಥೆಯ ವಿವೇಚನೆಯನ್ನು ದಿಗ್ಬಂಧಗೊಳಿಸುತ್ತದೆ.

**ಪ್ರೊ. ಎನ್.ಜಿ. ರಂಗ** (ಮದ್ರಾಸ್ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಇಂತಹ ಅತಿಮುಖ್ಯ ವಿಷಯವನ್ನು ರಕ್ಷಣಾ ಸಂಸ್ಥೆಯ ಖಯಾಲಿಗೆ ಬಿಡುವುದನ್ನು ನಾನು ವಿರೋಧಿಸುತ್ತೇನೆ. ಇಂಗ್ಲೆಂಡ್ ಮತ್ತು ಯೂರೋಪ್ ಖಂಡದ ಇತರ ರಾಷ್ಟ್ರಗಳಲ್ಲಿ ಲಾಗಾಯ್ತಿನಿಂದ ರಕ್ಷಣಾ ಪಡೆಯ ನೇಮಕಾತಿಯನ್ನು ಪ್ರಜಾಸತ್ತಾತ್ಮಕಗೊಳಿಸಬೇಕೆಂಬ ಚಳವಳಿ ನಡೆಯುತ್ತಿದೆ. ಅದರಿಂದ ಎಲ್ಲ ಶ್ರೇಣಿಗಳ ಅಭ್ಯರ್ಥಿಗಳನ್ನು ರಕ್ಷಣಾ ಪಡೆಗೆ ನೇಮಕ ಮಾಡಬಹುದು. ಕೆಲವೊಂದು ನಿರ್ದಿಷ್ಟ ಸಮೂಹಗಳಿಂದ ನೇಮಕಗೊಂಡ ಅಧಿಕಾರಿಗಳು ತೃಪ್ತಿಕರ ಸೇವೆ ಸಲ್ಲಿಸದಿರುವ ಕುಖ್ಯಾತಿ ಜನಜನಿತವಾಗಿದೆ. ಇತ್ತೀಚಿನ ಮತ್ತು ಅದರ ಹಿಂದಿನ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳ ಯಶಸ್ಸಿಗೆ ಕಾರಣ ಸಾಮಾನ್ಯ ಜನಪದರ ಸಮೂಹದಿಂದ ಅಧಿಕಾರಿಗಳ ನೇಮಕ. ಶ್ರೀಸಾಮಾನ್ಯರು ತಮ್ಮ ಮುಖಂಡತ್ವವನ್ನು ಬಳಸಿ, ರಕ್ಷಣಾ ಪಡೆಯ ವಿವಿಧ ಅಧಿಕಾರಿ ವರ್ಗಗಳ ಹುದ್ದೆಗಳಿಗೆ ಭರ್ತಿಯಾಗುವ ಭರವಸೆ ಹೊಂದುವಂತೆ ಅವರಿಗೆ ಒಂದು ಅವಕಾಶವನ್ನು ಕಲ್ಪಿಸುವ ಆಶಯವಿದ್ದರೆ ನನ್ನ ಮಿತ್ರ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ಸಲಹೆ ಮಾಡಿದಂತೆ. ಒಂದು ಆಯೋಗವನ್ನು ರಚಿಸಬೇಕು. ಇದನ್ನು ಸಂಸತ್ತಿನ ನಿರ್ಧಾರಕ್ಕೆ ಬಿಡಬಾರದೇಕೆ ಎಂದು ಕೆಲವರು ಕೇಳಬಹುದು. ಮಾನ್ಯರೆ ನಾಗರಿಕ ಸೇವೆಗಳಿಗೆ ಅಸಂಖ್ಯ ಸರ್ಕಾರಿ ಅಧಿಕಾರಿಗಳ ನೇಮಕಕ್ಕೆ ಸಂವಿಧಾನದಲ್ಲಿ ಒಂದು ವಿಶೇಷ ಉಪಬಂಧವನ್ನು ಸೇರಿಸುವುದು ಉಚಿತವೆಂದು ಆಲೋಚನೆ ಮಾಡಬಹುದಾದರೆ ಅಂತಹುದೆ ಉಪಬಂಧವನ್ನು ರಕ್ಷಣಾ ವ್ಯವಸ್ಥೆಗೂ ಮಾಡುವುದು ಯುಕ್ತ. ನಾಗರಿಕ ಸೇವೆಗಳಿಗಾಗಿ ತಾವು ನೇಮಕ ಮಾಡುವ ಅಭ್ಯರ್ಥಿಗಳ ಸಂಖ್ಯೆ, ರಕ್ಷಣಾ ವ್ಯವಸ್ಥೆಯ ನೇಮಕಾತಿಯ ಸಂಖ್ಯೆಯಷ್ಟಿರಲಾರದು. ಇತರ ರಾಷ್ಟ್ರಗಳ ರಕ್ಷಣಾಪಡೆಗಳೊಡನೆ ನಮ್ಮ ಪಡೆಗಳು ಸ್ಪರ್ಧಿಸುವ ಕಾಲಘಟ್ಟದಲ್ಲಿದ್ದೇವೆ. ನಮ್ಮ ಸೀಮೆಯ ಆಚೆ ಒಂದು ರಾಷ್ಟ್ರವಿದೆ. ಸೋವಿಯತ್ ರಷ್ಯಾ, ಸೋವಿಯತ್ ಸೇನೆಯ ರಚನೆ, ಅಭಿವೃದ್ಧಿ, ಬಲಸಂವರ್ಧನೆಯತ್ತಲೂ, ಅಲ್ಲಿಯ ಅಧಿಕಾರಿಗಳ ನೇಮಕಾತಿಯ ಕಡೆಯೂ ದೃಷ್ಟಿ ಹರಿಸೋಣ. ಪ್ರತಿಯೊಂದು ಕೋಮುಸಮುದಾಯ ಅಥವಾ ಕೇಡರ್ (ಶ್ರೇಣಿ) ಅಥವಾ ಸಮಾಜದಿಂದಲೂ ಒಟ್ಟಾರೆ ಸಾಮಾಜಿಕ ಜೀವನದ ಪ್ರತಿಯೊಂದು ಸೇವಾ ವಿಭಾಗದಿಂದಲೂ ಅವರ ಅಧಿಕಾರಿಗಳ ನೇಮಕಾತಿ ನಡೆಯುತ್ತದೆ. ಆ ರಾಷ್ಟ್ರದ ರಕ್ಷಣಾ ಪಡೆಯೊಡನೆ ನಮ್ಮ ಪಡೆಗಳು ಸ್ಪರ್ಧಿಸುವುದಾದರೆ ಯುದ್ಧದ ಸಮಯದಲ್ಲಿ ಮುಂದಾಳತ್ವ ವಹಿಸಬಲ್ಲ ಸಮರ್ಥರನ್ನು ಪಕ್ಷಪಾತರಹಿತವಾಗಿ ಆಯ್ಕೆ ಮಾಡುವಲ್ಲಿ ಗಮನವಿಡುವುದು ಅತಿಮುಖ್ಯ. ಆ ಉದ್ದೇಶ ನೆರವೇರಬೇಕಿದ್ದರೂ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ಸಲಹೆ ಮಾಡಿದಂತೆ ಒಂದು ಆಯೋಗವನ್ನು ಸ್ಥಾಪಿಸಬೇಕು.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಕರಡಿನಲ್ಲಿ ರಕ್ಷಣಾ ಸೇವೆಯ

ಪ್ರಸ್ತಾವ ಇಲ್ಲವೇನೋ ನಿಜ. ಈ ಲೋಪಕ್ಕೆ ಒಂದು ಕಾರಣವನ್ನು ನೀಡಬಹುದಾಗಿದ್ದರೆ, ೧೯೩೫ರ ಭಾರತ ಸರ್ಕಾರ ಅಧಿನಿಯಮದ ೧೧ನೇ ಭಾಗದ ೧ನೇ ಅಧ್ಯಾಯದಲ್ಲಿ ಇರುವ ಯಾವುದನ್ನೂ, ನಾವೀಗ ಪರಿಭಾವಿಸುತ್ತಿರುವ ಒಕ್ಕೂಟ ಸಂವಿಧಾನದೊಳಗೆ, ತಿಲಾಂಶವೂ ಅಡಕಗೊಳಿಸಲಾಗದು. ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿರುವ ಈ ಅಧ್ಯಾಯ, ಪ್ರಧಾನವಾಗಿ ಮಹಾದಂಡನಾಯಕನ ವೇತನ, ರಕ್ಷಣಾ ಇಲಾಖೆಯ ಮೇಲೆ ಮಹಾಪ್ರಭುಗಳ ನಿಯಂತ್ರಣ, ರಾಜ್ಯ ಸರ್ಕಾರದ ಕಾರ್ಯದರ್ಶಿಯ ನಿಯಂತ್ರಣ, ರಾಜ್ಯ ಸರ್ಕಾರದ ಕಾರ್ಯದರ್ಶಿಗೆ ಅಪೀಲು ಮಾಡುವ ಹಕ್ಕುಗಳು ಇತ್ಯಾದಿ. ನೂತನ ಸಂವಿಧಾನ ರಚನೆ ಮಾಡುವಾಗ ಇವೆಲ್ಲವೂ ಅಪ್ರಸ್ತುತವಾಗುತ್ತವೆ. ಈಗ ನಾವು ಪರಿಶೀಲಿಸುತ್ತಿರುವ ದಾಖಲೆಯಲ್ಲಿ ರಕ್ಷಣಾ ಸೇವೆಗಳಿಗಾಗಿ ಒಂದು ವಿಶೇಷ ಉಪಬಂಧವನ್ನು ಮಾಡುವುದು ಅನಗತ್ಯ ಎಂಬುದು ಪ್ರಾಯಃ ಒಂದು ಕಾರಣ. ಈ ತಿದ್ದುಪಡಿಯ ಮಂಡನೆಕಾರರು ಮಂಡಿಸಿದ ಇನ್ನೊಂದು ವಿಷಯವೆಂದರೆ ರಕ್ಷಣಾ ಸೇವೆಗಳಿಗೆ ನೇಮಕಾತಿ ಮತ್ತು ಸೇವಾನಿಯಮಗಳಿಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸಲು ಲೋಕ ಸೇವಾ ಆಯೋಗದ ಮಾದರಿಯಲ್ಲಿ ಒಂದು ಸಂಸ್ಥೆಯನ್ನು ರಚಿಸುವುದು. ನನಗೆ ತೋಚುವಂತೆ ನಾಗರಿಕ ಸೇವೆಗಳ ಸಂದರ್ಭದಲ್ಲೆ ಆಗಲಿ ಲೋಕ ಸೇವಾ ಆಯೋಗಕ್ಕೆ ಅನ್ವಯಿಸುವ ಉಪಬಂಧಗಳನ್ನು ಸಂವಿಧಾನದ ಕಾನೂನುಗಳಲ್ಲಿ ಅಡಕಗೊಳಿಸುವುದು ಮಹತ್ತ್ವದ ಕಾರ್ಯವೆನಿಸುವುದಿಲ್ಲ. ಅಂತಹ ಆಯೋಗಗಳನ್ನು ಸಮ್ಮಿಶ್ರ ಕಾನೂನಿನ ಮುಖೇನ ಏಕೆ ರಚಿಸಬಾರದೆಂಬುದು ನನಗೆ ಅರ್ಥವಾಗುತ್ತಿಲ್ಲ. ಇಷ್ಟಕ್ಕೂ ಲೋಕಸೇವಾ ಆಯೋಗವೆಂದರೇನು? ಅದು ನೇಮಕಾತಿಗೆ ಸೂಕ್ತ ವ್ಯವಸ್ಥೆ ಮಾಡುವ ಒಂದು ಸಂಸ್ಥೆ. ನೇಮಕಗೊಳ್ಳುವ ಸಿಬ್ಬಂದಿಗೆ ಸಲಹೆ ಸೂಚನೆಗಳನ್ನು ನೀಡುತ್ತದೆ. ಹಾಗೂ ಅವರ ಸೇವಾವಧಿಯಲ್ಲಿ ವಿಧಿಸಬಹುದಾದ ಶಿಕ್ಷೆಯ ವಿರುದ್ಧ ಅಪೀಲು ಹೋಗಲು ಅಗತ್ಯ ಸಲಹೆ ನೀಡುತ್ತದೆ. ನೇಮಕಾತಿ ನಿಯಮಗಳು, ಸೇವಾ ನಿಬಂಧನೆಗಳು ಮತ್ತಿತರ ವಿಷಯಗಳನ್ನು ನಿರ್ವಹಿಸುತ್ತದೆ. ಈ ನಿಯಮಗಳ ಪಕ್ಷಪಾತರಹಿತ ಪಾಲನೆಯಲ್ಲಿ ತೊಡಗಲು ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಸ್ಥಾನಮಾನಗಳಿಗೆ ಸಮಾನವಾದ ಅಂತಸ್ತು ಹೊಂದಿರುವ ಸಿಬ್ಬಂದಿಗಳ ಒಂದು ಮಂಡಳಿ ರಚಿತವಾಗಬೇಕೆಂಬುದೇನೋ ನಿಜ. ನಾಗರಿಕ ಸೇವೆಗಳ ಸಂದರ್ಭದಲ್ಲಿ ಸಂವಿಧಾನ ಅಧಿನಿಯಮದ ಅಡಿಯಲ್ಲಿ ಲೋಕ ಸೇವಾ ಆಯೋಗ ರಚಿಸಿ, ಅವಿವೇಕ ಮೆರೆದಿದ್ದೇವೆ. ರಕ್ಷಣಾ ಸೇವೆಗಳಿಗೆ ಅನ್ವಯಿಸುವಂತೆ ಅಂತಹುದೇ ವ್ಯವಸ್ಥೆಯ ಅಗತ್ಯವಿದ್ದರೆ, ಅದನ್ನು ಒಕ್ಕೂಟ ಕಾನೂನು ಒದಗಿಸುತ್ತದೆ. ಅದಕ್ಕೆ ಘನವಾದ ಆಕ್ಷೇಪಣೆಯೇನೂ ಇರಲಾರದು. ಇನ್ನೊಂದು ಅಂಶವನ್ನು ಪ್ರಸ್ತಾವಿಸುವುದಿದೆ. ನಾಗರಿಕ ಸೇವೆಗಳಿಗೂ ಸಾಮಾನ್ಯ ಲಕ್ಷಣಗಳಲ್ಲಿ ರಕ್ಷಣಾ ಸೇವೆಗಳಿಗೂ ಒಂದು ಅತ್ಯಾವಶ್ಯಕವೆನಿಸುವ ಅಂತರವಿದೆ. ರಕ್ಷಣಾ ಸೇವೆಗಳು ಶಿಸ್ತುಬದ್ಧವಾದವು. ನಾಗರಿಕ ಸೇವೆಗಳಲ್ಲೂ ಸಹ ತೀವ್ರತರ ಶಿಸ್ತು ಬೇಡುವ ಸೇವೆಗಳಲ್ಲಿ ನೇಮಕಾತಿ ಮತ್ತು ಶಿಸ್ತುಕ್ರಮಗಳಿಗೆ ಸಂಬಂಧಿಸಿದಂತೆ ಲೋಕಸೇವಾ ಆಯೋಗದ ಹಸ್ತಕ್ಷೇಪ ಉಚಿತವಲ್ಲವೆಂದು ತೀರ್ಮಾನಿಸಲಾಗಿದೆ. ಪ್ರಸ್ತುತ ಭಾರತ ಸರ್ಕಾರ ಅಧಿನಿಯಮದ ೨೪೩ನೇ ಪ್ರಕರಣವನ್ನು ನಾನು ಓದುತ್ತೇನೆ. ಇದು ನಾಗರಿಕ ಸೇವೆಗಳ ಕುರಿತ ಅಧ್ಯಾಯದಲ್ಲಿದೆ.

"ಮುಂದೆ ಕಾಣುವಂತೆ ಅಧ್ಯಾಯದ ಉಪಬಂಧಗಳಲ್ಲಿ ಏನೇ ನಮೂದಿಸಿರಲಿ, ಭಾರತದಲ್ಲಿ ಪೊಲೀಸ್ ಪಡೆಯ ವಿವಿಧ ಅಧೀನ ಶ್ರೇಣಿಗಳ ಸಿಬ್ಬಂದಿಗಳ ಸೇವಾ ನಿಬಂಧನೆಗಳು, ಅನುಕ್ರಮವಾಗಿ ಆಯಾ ಅಧಿನಿಯಮಗಳಿಂದ ಅಥವಾ ಅದರ ಅಡಿಯಲ್ಲಿ ನಿರ್ಧರಿಸಲ್ಪಡಬೇಕು."

ನಾನು ತಿಳಿಯಪಡಿಸುವುದೆಂದರೆ ಯೋಧರು ಮತ್ತು ಯೋಧೇತರರ ವರ್ಗಗಳ ನಡುವಣ ಅಂತರ, ರಕ್ಷಣಾ ಸೇವೆಗಳಲ್ಲಿ ವಿವಿಧ ಸಮುದಾಯಗಳ ಪ್ರಾತಿನಿಧ್ಯ, ವಿವಿಧ ಸೇವೆಗಳಲ್ಲಿ ಪ್ರಾಂತ್ಯಗಳ ಪ್ರಾತಿನಿಧ್ಯ ಇವೆಲ್ಲ ಇಂತಹ ವಿಷಯಗಳೆಲ್ಲ ನಿಸ್ಸಂಶಯವಾಗಿ ಮುಖ್ಯವಾದವು. ಆದರೆ ನಾವು ಸ್ಥಾಪಿಸುವ ಸೇವಾ ಆಯೋಗದ ನಿರ್ಧಾರಕ್ಕೆ ಇವೆಲ್ಲ ವಿಷಯಗಳ ನೀತಿ ನಿಯಮಗಳು ಒಳಪಡುವುದಿಲ್ಲ. ನೀತಿಯೆಲ್ಲವೂ ಆ

ಸಂದರ್ಭದಲ್ಲಿ ಅಧಿಕಾರಾರೂಢ ಸರ್ಕಾರಕ್ಕೆ ಸೇರಿದುದು. ಆದುದರಿಂದ ಅನ್ಯಾಯ ಮತ್ತು ಪ್ರಶ್ನಾರ್ಹ ಭೇದಭಾವವನ್ನು ನಿರ್ಮೂಲನಗೊಳಿಸಬೇಕೆಂಬುದು ನಮ್ಮ ಅಪೇಕ್ಷೆಯಾಗಿದ್ದರೆ, ಅಂದಿನ ಸರ್ಕಾರವನ್ನು ಪ್ರಶ್ನಿಸಬೇಕು ಮತ್ತು ಯುಕ್ತ ನೀತಿಯನ್ನು ಆ ಸರ್ಕಾರ ರೂಪಿಸುವಂತೆ ನೋಡಿಕೊಳ್ಳಬೇಕು. ನೀತಿ ನಿಯಮಗಳ ಅನುಷ್ಠಾನದ ಪ್ರಶ್ನೆಯೇನೋ ಉದ್ಭವಿಸುತ್ತದೆ ನಿಜ. ಅದಕ್ಕಾಗಿ ಒಂದು ಒಕ್ಕೂಟ ಕಾನೂನಿನ ಮೂಲಕ ಒಂದು ಮಂಡಳಿಯನ್ನು ರಚಿಸಬೇಕೆಂದು ನನ್ನ ಅಭಿಪ್ರಾಯ. ಈಗಿನ ಸಶಸ್ತ್ರ ಪಡೆಗಳಲ್ಲಿರುವ ಆಯ್ಕೆ ಮಂಡಳಿಗಳು ಆ ಕಾರ್ಯನಿರ್ವಹಿಸುತ್ತವೆ. ಅಥವಾ ಅದೊಂದು ವಿಭಿನ್ನ ಮಂಡಳಿಯಾಗಬಹುದಾದರೂ ಅಂತಹ ಮಂಡಳಿಗಳನ್ನು ಮುಂದೆ ಅಧಿನಿಯಮಿತಗೊಳಿಸುವ ಯಾವುದೇ ಸಮ್ಮಿಶ್ರ ಕಾನೂನಿನ ಅಡಿಯಲ್ಲಿ ರಚಿಸಬಹುದು. ಆದುದರಿಂದ ರಕ್ಷಣಾ ವ್ಯವಸ್ಥೆಯ ನೇಮಕಾತಿ ಸೇವಾ ನಿಬಂಧನೆಗಳು ಇತ್ಯಾದಿ ವಿಷಯಗಳಿಗೆಂದೇ ಸೂಕ್ತ ಉಪಬಂಧಗಳನ್ನು ರಚಿಸುವ ಒಕ್ಕೂಟ ಕಾನೂನಿನ ಬಗ್ಗೆ ಸಂವಿಧಾನದಲ್ಲಿ ಒಂದು ಸಾಮಾನ್ಯ ಉಲ್ಲೇಖ ಇರಬೇಕೆಂಬುದು ನನ್ನ ಅಭಿಪ್ರಾಯ. ಉಳಿದೆಲ್ಲವನ್ನೂ ಅನಂತರದಲ್ಲಿ ನಿರೂಪಿಸಬಹುದು. ಗೌರವಾನ್ವಿತ ಮಂಡನೆಕಾರರು ಮಂಡಿಸಿರುವ ರೀತಿಯ ನೀತಿ ನಿಯಮಗಳ ಮಾದರಿಯಲ್ಲಿ ಇಲ್ಲದಿದ್ದರೂ ಅಂತಹ ಒಂದು ಸಾಮಾನ್ಯ ಲಕ್ಷಣದಿಂದ ಕೂಡಿರುವ ಉಪಬಂಧವನ್ನು ಸಂವಿಧಾನದಲ್ಲಿ ಪ್ರಕ್ಷಿಪ್ತಗೊಳಿಸುವ ಆಶ್ವಾಸನೆಯನ್ನು ನಾನು ಅವರಿಗೆ ನೀಡುತ್ತೇನೆ. ಅದು ಅವರಿಗೆ ತೃಪ್ತಿ ತರುವುದಾಗಿದ್ದರೆ, ತಮ್ಮ ತಿದ್ದುಪಡಿಯನ್ನು ಹಿಂಪಡೆಯುವಂತೆ ಅವರನ್ನು ಕೋರುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಇದು ಕೇವಲ ಸ್ವರೂಪಭೇದದ ವಿಷಯವಷ್ಟೆ. ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ತಮಗೆ ಸೂಕ್ತವೆನಿಸುವ ರೀತಿಯಲ್ಲಿ ಇವೆಲ್ಲ ಅಂಶಗಳನ್ನು ಅಳವಡಿಸಲು ಸಿದ್ಧರಾಗಿದ್ದಾರೆ. ಆದುದರಿಂದ ನಾನು ಈ ತಿದ್ದುಪಡಿಯನ್ನು ಸದನದ ಮುಂದೆ ಆಗ್ರಹ ಪಡಿಸುವುದರಲ್ಲಿ ಆಸಕ್ತಿ ಇಲ್ಲ. ಅದನ್ನು ಹಿಂಪಡೆಯಲು ಸದನದ ಅನುಮತಿ ಕೋರುತ್ತೇನೆ.

ಸದನದ ಅನುಮತಿಯೊಡನೆ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

## ಖಂಡ – ೨೩

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ೨೩ನೇ ಖಂಡವನ್ನು ಮಂಡಿಸುತ್ತೇನೆ. ಅದು ಕೆಳಕಂಡಂತಿದೆ:

"ಈ ಸಂವಿಧಾನದ ಉಪಬಂಧಗಳಿಗೆ ಬದ್ಧವಾಗಿ ಸಮ್ಮಿಶ್ರ ಸಂಸತ್ತು, ಕಾಲಕಾಲಕ್ಕೆ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯವನ್ನೊಳಗೊಂಡಂತೆ ಒಕ್ಕೂಟ ಶಾಸನಸಭೆಯ ಚುನಾವಣೆಗೆ ಅನ್ವಯಿಸುವಂತೆ ಅಥವಾ ಸಂಬಂಧಿಸಿದ ವಿಷಯಗಳನ್ನು ಕುರಿತು ಉಪಬಂಧಗಳನ್ನು ರೂಪಿಸಬೇಕು."

**ಮಾನ್ಯ ಉಪಾಧ್ಯಕ್ಷರು** : ಶ್ರೀ ಅನಂತಶಯನಮ್ ಅಯ್ಯಂಗಾರ್ ಮತ್ತು ಶ್ರೀಮತಿ ಜಿ. ದುರ್ಗಾಬಾಯಿ ಅವರು ೨೩ನೇ ಖಂಡ ಕುರಿತಂತೆ ತಿದ್ದುಪಡಿಯನ್ನು ಮಂಡಿಸುವುದಿದೆ.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ನಾನು ಮಂಡಿಸುತ್ತೇನೆ.

"೨೩ನೇ ಖಂಡದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಬೇಕು:

'ಮೊದಲ ಮತ್ತು ಅನಂತರದ ಚುನಾವಣೆಗಳು (ಸಂವಿಧಾನಕ್ಕೆ ಲಗತ್ತಿಸಬೇಕಾದವು) ಅನುಸೂಚಿಯ ಉಪಬಂಧಗಳ ಅನುಸಾರ ನಡೆಯತಕ್ಕುದು ಮತ್ತು ಚುನಾವಣಾ ಕ್ಷೇತ್ರಗಳು ಇತರ ಅನುಸೂಚಿಯಲ್ಲಿ ನಮೂದಿಸುವಂತಿರಬೇಕು'."

ಇನ್ನೊಂದು ವಾಕ್ಯವನ್ನು ನಾನು ಒತ್ತಾಯಿಸುವುದಿಲ್ಲ:

"ಒಕ್ಕೂಟ ಶಾಸನ ಸಭೆಯಿಂದ ಯಾವುದೇ ಸಮಯದಲ್ಲೂ ಸದರಿ ಅನುಸೂಚಿಗಳು ಪರಿಷ್ಕರಣಕ್ಕೆ ಅಥವಾ ಮಾರ್ಪಾಟಿಗೆ ಒಳಪಡಬಹುದು."

ಮೊದಲ ವಾಕ್ಯಕ್ಕೆ ನಿಲ್ಲಿಸುತ್ತೇನೆ.

ಆದರ ಅವಶ್ಯಕತೆ ಹೀಗಿದೆ: ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯವನ್ನು ಒಳಗೊಂಡಂತೆ ಒಕ್ಕೂಟ ಸಂಸತ್ತಿನ ಚುನಾವಣೆಗಳಿಗೆ ಒಕ್ಕೂಟ ಶಾಸನ ಸಭೆಯ ಅಧಿನಿಯಮಗಳ ಮೂಲಕ ಕಾಲಕಾಲಕ್ಕೆ ನಿಯಂತ್ರಣ ತರಬೇಕೆಂದು ನಾವು ೨೩ನೇ ಖಂಡದಲ್ಲಿ ಪ್ರಸ್ತಾವಿಸಿದ್ದೇವೆ. ಮೊದಲ ಚುನಾವಣೆ ಹಾಗೂ ಚುನಾವಣಾ ಕ್ಷೇತ್ರಗಳ ಮೊದಲ ಸೀಮಾ ನಿರ್ಣಯಕ್ಕೆ ಸಂವಿಧಾನದಲ್ಲೆ ಅವಕಾಶವಿರಬೇಕೆಂಬುದು ನನ್ನ ಆಶಯ. ಇಂತಹುದೆ ಅವಕಾಶವನ್ನು ಇತ್ತೀಚೆಗೆ ಒಂದೆರಡು ವಾರಗಳ ಹಿಂದೆ ಪ್ರಾಂತೀಯ ಸಂವಿಧಾನದಲ್ಲೂ ಕಲ್ಪಿಸಿ, ಅಂಗೀಕರಿಸಿದ್ದೇವೆ. ಅದೇ ಮಾದರಿಯಲ್ಲಿ ಈ ತಿದ್ದುಪಡಿಯನ್ನೂ ಮಂಡಿಸಿದ್ದೇನೆ. ಆದುದರಿಂದ ಸದನದ ಅಂಗೀಕಾರಕ್ಕಾಗಿ ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ನಾನು ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ. ಎರಡನೇ ವಾಕ್ಯವನ್ನು ಬಿಡಲು ಅವರು ಒಪ್ಪಿದ್ದಾರೆ.

**ಸನ್ಮಾನ್ಯ ಉಪಸಭಾಧ್ಯಕ್ಷರು :** ನಾನು ಸದನದ ಮುಂದೆ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಸನ್ಮಾನ್ಯ ಉಪಸಭಾಧ್ಯಕ್ಷರು :** ನಾನೀಗ ಖಂಡವನ್ನು ತಿದ್ದುಪಡಿಯಾದಂತೆ ಸದನದ ಮುಂದೆ ಮತಕ್ಕೆ ಹಾಕುತ್ತೇನೆ.

೨೩ನೇ ಖಂಡ ತಿದ್ದುಪಡಿಯಾದಂತೆ ಅಂಗೀಕಾರವಾಯಿತು.

## ಖಂಡ – ೨೪

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾನು ೨೪ನೇ ಖಂಡವನ್ನು ಮಂಡಿಸುತ್ತೇನೆ.

"೨೪. ರಾಷ್ಟ್ರಪತಿಗಳು ನೇಮಿಸುವ ಆಯೋಗಕ್ಕೆ ಈ ಅಧಿನಿಯಮದ ಅಡಿಯಲ್ಲಿ ನಡೆಯುವ ಒಕ್ಕೂಟ ಅಥವಾ ಪ್ರಾಂತೀಯ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಾಧಿಕಾರವನ್ನು ವಹಿಸಬೇಕು. ಅಂತೆಯೇ ಅಂತಹ ಚುನಾವಣೆಯಿಂದ ಉದ್ಭವಿಸಬಹುದಾದ ಅಥವಾ ಅದಕ್ಕೆ ಸಂಬಂಧಿಸಿದ ಸಂದೇಹ ಅಥವಾ ವಿವಾದಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಚುನಾವಣಾ ನ್ಯಾಯಾಧಿಕರಣದ ನೇಮಕಾತಿ ಅಧಿಕಾರವನ್ನು ಆಯೋಗಕ್ಕೆ ವಹಿಸಬೇಕು."

ಮಾನ್ಯರೆ, ಈ ರಾಷ್ಟ್ರದಲ್ಲಿ ಒಕ್ಕೂಟ ಅಥವಾ ಪ್ರಾಂತೀಯ ಚುನಾವಣೆಗಳು ಸಾಧ್ಯವಾದ ಮಟ್ಟಿಗೂ ಪಕ್ಷಪಾತರಹಿತವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು ಈ ಖಂಡದ ಉದ್ದೇಶ. ರಾಷ್ಟ್ರಪತಿಗಳು ಇಂತಹ ಆಯೋಗವನ್ನು ನೇಮಿಸಬೇಕೆಂಬುದು ನನ್ನ ಉದ್ದೇಶ; ಆಯೋಗದ ಅಡಿಯಲ್ಲಿ ಚುನಾವಣಾ ಚಟುವಟಿಕೆಗಳು ಮತ್ತು ಚುನಾವಣೋತ್ತರ ಚಟುವಟಿಕೆಗಳು ಇವೆಲ್ಲವನ್ನೂ ನಿಯಂತ್ರಿಸಬೇಕು. ತಮಗೆ ತಿಳಿದಂತೆ ರಾಷ್ಟ್ರದಲ್ಲಿ ವ್ಯಾಪಕವಾಗಿ ಬರುವ ದೂರುಗಳೆಂದರೆ ಚುನಾವಣಾ ಪ್ರಕ್ರಿಯೆಯ ದುರುಪಯೋಗ, ಚುನಾವಣಾ ವ್ಯವಸ್ಥೆಯ ದುರುಪಯೋಗ, ಭ್ರಷ್ಟಾಚಾರ, ಈ ಖಂಡ ಚುನಾವಣೆಯ ಎಲ್ಲ ಚಟುವಟಿಕೆಗಳನ್ನು ಕೇಂದ್ರೀಯ ಸ್ವತಂತ್ರ ನಿಯಂತ್ರಣಾಧಿಕಾರಕ್ಕೆ ಒಳಪಡಿಸುವ ಪ್ರಯತ್ನವಷ್ಟೆ.

**ಶ್ರೀ ಎಚ್.ವಿ. ಪಾಟಸ್ಕರ್ :** ಮಾನ್ಯರೆ, ನಾನು ಮಂಡಿಸುತ್ತೇನೆ:

"೨೪ನೇ ಖಂಡದಲ್ಲಿ 'ಎಲ್ಲ ಚುನಾವಣೆಗಳು' ಎಂಬ ಪದಗಳ ಬದಲಾಗಿ ಎಲ್ಲ ಒಕ್ಕೂಟ ಚುನಾವಣೆಗಳು ಎಂಬ ಪದಗಳನ್ನು ಪ್ರತಿಯೋಜಿಸಬೇಕು ಮತ್ತು ಸಮ್ಮಿಶ್ರ ಅಥವಾ ಪ್ರಾಂತೀಯ ಎಂಬ ಪದಗಳನ್ನು ಬಿಡಬೇಕು."

ತಿದ್ದುಪಡಿಯ ಅನಂತರ ೨೪ನೇ ಖಂಡ ಹೀಗಿರುತ್ತದೆ:

"೨೪. ರಾಷ್ಟ್ರಪತಿಗಳು ನೇಮಿಸುವ ಆಯೋಗಕ್ಕೆ ಈ ಸಂವಿಧಾನದ "ಅಡಿಯಲ್ಲಿ ನಡೆಯುವ ಎಲ್ಲ ಒಕ್ಕೂಟ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಾಧಿಕಾರವನ್ನು ವಹಿಸಬೇಕು. ಅಂತೆಯೇ ಚುನಾವಣೆಯಿಂದ ಉದ್ಭವಿಸಬಹುದಾದ ಅಥವಾ ಅದಕ್ಕೆ ಸಂಬಂಧಿಸಿದ ಸಂದೇಹ ಅಥವಾ ವಿವಾದಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಚುನಾವಣಾ ನ್ಯಾಯಾಧಿಕರಣದ ನೇಮಕಾತಿ ಅಧಿಕಾರವನ್ನು ಆಯೋಗಕ್ಕೇ ವಹಿಸಬೇಕು."

ಮಾನ್ಯರೆ, ಈ ತಿದ್ದುಪಡಿಯಲ್ಲಿ ಆಲೋಚಿಸಿದಂತೆ ಒಕ್ಕೂಟ ಶಾಸನಸಭೆಯ ಚುನಾವಣೆಗಳ ಮಟ್ಟಿಗೆ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಾಧಿಕಾರವು ರಾಷ್ಟ್ರಪತಿಗಳಿಗಿರಬೇಕು. ಆದರೆ ಪ್ರಾಂತೀಯ ಚುನಾವಣೆಗಳ ವಿಷಯದಲ್ಲಿ ಆ ಅಧಿಕಾರವನ್ನು ರಾಜ್ಯಪಾಲರಿಗೆ ಬಿಡಬೇಕು. ಅಥವಾ ಪ್ರಾಂತ್ಯದಲ್ಲೆ ಇರುವ ಸೂಕ್ತ ಪ್ರಾಧಿಕಾರಗಳಿಗೆ ವಹಿಸಬೇಕು.

ಈ ತಿದ್ದುಪಡಿಗಳಿಗೆ ಕಾರಣಗಳು ಹೀಗಿವೆ: ಮಾನ್ಯರೆ, ೭ನೇ ಅಧ್ಯಾಯ ನೋಡಿದರೆ, ೨೩ನೇ ಖಂಡ ಒಕ್ಕೂಟ ಸಂಸತ್ ಚುನಾವಣೆಗೆ ಸಂಬಂಧಿಸಿದೆ. ಸಹಜವಾಗಿಯೇ ಅದರ ಅನುಸಾರವಾಗಿ ೨೪ನೇ ಖಂಡ ಕೇವಲ ಒಕ್ಕೂಟ ಸಂಸತ್ತಿಗೆ ಸಂಬಂಧಿಸಿರಬೇಕು. ಈ ಖಂಡವನ್ನು ರೂಪಿಸಿದವರಿಗೆ ಹೇಗೋ ಒಂದು ಆಲೋಚನೆ ಹೊಳೆಯಿತೆಂದು ತೋರುತ್ತದೆ. ಖಂಡದಲ್ಲಿ ಪ್ರಾಂತೀಯ ಚುನಾವಣೆಗಳನ್ನೂ ಸೇರಿಸಬಾರದೇಕೆ? ಗೌರವಾನ್ವಿತ ಮಂಡನೆಕಾರರ ಭಾಷಣದಿಂದ ನನಗೆ ತಿಳಿದುಬಂದಂತೆ ಮಹಾಸಭೆಯ ರಾಷ್ಟ್ರಪತಿಗಳಿಗೆ ಪ್ರಾಂತೀಯ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಾಧಿಕಾರವನ್ನು ವಹಿಸಿಕೊಡುವುದರ ಪರವಾಗಿ ಅವರು ವಾದಿಸಿದಂತಿದೆ. ಅವರ ಉದ್ದೇಶ, ಪಕ್ಷಪಾತರಹಿತವಾಗಿರುವಂತೆ ಖಚಿತಪಡಿಸಿಕೊಳ್ಳುವುದು. ನಾನು ಈ ವಾದಕ್ಕೆ ಅನಂತರ ಪ್ರತಿಕ್ರಿಯಿಸುತ್ತೇನೆ. ಆದರೆ ಮಾನ್ಯರೆ ಮಿಕ್ಕೆಲ್ಲದರ ಜೊತೆಗೆ ಪ್ರಾಂತೀಯ ಚುನಾವಣೆಯ ಅಧೀಕ್ಷಣೆಗೆ ಉಪಬಂಧಿಸಲು ಇದು ತಕ್ಕ ಸ್ಥಳವಲ್ಲ. ಇಲ್ಲಿ ನಾವು ಕೇವಲ ಒಕ್ಕೂಟ ಚುನಾವಣೆಗಳ ಬಗ್ಗೆ ಮಾತ್ರ ಚರ್ಚಿಸುತ್ತಿದ್ದೇವೆ.

ಅದು ಕೂಡದೆಂಬುದಕ್ಕೆ ಮತ್ತೆ ಒಂದೆರಡು ಬಲವಾದ ಕಾರಣಗಳಿವೆ. ಇಲ್ಲಿಯವರೆಗೆ ನಾವು ಕಂಡಂತೆ ಪ್ರಾಂತೀಯ ಚುನಾವಣೆಗೆ ಸಂಬಂಧಿಸಿದಂತೆ ಅವುಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ ಎಲ್ಲವೂ ಪ್ರಾಂತೀಯ ರಾಜ್ಯಪಾಲರ ಕೈಯಲ್ಲಿತ್ತು. ವಯಸ್ಕ ಮತದಾನ ಪದ್ಧತಿಯಲ್ಲಿ ಚುನಾಯಿಸಲ್ಪಟ್ಟ ರಾಜ್ಯಪಾಲರನ್ನು ನಾವು ಪಡೆಯಲಿದ್ದೇವೆ. ಅವರ ಕೈಯಲ್ಲಿ ಈ ಅಧಿಕಾರವನ್ನು ಏಕೆ ವಹಿಸಿಕೊಡಲಾರದೋ ನನಗೆ ಅರ್ಥವಾಗುತ್ತಿಲ್ಲ.

ಇಲ್ಲಿ ಇನ್ನೊಂದು ಸಮಸ್ಯೆ ಇದೆ. ಮಹಾಸಭೆಯ ರಾಷ್ಟ್ರಪತಿಗಳು ದೂರಪ್ರದೇಶದ ಚುನಾವಣೆಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದ ಹೊಣೆ ಹೊರಲಾಗದ ವ್ಯಕ್ತಿ. ಅದನ್ನು ಪ್ರಾಂತೀಯ ಜನರೆ ನಿರ್ವಹಿಸಬಹುದು. ಮಹಾಸಭೆಯ ರಾಷ್ಟ್ರಪತಿಗಳಿಗೆ ಈಗಾಗಲೆ ಹೇರಳವಾದ ಕರ್ತವ್ಯಗಳಿರುತ್ತದೆ. ಅವರಿಗೆ ಚುನಾವಣೆಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ ಇವೆಲ್ಲ ಹೊರೆಯಾಗಬಾರದು.

ಮತ್ತೆ ಈ ಖಂಡದ ಮಂಡನೆಕಾರರು ಮುಂದಿಟ್ಟ ಒಂದೇ ಒಂದು ವಾದವೆಂದರೆ ಚುನಾವಣೆಗಳು ಪಕ್ಷಪಾತ ರಹಿತವಾಗಿರಬೇಕೆಂಬುದೇ ಇದರ ಉದ್ದೇಶ ಎಂದು. ಅಧೀಕ್ಷಣೆ ಮಹಾಸಭೆಯ ರಾಷ್ಟ್ರಪತಿಗಳ ಕೈಯಲ್ಲೋ ಪ್ರಾಂತೀಯ ರಾಜ್ಯಪಾಲರಲ್ಲೋ ಯಾರ ಬಳಿ ಇದ್ದರೇನು? ವ್ಯತ್ಯಾಸವೇನೆಂದು ನನಗೆ ತಿಳಿಯುತ್ತಿಲ್ಲ. ಸಾಕಷ್ಟು ಜಾಗರೂಕತೆ ವಹಿಸಿದರೆ ಎರಡೂ ಸಂದರ್ಭಗಳಲ್ಲೂ ಚುನಾವಣೆಗಳು ನಿಷ್ಪಕ್ಷಪಾತವಾಗಿ ನಡೆಯಬಹುದು. ಈ ಮಾತುಗಳನ್ನಾಡಿ, ನಾನು ಸದನದ ಅಂಗೀಕಾರಕ್ಕೆ ನನ್ನ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಟಿ. ಪ್ರಕಾಶಂ :** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಬೆಂಬಲಿಸಲು ಇಷ್ಟಪಡುತ್ತೇನೆ. ಈ ವಿಷಯದಲ್ಲಿ ಪ್ರಾಂತ್ಯಗಳು, ಕೇಂದ್ರದೊಡನೆ ತಾಳೆ ಹಾಕಿಕೊಳ್ಳುವುದರ ಅಗತ್ಯವಿಲ್ಲ. ೧೯೩೭ರಲ್ಲೂ ಇತ್ತೀಚೆಗೂ ನಡೆದ ಅತಿದೊಡ್ಡ ಚುನಾವಣೆಗಳನ್ನು ಪ್ರಾಂತ್ಯಗಳು ಸಮರ್ಥವಾಗಿ ನಿಭಾಯಿಸಿವೆ ಮುಂದಿನ ಚುನಾವಣೆಗಳು ...

**ಶ್ರೀ ರಾಮ್ ಸಹಾಯ್** (ಗ್ವಾಲಿಯರ್ ರಾಜ್ಯ) : *[ಸನ್ಮಾನ್ಯ ಉಪಸಭಾಧ್ಯಕ್ಷರೆ ನಾನು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. ಎಲ್ಲ ತಿದ್ದುಪಡಿಗಳೂ ಇನ್ನೂ ಪ್ರಸ್ತಾವಕ್ಕೆ ಬಂದಿಲ್ಲ; ತಾವು ಸಹ ಮೂಲ ನಿರ್ಣಯ ಅಥವಾ ತಿದ್ದುಪಡಿಗಳ ಬಗ್ಗೆಯೂ ಮಾತನಾಡಲಿಕ್ಕೆ ಅವಕಾಶ ಕೊಟ್ಟಿಲ್ಲ. ಹಾಗಿರುವಾಗ ಶ್ರೀ ಟಿ. ಪ್ರಕಾಶ್ ಅವರು ತಮ್ಮ ಭಾಷಣವನ್ನು ಪ್ರಾರಂಭ ಮಾಡುವುದು ಹೇಗೆ ಸಾಧ್ಯ?]*

**ಓರ್ವ ಗೌರವಾನ್ವಿತ ಸದಸ್ಯರು** : ಎಲ್ಲ ತಿದ್ದುಪಡಿಗಳನ್ನೂ ಮೊದಲು ಮಂಡಿಸಲಿ.

**ಮಾನ್ಯ ಉಪಸಭಾಧ್ಯಕ್ಷರು** : ಎಲ್ಲ ತಿದ್ದುಪಡಿಗಳೂ ಮೊದಲು ಮಂಡಿಸಲೆಂಬ ಸಲಹೆಯನ್ನು ನಾನು ಒಪ್ಪುತ್ತೇನೆ. ೩೪೫ನೇ ತಿದ್ದುಪಡಿ ಶ್ರೀ ಮುನಿಸ್ವಾಮಿ ಪಿಳ್ಳೈ ಮತ್ತಿತರರು.

**ಶ್ರೀ ವಿ.ಐ. ಮುನಿಸ್ವಾಮಿ ಪಿಳ್ಳೈ** : ನಾವು ವಯಸ್ಕ ಮತದಾರ ಪದ್ಧತಿಯಲ್ಲಿ ಚುನಾವಣೆಗಳನ್ನು ನಡೆಸಲಿದ್ದೇವೆ. ಮುಂದೆ ಸ್ಥಾಪಿಸುವ ನ್ಯಾಯಾಧಿಕರಣದಲ್ಲಿ ಅನುಸೂಚಿತಜಾತಿಗಳು ಮತ್ತಿತರ ಅಲ್ಪಸಂಖ್ಯಾತ ಪ್ರತಿನಿಧಿಗಳಿರಬೇಕಾದುದು ಅವಶ್ಯವೆಂದು ಭಾವಿಸಿದ್ದೇನೆ. ಆದರೆ ಈ ವಿಷಯಗಳಿಗಾಗಿ ನಿಯಮಗಳನ್ನು ಅನಂತರ ರೂಪಿಸಲಾಗುವುದೆಂದು ತಿಳಿದುಬಂತು. ಈ ಕಾರಣಗಳಿಂದ ಈಗ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

(೨ನೇ ಪಟ್ಟಿಯ ೩೪೬, ೩೪೭ ಮತ್ತು ೧ನೇ ಪೂರಕ ಪಟ್ಟಿಯ ೨೦ನೇ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ಟಿ. ಪ್ರಕಾಶಮ್** : ಮಾನ್ಯರೆ, ತಿದ್ದುಪಡಿಯಂತೆ ಖಂಡದಿಂದ ಪ್ರಾಂತ್ಯಗಳನ್ನು ತೆಗೆದುಹಾಕಬೇಕು. ಅದು ಸರಿಯಾದ ನಿರ್ಧಾರ. ಪ್ರಾಂತ್ಯಗಳನ್ನು ಏಕೆ ಈ ಖಂಡದೊಳಗೆ ತಂದರೋ ತಿಳಿಯದು. ಕೇಂದ್ರ ಸರ್ಕಾರ ರಚಿಸುವ ಆಯೋಗಕ್ಕೆ ಪ್ರಾಂತ್ಯಗಳನ್ನು ತಗಲುಹಾಕುವುದು ಅನಗತ್ಯ. ಪ್ರಾಂತ್ಯಗಳು ತಮ್ಮ ಕೆಲಸವನ್ನು ಯಾವುದೇ ತೊಂದರೆ ಇಲ್ಲದೆ ನಿರ್ವಹಿಸುತ್ತಿವೆ. ೧೯೩೭ ಮತ್ತು ೧೯೪೬ರಲ್ಲಿ ಇತ್ತೀಚೆಗೆ ನಡೆದ ಎರಡೂ ಬಹುದೊಡ್ಡ ಚುನಾವಣೆಗಳನ್ನು ಪ್ರಾಂತ್ಯಗಳು ಎದುರಿಸಿವೆ. ಆದುದರಿಂದ ಪ್ರಾಂತ್ಯಗಳನ್ನು ಈ ಖಂಡದ ಪರಿಧಿಯೊಳಗೆ ತಂದು ಕೇಂದ್ರದ ಸಂಸ್ಥೆಯೊಂದರ ಮೇಲೆ ಅವಲಂಬಿಸಬೇಕಾದುದು ಅಗತ್ಯವೆಂದು ಭಾವಿಸಲಾಗದು. ನಾವೆಲ್ಲರೂ ತಿಳಿದಿರುವಂತೆ ವಯಸ್ಕ ಮತದಾನ ಪದ್ಧತಿಯಲ್ಲಿ ನಡೆಯುವ ಭಾವಿ ಚುನಾವಣೆಗಳು ಅತಿಮುಖ್ಯವಾದವು. ಅವು ಗಾತ್ರದಲ್ಲೂ ಮಹತ್ತರವಾಗಿರುತ್ತವೆ. ಇಲ್ಲಿಯವರೆಗೆ ನಡೆದು ಬಂದಂತೆ ಈ ಕೆಲಸವನ್ನು ಪ್ರಾಂತ್ಯಗಳೇ ನಿರ್ವಹಿಸಲು ಬಿಡಬೇಕು. ಪ್ರಾಂತ್ಯಗಳಲ್ಲಿ ನಡೆಯುತ್ತಿರುವ ಕೆಲಸದ ಪರಿವೀಕ್ಷಣೆ ಕೇಂದ್ರ ಸಂಸ್ಥೆಯಿಂದ ಕಾರ್ಯಸಾಧ್ಯವಾಗದು. ಕೇಂದ್ರಕ್ಕೆ ಪ್ರತಿಯೊಂದು ಇಲಾಖೆಯಲ್ಲೂ ಸಾಕಷ್ಟು ಕೆಲಸಗಳಿರುತ್ತವೆ; ವಿಶೇಷತಃ ಈ ವಿಷಯದಲ್ಲಿ ಸಹ. ಆದ್ದರಿಂದ ಮಾನ್ಯರೆ, ಈ ವಿಚಾರವಾಗಿ ಹೆಚ್ಚು ವಾದ ಮಾಡಬೇಕಾದ ಅಗತ್ಯವಿಲ್ಲ. ತಿದ್ದುಪಡಿಯಲ್ಲಿ ತಿಳಿಸಿದಂತೆ ಪ್ರಾಂತ್ಯಗಳನ್ನು ಇದರಿಂದ ಹೊರಗಿಡಬೇಕು. ಮಾನ್ಯರೆ, ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಈ ವಿಷಯದಲ್ಲಿ ಕೇಂದ್ರದೊಡನೆ ಪ್ರಾಂತ್ಯಗಳನ್ನು ಲಗತ್ತಿಸುವುದು ಅನಗತ್ಯ.

**ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ) : ಮಾನ್ಯ ಉಪಸಭಾಧ್ಯಕ್ಷರೆ, ಈ ಖಂಡದ ಉಗಮದ ಬಗ್ಗೆ ಸದನಕ್ಕೆ ತಿಳಿಸುವುದು ಉಚಿತವೆನಿಸುತ್ತದೆ. ಈ ಖಂಡವು ಒಕ್ಕೂಟವನ್ನು ಕುರಿತ ಸಂವಿಧಾನದಲ್ಲಿ ಕಂಡುಬರುತ್ತದೆಯಾದರೂ ವಾಸ್ತವವಾಗಿ ಮೂಲಭೂತ ಹಕ್ಕುಗಳ ಸಮಿತಿಯು ಇದನ್ನು ಪರಿಶೀಲಿಸಿತು. ಮೂಲಭೂತ ಹಕ್ಕುಗಳ ಸಮಿತಿಯು ಈ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿತು. ಅದರಂತೆ ಚುನಾವಣೆಗಳ ಆಯೋಜನೆಯನ್ನು ಆಯಾ ಸರ್ಕಾರಕ್ಕೆ ಒಪ್ಪಿಸಿದರೆ, ಅಲ್ಪ ಸಂಖ್ಯಾತರ ಅಥವಾ ಚುನಾವಣೆಗಳ ಹಿತ ಸಂರಕ್ಷಣೆಗೆ ಖಾತರಿ ಕೊಡಲಾಗದು. ಸರ್ಕಾರದ ಅಧಿಕಾರಿಗಳು ಚುನಾವಣೆಯ ಕಾರ್ಯಕ್ಕಿಳಿದರೆ ಸರ್ಕಾರ ತನಗಿರುವ ಅಧಿಕಾರವನ್ನು ಚಲಾಯಿಸಿ ಅಧಿಕಾರಾರೂಢ ಪಕ್ಷ ಅಥವಾ ಆಡಳಿತಾರೂಢ ಸರ್ಕಾರಕ್ಕೆ

ಬೆಂಬಲನೀಡುವ ಅಭ್ಯರ್ಥಿಯ ಪರವಾಗಿ ನಿಲ್ಲಲು ಅಧಿಕಾರಿಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾಯಿಸಿದರೆ ನಾವೆಲ್ಲ ಬಯಸಿದ ಮುಕ್ತ ಚುನಾವಣೆ ಕಳಂಕಿತವಾಗುತ್ತದೆ. ಆದುದರಿಂದ ಮೂಲಭೂತ ಹಕ್ಕುಗಳ ಸಮಿತಿಯು ಸರ್ವಾನುಮತದಿಂದ ಒಂದು ನಿರ್ಣಯ ಕೈಗೊಂಡಿತು. ಚುನಾವಣೆಯ ಶುದ್ಧತೆಯನ್ನು ಕಾಯ್ದುಕೊಳ್ಳಲು ಚುನಾವಣೆ ನ್ಯಾಯಸಮ್ಮತವಾಗಿ ನಡೆಯಲು ಇರುವ ಅತಿಮಹತ್ತ್ವದ ಸುರಕ್ಷತಾ ಕ್ರಮವೆಂದರೆ ಕಾರ್ಯನಿರ್ವಾಹಕ ಅಧಿಕಾರಿಯಿಂದ ಅದನ್ನು ಕಿತ್ತು ಸ್ವತಂತ್ರ ಪ್ರಾಧಿಕಾರವೊಂದರ ಕೈಗಿಡುವುದು. ೨೩ನೇ ಖಂಡ ನಿರ್ದಿಷ್ಟವಾಗಿ ಮೂಲಭೂತ ಹಕ್ಕುಗಳ ಸಮಿತಿ ಆಲೋಚಿಸಿದ ಯೋಜನೆಯ ವಿವರ ನೀಡಿಲ್ಲ. ಆದರೂ ಸದನಕ್ಕೆ ತಿಳಿಸಲು ನಾನು ಇಚ್ಛಿಸುವುದಿಷ್ಟೆ; ಸಮಿತಿಯು ಇಡೀ ಭಾರತದಲ್ಲಿ ಚುನಾವಣೆಗಳನ್ನು ನಿರ್ವಹಿಸಲು ರಾಷ್ಟ್ರಪತಿಗಳ ಒಂದು ಕೇಂದ್ರೀಯ ಆಯೋಗವನ್ನು ರಚಿಸಬೇಕೆಂದು ಆಲೋಚಿಸಿತ್ತು. ಚುನಾವಣೆಯ ಅಧೀಕ್ಷಣೆ, ನಿರ್ದೇಶನ ಹಾಗೂ ನಿಯಂತ್ರಣಕ್ಕೆಂದು ಕೇಂದ್ರೀಯ ಆಯೋಗವೊಂದರ ರಚನೆಯನ್ನು ಆಲೋಚಿಸಿತ್ತಾದರೂ ಕೇವಲ ಒಂದೇ ಆಯೋಗ ದೆಹಲಿಯಲ್ಲೋ ಅಥವಾ ಕೇಂದ್ರ ಸರ್ಕಾರ ಇರುವ ಇನ್ನಾವ ಕೇಂದ್ರದಲ್ಲೋ ಕುಳಿತು ನಿರ್ವಹಿಸಬೇಕೆಂಬ ಆಲೋಚನೆಯೇ ಇರಲಿಲ್ಲ. ಯೋಜನೆಯಂತೆ ಒಕ್ಕೂಟ ಸಂಸತ್ತಿನ ಚುನಾವಣೆಗೆಂದು ಒಂದು ಕೇಂದ್ರೀಯ ಆಯೋಗವಿರಬೇಕು. ಜೊತೆಗೆ ಆಯೋಗದ ಅಡಿಯಲ್ಲಿ ಪ್ರತಿಯೊಂದು ಪ್ರಾಂತ್ಯದಲ್ಲಿ ಒಂದು ಅಧೀನ ಆಯೋಗ ಇರಬೇಕು; ಪ್ರಾಂತ್ಯವು ಗಾತ್ರದಲ್ಲಿ ಅತಿಸಣ್ಣದಾಗಿದ್ದರೆ ಎರಡು ಅಥವಾ ಮೂರು ಪ್ರಾಂತ್ಯಗಳ ಸಮುಚ್ಚಯಕ್ಕೊಂದು ಅಧೀನ ಆಯೋಗದಂತೆ ಕಾರ್ಯನಿರ್ವಹಿಸಬೇಕು; ಸ್ಥಳೀಯ ಆಯೋಗದಿಂದ ಅವುಗಳ ಕಾರ್ಯಕಲಾಪಗಳ ಮೇಲ್ವಿಚಾರಣೆ ನಡೆಯಬೇಕು. ಪ್ರಾರಂಭದಿಂದಲೂ ಇದರ ವಿಕೇಂದ್ರೀಕರಣವಾಗಬೇಕೆಂಬುದೇ ಸಮಿತಿಯ ಆಲೋಚನೆಯಾಗಿತ್ತು. ಸಮ್ಮಿಶ್ರ ಚುನಾವಣೆಗೆಂದು ಒಂದು ಕೇಂದ್ರೀಯ ಆಯೋಗವಿರಬೇಕು. ಮತ್ತು ವಿವಿಧ ಪ್ರಾಂತ್ಯಗಳಲ್ಲಿ ನಡೆಯುವ ಚುನಾವಣೆಗಾಗಿ ಹಲವಾರು ಆಯೋಗಗಳಿರಬೇಕು. ನನ್ನ ವಾದವಿಷ್ಟೆ; ಆ ಯೋಜನೆ ಕಾರ್ಯರೂಪಕ್ಕೆ ಬಂದರೆ ನನ್ನ ಮಿತ್ರ ಶ್ರೀ ಪಾಟಸ್ಕರ್ ಅವರು ತಮ್ಮ ತಿದ್ದುಪಡಿಯ ಮೂಲಕ ಮಾಡಿರುವ ಆಲೋಚನೆಗೆ ಮಾನ್ಯತೆ ದೊರೆಯುತ್ತದೆ. ಏಕೆಂದರೆ ನಾನು ಅವರ ವಾದವನ್ನು ಅರ್ಥಮಾಡಿಕೊಂಡಿರುವ ರೀತಿಯಲ್ಲಿ ಒಂದು ಸ್ಥಳೀಯ ಪ್ರಾಧಿಕಾರವಿರಬೇಕೆಂಬುದು ಅವರ ಅಪೇಕ್ಷೆ. ಎಂದರೆ ಆ ಪ್ರಾಂತ್ಯದ ಚುನಾವಣಾ ಕಾರ್ಯವನ್ನು ನಿರ್ವಹಿಸಲು ಒಂದು ಸ್ಥಳೀಯ ಆಯೋಗವಿರಬೇಕು. ಅದೇ ನಮ್ಮ ಯೋಜನೆ ಎಂದುಕೊಂಡಿದ್ದೇನೆ. ಅದನ್ನು ೨೪ನೇ ಖಂಡದಲ್ಲಿ ನಮೂದಿಸಿಲ್ಲವಾದರೂ ಅದೇ ನಮ್ಮ ಉದ್ದೇಶವಾಗಿತ್ತು. ಇಷ್ಟಾದರೂ ನನ್ನ ಮಿತ್ರ ಶ್ರೀ ಪಾಟಸ್ಕರ್ ಅವರು ತಮ್ಮ ತಿದ್ದುಪಡಿಯನ್ನು ಆಗ್ರಹಪಡಿಸಿದರೆ ಅವರನ್ನು ನಾನೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ಅದು, ಅವರು ರೂಪಿಸಿದ ತಿದ್ದುಪಡಿಯನ್ನು ಓದಿದ ಮೇಲೆ ಉದ್ಭವಿಸಿದ ಸಂದೇಹವನ್ನು ಕುರಿತದ್ದು. ಅವರು ಎಲ್ಲ ಚುನಾವಣೆಗಳು ಎಂಬ ಪದವನ್ನು ಬಿಟ್ಟು ಎಲ್ಲ ಸಮ್ಮಿಶ್ರ ಚುನಾವಣೆಗಳು ಎಂಬ ಪದವನ್ನು ಪ್ರತಿಯೋಜಿಸಲು ಬಯಸಿದ್ದಾರೆ. ಅವರ ತಿದ್ದುಪಡಿಗೆ ನನ್ನದೇನೂ ದೊಡ್ಡ ಆಕ್ಷೇಪಣೆ ಇಲ್ಲ. ಪರಂತು ಒಂದು ಅಂಶದ ಬಗ್ಗೆ ಅವರು ನನಗೆ ಮನವರಿಕೆ ಮಾಡಿಕೊಡಬೇಕು. ಅವರು ಈ ತತ್ತ್ವವನ್ನು ಒಪ್ಪುತ್ತಾರೋ ಇಲ್ಲವೋ ಎಂಬುದನ್ನು ನಾನು ತಿಳಿಯಬೇಕು. ಇಷ್ಟಕ್ಕೂ ನಮ್ಮ ಕಾಳಜಿ ಇರುವುದು ಈ ಖಂಡದ ಹಿಂದಣ ತತ್ತ್ವದ ಬಗ್ಗೆ, ಕಾರ್ಯಾಂಗದ ಹೊರಗಣ ಸ್ವತಂತ್ರ ಸಂಸ್ಥೆಯ ಸುಪರ್ದಿಗೆ ಚುನಾವಣೆಗಳನ್ನು ವಹಿಸಿಕೊಡುವ ತತ್ತ್ವ ಅವರಿಗೆ ಒಪ್ಪಿಗೆಯೆ? ಅವರು ಒಪ್ಪಿದರೆ ೨೪ನೇ ಖಂಡದಂತೆ ಸಂವಿಧಾನದ ಪ್ರಾಂತೀಯ ಭಾಗದಲ್ಲಿ ಮತ್ತೊಂದು ಖಂಡವನ್ನು ಮಂಡಿಸುವುದಕ್ಕೆ ಸದನವು ಅನುಮೋದಿಸಿದರೆ ನನ್ನದೇನೂ ಅಭ್ಯಂತರವಿಲ್ಲ. ನನಗೆ ಕೇಂದ್ರೀಕರಣದಲ್ಲೇನೂ ಅಭಿಲಾಷೆ ಇಲ್ಲ. ಆಯಾ ಸರ್ಕಾರದ ವಶದಿಂದ ಚುನಾವಣೆಯನ್ನು ಮುಕ್ತಗೊಳಿಸಬೇಕೆಂಬುದು ನಮ್ಮ ಆಶಯವಾಗಿತ್ತು.

**ಶ್ರೀ ಎಚ್.ವಿ. ಪಾಟಸ್ಕರ್** : ನಾವು ಚರ್ಚೆಯನ್ನು ಮುಂದುವರಿಸುವ ಮುನ್ನ ನನ್ನ ಮಿತ್ರ

ಡಾ. ಅಂಬೇಡ್ಕರ್ ಅವರ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಸಹಮತವಿದೆಯೆಂದು ತಿದ್ದುಪಡಿಯ ಮಂಡನೆಕಾರನಾಗಿ ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ ಯಾವುದೇ ಕಾರ್ಯಕಾರಿ ಅಧಿಕಾರದ ವ್ಯಾಪ್ತಿಯಿಂದ ಹೊರಗಿರಬೇಕು. ಪ್ರಾಂತೀಯ ಸಂವಿಧಾನದಲ್ಲಿ ಆ ಬಗ್ಗೆ ಒಂದು ಉಪಬಂಧವನ್ನು ಸೇರಿಸಬಹುದು.

**ಶ್ರೀ ಕೆ. ಸಂತಾನಮ್** : ನನಗೆ ತೋರುವಂತೆ ಈ ಖಂಡ ತುಂಬ ವಿಸ್ತಾರವಾದುದು. ಚುನಾವಣೆ ಎಂದರೇನು? ಮೊಟ್ಟಮೊದಲಿಗೆ ನಾವು ಮತದಾರರ ಪಟ್ಟಿಯನ್ನು ತಯಾರಿಸಬೇಕು. ಎರಡನೆಯದಾಗಿ ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಮತಗಟ್ಟೆಗಳು ಮತ್ತು ಚುನಾವಣಾಧಿಕಾರಿಗಳಿಗೆ ವ್ಯವಸ್ಥೆ ಮಾಡಬೇಕು. ಅನಂತರ ಮತಚೀಟಿಗಳು, ಮತಗಳ ಎಣಿಕೆ ಇತ್ಯಾದಿ. ನನಗನಿಸುವಂತೆ, ಸಾರ್ವತ್ರಿಕವಾಗಿ ವಯಸ್ಕ ಮತದಾನ ಪದ್ಧತಿಯನ್ನು ಅಳವಡಿಸುವಾಗ ಇಡೀ ಪ್ರಾಂತೀಯ ಸರ್ಕಾರದ ಆಡಳಿತ ಯಂತ್ರವನ್ನು ಈ ಚುನಾವಣಾ ಕಾರ್ಯದಲ್ಲಿ ತೊಡಗಿಸಬೇಕು. ಅಂತಿಮ ಕಾರ್ಯನಿರ್ವಾಹಕ ಅಧಿಕಾರ ಸರ್ಕಾರದ ಕೈಯಲ್ಲಿ ಇರುವ ಹೊರತು, ಯಾವ ಸ್ವತಂತ್ರ ಆಯೋಗದ ಎಲ್ಲ ಹಂತಗಳಲ್ಲೂ ಇಡೀ ಪ್ರಾಂತೀಯ ಸರ್ಕಾರವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಚುನಾವಣಾ ನ್ಯಾಯಾಧಿಕರಣ ಅಥವಾ ಅಭ್ಯರ್ಥಿಗಳ ಅರ್ಹತೆ ಅಥವಾ ಪರಿಶೀಲನೆ ಅಥವಾ ನಾಮ ಪತ್ರಗಳ ಬಗ್ಗೆ ಆಕ್ಷೇಪಣೆ, ಇಂತಹ ಕೆಲವು ವಿಷಯಗಳನ್ನು ಮಾತ್ರ ಸ್ವತಂತ್ರ ಸಂಸ್ಥೆಗೆ ವಹಿಸಿಕೊಡಬೇಕು; ಆದರೆ ಇಡೀ ಚುನಾವಣಾ ಪ್ರಕ್ರಿಯೆಯನ್ನು ವಹಿಸಿಕೊಡಲಾಗದು. ಹಾಗೇನಾದರೂ ವಹಿಸಿಕೊಡುವ ಪ್ರಯತ್ನ ಮಾಡಿದರೆ ಕೇಂದ್ರೀಯ ಚುನಾವಣಾ ವಿಷಯದಲ್ಲಾಗಲಿ ಅಥವಾ ಪ್ರಾಂತೀಯ ಚುನಾವಣಾ ವಿಷಯದಲ್ಲಾಗಲಿ ಅದು ಸಫಲವಾಗುವುದಿಲ್ಲ. ಅದರಿಂದ ನಿರ್ವಹಣೆ ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಚುನಾವಣೆಗೆ ಇಡೀ ಆಡಳಿತ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ವಿನಿಯೋಗಿಸಬೇಕಾಗುತ್ತದೆ. ಆದುದರಿಂದ ಕರಡು ತಯಾರಿಕೆಯ ಸಂದರ್ಭದಲ್ಲಿ ಈ ಸಮಸ್ಯೆಗಳನ್ನು ಕೂಲಂಕಷವಾಗಿ ಪರೀಕ್ಷಿಸಬೇಕಾಗುತ್ತದೆ. ಆಯೋಗಗಳ ಅಧಿಕಾರ ಅಥವಾ ಪ್ರಕಾರ್ಯಗಳನ್ನು ಸೀಮಿತವಾಗಿ, ನ್ಯಾಯಿಕ ಪ್ರಾಧಿಕಾರಕ್ಕೆ ವಹಿಸುವಂತೆ, ವಹಿಸಿಕೊಡಬೇಕು. ಕಾರ್ಯಾಂಗದ ಎಲ್ಲ ಕೆಲಸಗಳನ್ನು ಆಯೋಗಗಳ ಮೇಲೆ ಹೇರಲಾಗದು. ಅದು ಕೇವಲ ನ್ಯಾಯಿಕ ಆಯೋಗವಾಗಬೇಕೇ ಹೊರತು ಕಾರ್ಯಾಂಗ ಆಯೋಗವಾಗಬಾರದು. ಆಯಾ ಸರ್ಕಾರಕ್ಕೆ ಎಂದಿನಂತೆ ಕಾರ್ಯನಿರ್ವಾಹಕ ಪ್ರಕಾರ್ಯಗಳನ್ನು ವಹಿಸಬೇಕು. ನ್ಯಾಯಿಕ ವಿಧಾನದಲ್ಲಿ ಇತ್ಯರ್ಥಗೊಳಿಸುವುದೆಲ್ಲವನ್ನೂ ಚುನಾವಣಾ ಆಯೋಗಕ್ಕೆ ವಹಿಸಬೇಕು. ಇಲ್ಲವಾದರೆ ಇಡೀ ಯೋಜನೆ ವಿಫಲವಾಗುತ್ತದೆ.

**ಶ್ರೀ ಬಿಶ್ವನಾಥ್ ದಾಸ್** (ಒರಿಸ್ಸಾ : ಜನರಲ್) : ಮಾನ್ಯರೆ, ಈ ಖಂಡ ಈಗಿರುವಂತೆ ಕೆಲ ಅಧಿಕಾರಗಳನ್ನು ಪ್ರಾಂತ್ಯಗಳಿಗೆ ಬಿಟ್ಟುಕೊಡುತ್ತದೆ. ನೂತನ ಸಂವಿಧಾನದ ಅಡಿಯಲ್ಲಿ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವನ್ನು ಸಮ್ಮಿಶ್ರ ಪ್ರಾಧಿಕಾರಕ್ಕೆ ಬಿಟ್ಟುಕೊಡಲಾಗುತ್ತೆ. ಪ್ರಾಂತೀಯ ಪ್ರಾಧಿಕಾರದ ಹೊರತು ಬೇರೆ ಯಾವುದೇ ಪ್ರಾಧಿಕಾರ ಪ್ರಾಂತೀಯ ಸಹಕಾರವಿಲ್ಲದೆ ಚುನಾವಣೆಗಳನ್ನು ನಡೆಸುವುದು ಅಸಮಂಜಸ ಮತ್ತು ಅಸಾಧ್ಯ. ಚುನಾವಣಾ ಪರಿಸ್ಥಿತಿಯನ್ನು ಕಲ್ಪನೆ ಮಾಡಿಕೊಳ್ಳುವಂತೆ ನಾನು ಸದನದ ಗೌರವಾನ್ವಿತ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಇದು ಮತದಾರರ ಪಟ್ಟಿ ತಯಾರಿಕೆ, ಕಟ್ಟಡಗಳನ್ನು ಈ ಉದ್ದೇಶಕ್ಕಾಗಿ ಪಡೆಯುವುದು, ಮತಗಟ್ಟೆಗಳನ್ನು ತೆರೆಯುವುದು ಇತ್ಯಾದಿ ಸಿದ್ಧತೆಗಳೆಲ್ಲವನ್ನೂ ಒಳಗೊಂಡಿರುತ್ತದೆ. ಇವೆಲ್ಲವನ್ನೂ ಪ್ರಾಂತೀಯ ಸರ್ಕಾರವೇ ಮಾಡಬೇಕಾಗುತ್ತದೆ. ಯಾವ ಒಕ್ಕೂಟ ಪ್ರಾಧಿಕಾರವೂ ಅದೆಷ್ಟೇ ಬಲಶಾಲಿಯಾಗಿದ್ದರೂ ಈ ಎಲ್ಲ ಜವಾಬ್ದಾರಿಯನ್ನು ಹೊರಲಾರದು. ಇದರ ಜೊತೆಗೆ ಮಾನ್ಯರೆ ಪ್ರಾಂತೀಯ ಅಧಿಕಾರಿಗಳ ಸಹಕಾರವೂ ಅಗತ್ಯ. ಯಾವ ಮಹಾಸಭೆಯೂ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲಾರದು. ಚುನಾವಣೆಯ ನಿಕಟ ಪರಿಚಯವಿದ್ದವರು ಒಕ್ಕೂಟ ಪ್ರಾಧಿಕಾರವಾಗಲಿ ಅದಕ್ಕಿಂತಲೂ ಹೆಚ್ಚಾಗಿ ಆಯೋಗವಾಗಲಿ ಈ ಕೆಲಸವನ್ನು ನಿಭಾಯಿಸಲಾರದೆಂಬುದನ್ನು ಕೂಡಲೆ ಒಪ್ಪಿಕೊಳ್ಳುತ್ತಾರೆ. ಇಂತಹ ಸನ್ನಿವೇಶದಲ್ಲಿ ಪ್ರಾಂತ್ಯಗಳಿಗೆ ಈ ಕೆಲಸವನ್ನು

ವಹಿಸಿಕೊಳ್ಳಲು ಬಿಡುವುದು ಅಗತ್ಯ. ಡಾ. ಅಂಬೇಡ್ಕರ್ ಅವರ ಅಭಿಪ್ರಾಯವನ್ನು ಒಂದಷ್ಟು ಮಟ್ಟಿಗೆ ನಾನು ಒಪ್ಪಿಕೊಳ್ಳುತ್ತೇನೆ. ಚುನಾವಣೆಗಳ ಮೇಲೆ ನಿಗಾ ಇಡಲು ಅವುಗಳ ನಿಯಂತ್ರಣ ಮತ್ತು ಅಧೀಕ್ಷಣೆಯನ್ನು ಒಂದು ನ್ಯಾಯಾಧಿಕರಣಕ್ಕೋ ಅಥವಾ ಕೇಂದ್ರೀಯ ಪ್ರಾಧಿಕಾರಕ್ಕೂ ವಹಿಸಬೇಕೆನ್ನುವ ಅವರ ಮಾತಿಗೆ ನನ್ನ ಸಹಮತ ಇದೆ. ಸ್ಥಳೀಯ ಮಂಡಳಿಗಳು ಮತ್ತು ಪ್ರಾಂತೀಯ ವಿಧಾನ ಸಭೆಗಳ ಚುನಾವಣೆಗಳ ಕಹಿ ಅನುಭವವನ್ನು ಉಂಡವರಿಗೆ ಇಡೀ ಚುನಾವಣಾ ಪ್ರಕ್ರಿಯೆಯನ್ನು ಪ್ರಾಂತ್ಯಗಳಿಗೆ ಬಿಟ್ಟುಕೊಡುವುದು ಅದರಲ್ಲೂ ಪಕ್ಷಗಳ ನೀತಿ ನಿಲುವಿನ ಆಧಾರದ ಮೇಲೆಂದರೆ ಅದೆಷ್ಟು ಭಯಾನಕ ಎಂಬುದು ಗೊತ್ತಿದೆ. ಇಂತಹ ಸಂದರ್ಭಗಳಲ್ಲಿ ನಾವು ಪ್ರತ್ಯೇಕ ವಿಭಜನೆಯನ್ನು ಮಾಡುವ ಅಗತ್ಯವಿದೆ. ಅದರಂತೆ ಪ್ರಾಂತ್ಯಗಳು ಚುನಾವಣೆಯನ್ನು ನಡೆಸಬೇಕು ಮತ್ತು ಅದರ ಅಧೀಕ್ಷಣೆ ಮತ್ತು ನಿಯಂತ್ರಣದ ಮೇಲೆ ಕೇಂದ್ರೀಯ ಪ್ರಾಧಿಕಾರ ನಿಗಾ ಇಡಬೇಕು.

ಚುನಾವಣಾ ನ್ಯಾಯಾಧಿಕರಣದ ಬಗ್ಗೆ ಒಂದು ಮಾತು. ಮಾನ್ಯರೆ, ಕೆಲವೆಡೆಗಳಲ್ಲಿ ನ್ಯಾಯಾಧಿಕರಣಗಳನ್ನು ಸ್ಥಾಪಿಸುವಲ್ಲಿ ಮಂತ್ರಿಗಳು ಮತ್ತು ಅವರ ಸಲಹೆಯ ಮೇಲೆ ರಾಜ್ಯಪಾಲರು, ನ್ಯಾಯಸಮ್ಮತವಾಗಿ ವರ್ತಿಸಿಲ್ಲ ಎಂಬುದು ನಮ್ಮ ಅರಿವಿಗೆ ಬಂದಿದೆ; ಮತ್ತು ಅದು ನಮ್ಮ ಅನುಭವವೂ ಹೌದು. ಪ್ರತಿಪಕ್ಷಗಳಿಗೆ ಬಾಧಕವಾಗುವ ರೀತಿಯಲ್ಲಿ ತಮ್ಮ ಪಕ್ಷಗಳ ಹಿತಸಾಧನೆಗೆ ಬಳಸಿಕೊಳ್ಳಲ್ಪಟ್ಟಿವೆ. ಆದುದರಿಂದ ಅಂತಹ ನ್ಯಾಯಾಧಿಕರಣಗಳನ್ನು ಈ ಆಯೋಗ ಸ್ವತಂತ್ರವಾಗಿ ಸ್ಥಾಪಿಸಬೇಕಾದುದು ಉಚಿತ. ಅಥವಾ ಪ್ರತ್ಯೇಕ ಮತ್ತು ಸ್ವತಂತ್ರ ಪ್ರಾಧಿಕಾರ ಅದನ್ನು ನಡೆಸಬೇಕು ಆದರೆ ಮಹಾಸಭೆ ಸಂಪೂರ್ಣವಾಗಿ ತಾನೇ ನಡೆಸಬೇಕೆಂದರೆ ಅದು ಅಸಾಧ್ಯ. ಅದು ಮಹಾಸಭೆ ಅಥವಾ ನ್ಯಾಯಾಧಿಕರಣದ ಕಾರ್ಯವ್ಯಾಪ್ತಿಗಿಂತ ಅತೀತವಾದುದು ಆದುದರಿಂದ ಇಂತಹ ಸನ್ನಿವೇಶಗಳಲ್ಲಿ ಡಾ. ಅಂಬೇಡ್ಕರ್ ಅವರು, ತಿದ್ದುಪಡಿಯನ್ನು ಮಂಡನೆಕಾರರೇ ಆಂಶಿಕವಾಗಿ ಒಪ್ಪಿಕೊಳ್ಳಲು ಒಡಂಬಡಿಸುವಂತೆ ಅವರಲ್ಲಿ ಕೋರುತ್ತೇನೆ.

**ಶ್ರೀ ಸತ್ಯನಾರಾಯಣ ಸಿನ್ಹ** (ಬಿಹಾರ್ : ಸಾಮಾನ್ಯ) : ತಿದ್ದುಪಡಿಯನ್ನು ಮತಕ್ಕೆ ಹಾಕುವಂತೆ ನಾನು ಮಂಡಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಉಪಾಧ್ಯಕ್ಷರೆ...

**ಮಾನ್ಯ ಉಪಾಧ್ಯಕ್ಷರು** : ಮುಕ್ತಾಯವನ್ನು ಮಂಡಿಸಲಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಸಮಾಪ್ತಿಯ ಪ್ರಸ್ತಾವಕ್ಕೆ ಅನ್ವಯವಾಗುವ ನಿಯಮವೆಂದರೆ ಯುಕ್ತ ಚರ್ಚೆ ನಡೆದು, ಅದರ ಅಂಗೀಕಾರ ಸದನದ ಅನುಮೋದನೆಯನ್ನು ಅವಲಂಬಿಸಿರಬೇಕು. ಸದನದೊಡನೆ ಸಮಾಲೋಚನೆಯಾಗಿಲ್ಲ. ಸದನದಲ್ಲಿ ಇದುವರೆಗೆ ಮಾತನಾಡಿದಂತೆ ಇಂದೂ ಸಹ ನಾನು ಸಂಕ್ಷಿಪ್ತವಾಗಿಯೇ ಮಾತನಾಡುತ್ತೇನೆ.

ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಈ ಉಪಬಂಧದ ಹಿಂದಣ ಮನಃಸ್ಥಿತಿಯನ್ನು ಡಾ. ಅಂಬೇಡ್ಕರ್ ಅವರು ಸ್ವಾರಸ್ಯವಾಗಿ ವಿವರಿಸಿದ್ದಾರೆ. ಅವರು ತರ್ಕಬದ್ಧವಾದ ನೇರ ಪ್ರಶ್ನೆಯನ್ನೇ ಕೇಳಿದ್ದಾರೆ; ಚುನಾವಣಾ ವಿವಾದಗಳನ್ನು ಬಗೆಹರಿಸಲು ಒಂದು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಬೇಕೆ ಎಂದು ಕೇಳಿದ್ದಾರೆ, ಶ್ರೀ ಪಾಟಸ್ಕರ್ ಅವರು ಅದಕ್ಕೆ ಒಪ್ಪಿದ್ದಾರೆ. ನಾನೂ ಅದನ್ನು ಅನುಮೋದಿಸುತ್ತೇನೆ. ನಾನು ಅವರನ್ನೂ ಅವರಂಥ ಸಮಾನ ಮನಸ್ಕರನ್ನೂ ಕೇಳುತ್ತೇನೆ. ಒಂದು ಪ್ರಾಂತ್ಯದಲ್ಲಿ ಸಾಕಷ್ಟು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸಂಸ್ಥೆ ಲಭ್ಯವಿಲ್ಲವೆ? ನನ್ನ ಅನಿಸಿಕೆಯಂತೆ, ಡಾ. ಅಂಬೇಡ್ಕರ್ ಅವರ ಮಾತಿನಲ್ಲಿ ಪ್ರಾಂತ್ಯಗಳ ಸಾಮರ್ಥ್ಯ ಮತ್ತು ಸ್ವಾತಂತ್ರ್ಯದ ಬಗ್ಗೆ ಸಂದೇಹ ನೆರಳಾಡುತ್ತಿದೆ. ಪ್ರಾಂತ್ಯಗಳಲ್ಲಿ ನ್ಯಾಯಾಧಿಕರಣಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆ? ನಮ್ಮ ನ್ಯಾಯಿಕ ವ್ಯವಸ್ಥೆ ವಿಶ್ವಾಸಾರ್ಹವಲ್ಲವೆ? ಇಲ್ಲಿ ಚುನಾವಣೆಗಳು ಯಾವ ಸ್ಥಳೀಯ ಪರಿಸ್ಥಿತಿಯಲ್ಲಿ ನಡೆಯುತ್ತವೆ ಎಂಬ ಪ್ರಶ್ನೆ ಪ್ರಾಂತೀಯ ಅಧಿಕಾರಿಗಳಿಗಿದೆ. ಪ್ರಾಂತೀಯ ಅಧಿಕಾರಿಗಳಿಂದ

ಆಯ್ಕೆಗೊಂಡ ಉಚ್ಚ ನ್ಯಾಯಾಲಯ-ನ್ಯಾಯಾಧೀಶರು ಮತ್ತು ಇತರ ಸದಸ್ಯರಿಗೆ ಈ ಕೆಲಸವನ್ನು ವಹಿಸಿಕೊಡುವುದು ಲೇಸೆಂದು ನನ್ನ ನಿವೇದನೆ. ನನ್ನ ಅಭಿಪ್ರಾಯದಂತೆ ಪ್ರಾಂತ್ಯಗಳ ಬಗ್ಗೆ ಮಲತಾಯಿ ಧೋರಣೆ ತೋರಲಾಗುತ್ತಿದೆ. ಅತಿಯಾದ ಮಧ್ಯಪ್ರವೇಶ, ಪ್ರಾಂತೀಯ ಸಾಮರ್ಥ್ಯದ ಬಗ್ಗೆ ಮಿತಿ ಮೀರಿದ ಸಂದೇಹ. ಮಾನ್ಯರೆ ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ ಆವಶ್ಯಕತೆಗಳ ಬಗ್ಗೆ ನಮ್ಮೆಲ್ಲರ ಸಹಮತವಿದೆ. ಈಗ ಮಂಡಿಸಿದ ತಿದ್ದುಪಡಿಯನ್ನು ಅಂಗೀಕರಿಸಲು ನಾನು ಸಿದ್ಧನಿದ್ದೇನೆ. ಅರ್ಥಾತ್ ಈ ತಿದ್ದುಪಡಿಯನ್ನು ಒಕ್ಕೂಟ ಚುನಾವಣೆಗಳಿಗೆ ಸೀಮಿತಗೊಳಿಸಿ ಒಕ್ಕೂಟದ ಸಂವಿಧಾನದಲ್ಲಿ ಅಳವಡಿಸಬೇಕು. ಈ ಸಂದರ್ಭದಲ್ಲಿ ನಾನು ಕೇವಲ ಒಂದು ಅಂಶವನ್ನು ಮಾತ್ರ ಪ್ರಸ್ತಾಪಿಸಲು ಬಯಸುತ್ತೇನೆ. ಅಲ್ಪಸಂಖ್ಯಾತರ ಬಗ್ಗೆ ರಚಿಸಿದ ಸಲಹಾ ಸಮಿತಿ ಕೆಳಕಂಡ ಶಿಫಾರಸನ್ನು ಮಾಡಿತು:

"ಚುನಾವಣಾ ನ್ಯಾಯಾಧಿಕರಣದ ನೇಮಕಾತಿಯನ್ನು ಒಳಗೊಂಡಂತೆ, ಒಕ್ಕೂಟದ ಅಥವಾ ಒಂದು ಘಟಕದ ವಿಧಾನ ಸಭೆಯ ಎಲ್ಲ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವನ್ನು, ಒಕ್ಕೂಟದ ಕಾನೂನಿನ ಅನುಸಾರ ಎಲ್ಲ ಪ್ರಕರಣಗಳಲ್ಲೂ, ಒಕ್ಕೂಟ ಅಥವಾ ಸಂದರ್ಭಾನುಸಾರ ಘಟಕಕ್ಕಾಗಿ ನೇಮಕಗೊಂಡ ಚುನಾವಣಾ ಆಯೋಗಕ್ಕೆ ವಹಿಸಬೇಕು. ಇದರ ಪ್ರಕಾರ ಘಟಕದ ಚುನಾವಣೆಗಳ ವಿಚಾರಣೆಗೆ, ಪ್ರತ್ಯೇಕ ಘಟಕ ಆಯೋಗವನ್ನು ನೇಮಕ ಮಾಡಬೇಕು."

ಇದರ ಜೊತೆಗೆ ಸಮ್ಮಿಶ್ರ ಚುನಾವಣೆಗಳ ಮೇಲ್ವಿಚಾರಣೆಗಾಗಿ ಒಕ್ಕೂಟದ ಆಯೋಗವಿರುತ್ತದೆ. ಮಾದರಿ ಪ್ರಾಂತೀಯ ಸಂವಿಧಾನವನ್ನು ಪರಿಶೀಲಿಸುವಾಗ ಸದನವು ಈ ನಿರ್ದಿಷ್ಟ ಶಿಫಾರಸನ್ನು ಅನುಮೋದಿಸಿರುವುದು ಕಂಡುಬಂದಿದೆ. ಈ ಕಂಡಿಕೆಯಲ್ಲಿ ನಿಯಮ ವಿವರಣೆಯನ್ನು ಸದನವು ಅನುಮೋದಿಸಿತು.

ಇದು ಬೇರೆ ಬೇರೆ ಪ್ರದೇಶಗಳ ನ್ಯಾಯಸಮ್ಮತ ವಿಷಯಗಳಲ್ಲಿ ಅತಿಕ್ರಮಣ ಮಾಡಬಹುದೆಂಬ ಅಂಶವನ್ನು ಶ್ರೀ ಕೆ. ಸಂತಾನಮ್ ಅವರು ತಿಳಿಸಿದರು. ನಾನು ಅವರಿಗೆ ತಿಳಿಸುವುದಿಷ್ಟೆ. ಈ ಖಂಡದಲ್ಲಿ ಕೇವಲ ಅಧೀಕ್ಷಣೆ, ನಿಯಂತ್ರಣ ಮತ್ತು ನಿರ್ದೇಶನಕ್ಕೆ ಮಾತ್ರ ಅವಕಾಶವಿದೆ. ಚುನಾವಣೆಗಳ ವಾಸ್ತವಿಕ ಆಯೋಜನೆ ಅಗತ್ಯ ಕಾರ್ಯನಿರ್ವಹಣಾ ವ್ಯವಸ್ಥೆ ಇವೆಲ್ಲವನ್ನೂ ಆಯಾ ಪ್ರಾಂತೀಯ ಸರ್ಕಾರಗಳ ಮೂಲಕ ಮಾಡಿಸಬೇಕು. ಅಧೀಕ್ಷಣೆ ಅಥವಾ ನಿಯಂತ್ರಣ ಮುಂತಾದುವು, ಮತಗಟ್ಟೆಗಳ ಸ್ಥಾಪನೆ ಅಥವಾ ಚುನಾವಣಾಧಿಕಾರಿಗಳ ಆಯ್ಕೆ, ಮತಗಳ ಎಣಿಕೆ, ಮತದಾನ ಕ್ರಮ, ರಹಸ್ಯ ಮತದಾನ ನಿಯಮೋಲ್ಲಂಘನೆಯ ಪ್ರತಿರೋಧ, ಮುಂತಾದ ವಿಷಯಗಳಲ್ಲಿ ಕಾರ್ಯರೂಪಕ್ಕೆ ಬರತಕ್ಕವು. ಇಂತಹ ವಿಷಯಗಳು ಸೂಕ್ತ ರೀತಿಯಲ್ಲಿ ಪಕ್ಷಪಾತ ರಹಿತವಾಗಿ ನಡೆಯತಕ್ಕವು. ಇಲ್ಲವಾದರೆ ಅನ್ಯಾಯ, ಭ್ರಷ್ಟಾಚಾರ ಮುಂತಾದ ಅಹಿತಕರ ಘಟನೆಗಳಿಗೆ ಎಡೆ ಕೊಡಬಹುದಾದ ಸಂಭವವಿದೆ. ಆದುದರಿಂದ ಇಂತಹ ಗುಣಗಳುಳ್ಳ ಪಕ್ಷಪಾತರಹಿತ ನ್ಯಾಯಾಧಿಕರಣದ ಕೈಗೆ ಇವನ್ನು ಒಪ್ಪಿಸಬೇಕು.

**ಮಾನ್ಯ ಉಪಸಭಾಧ್ಯಕ್ಷರು** : ೩೪೪ನೇ ತಿದ್ದುಪಡಿಯನ್ನು ಶ್ರೀ ಪಾಟಸ್ಕರ್ ಅವರು ಪ್ರಸ್ತಾವಿಸಿದ್ದು, ಅದು ಸದನದ ಮುಂದಿದೆ.

"೨೪ನೇ ಖಂಡದಲ್ಲಿ 'ಎಲ್ಲ ಚುನಾವಣೆಗಳು' ಎಂಬ ಪದಗಳಿಗೆ ಬದಲಾಗಿ 'ಎಲ್ಲ ಒಕ್ಕೂಟ ಚುನಾವಣೆಗಳು' ಎಂಬ ಪದಗಳನ್ನು ಪ್ರತಿಯೋಜಿಸಬೇಕು ಮತ್ತು 'ಒಕ್ಕೂಟವಾಗಲಿ ಅಥವಾ ಪ್ರಾಂತೀಯವಾಗಲಿ' ಎಂಬ ಪದಗಳನ್ನು ಬಿಡಬೇಕು."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ಈಗ ತಿದ್ದುಪಡಿಯಾದ ೨೪ನೇ ಖಂಡವನ್ನು ಸದನದ ಮುಂದೆ ಮತಕ್ಕೆ ಹಾಕುತ್ತೇನೆ.

"ಈ ಸಂವಿಧಾನದ ಅಡಿಯಲ್ಲಿ ನಡೆದ ಎಲ್ಲ ಒಕ್ಕೂಟ ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು

ನಿಯಂತ್ರಣವನ್ನು ಚುನಾವಣಾ ನ್ಯಾಯಾಧಿಕರಣದ ನೇಮಕವೂ ಸೇರಿದಂತೆ ಹಾಗೂ ಅಂತಹ ಚುನಾವಣೆಗಳಿಂದ ಉದ್ಭವಿಸಬಹುದಾದ ಅಥವಾ ಅವಕ್ಕೆ ಸಂಬಂಧಿಸಿದ ಸಂದೇಹಗಳು ಮತ್ತು ವಿವಾದಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ವಿಷಯವನ್ನು ರಾಷ್ಟ್ರಪತಿಗಳು ನೇಮಿಸುವ ಚುನಾವಣಾ ಆಯೋಗಕ್ಕೆ ವಹಿಸಬೇಕು.

೨೪ನೇ ಖಂಡ ತಿದ್ದುಪಡಿಯಾದಂತೆ ಅಂಗೀಕಾರವಾಯಿತು.

**ಮಾನ್ಯ ಉಪಸಭಾಧ್ಯಕ್ಷರು** : ನಾಳೆ ಬೆಳಗ್ಗೆ ೧೦ ಗಂಟೆಗೆ ಈ ಕಲಾಪವನ್ನು ಮುಂದೂಡೋಣ.

ಅನಂತರ ಸಭೆಯನ್ನು ೩೦ನೇ ದಿನಾಂಕ ಜುಲೈ ತಿಂಗಳು ೧೯೪೭ರ ಬೆಳಗ್ಗೆ ೧೦ ಗಂಟೆಗೆ ಮುಂದೂಡಲಾಯಿತು.

*[ಹಿಂದುಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*